ಸಂಪುಟ 1, ಸಂಚಿಕೆ 20

ಏಪ್ರಿಲ್ 16-30, 2021

ಉಚಿತ ವಿತರಣೆಗಾಗಿ

# ನ್ಯೂ ಇಂಡಿಯಾ ಸಮಾಚಾರ




ಪಂಚಾಯತಿ ರಾಜ್ ದಿನದ ವಿಶೇಷ ಲೇಖನ

...ಪಂಚಾಯತಿ ರಾಜ್ ವ್ಯವಸ್ಥೆ ನಮ್ಮನ್ನು ಸ್ವಾವಲಂಬನೆ ಭಾರತದತ್ತ ಕರೆದೊಯ್ಯುವತ್ತ

ಪುಟ 6-7

# ಉತ್ತಮ ಆಯ್ಕೆಗೆ ಏಕೀಕೃತ ಪರೀಕ್ಷೆ

ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು ಜಾಗತಿಕ ಮಾನದಂಡಗಳಿಗೆ ಹೊಂದಿಕೆಯಾಗುವಂತೆ ದೇಶದ ಶಿಕ್ಷಣ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆಯನ್ನು ತರುತ್ತದೆ




- ಕೊರೊನಾ ಸಾಂಕ್ರಾಮಿಕದ ಸಂಕಷ್ಟ ಸಮಯದ ನಂತರ, ಈಗ ಮತ್ತೊಮ್ಮೆ ಪರೀಕ್ಷೆಗಳ ಕಾಲ. ಈ ಸಮಯದಲ್ಲಿ ವಿದ್ಯಾರ್ಥಿಗಳು ಹೆಚ್ಚಾಗಿ ಒತ್ತಡಕ್ಕೊಳಗಾಗುತ್ತಾರೆ. ಆದರೆ ಅಧ್ಯಯನವು ಕೇವಲ ಪರೀಕ್ಷೆಗಳಿಗೆ ಮಾತ್ರ ಸೀಮಿತವಾಗದೇ, ಹೊಸದನ್ನು ಕಲಿಯುವುದಕ್ಕೂ ಆದರೆ, ಆತಂಕ ದೂರವಾಗುತ್ತದೆ
- ಪ್ರಧಾನಿ ನರೇಂದ್ರ ಮೋದಿಯವರ ಪುಸ್ತಕ ಪರೀಕ್ಷಾ ವಾರಿಯರ್ಸ್ ಈ ಆಲೋಚನೆಗಳನ್ನು ಸಾಕಾರಗೊಳಿಸಲು ಸಹಾಯ ಮಾಡುತ್ತದೆ. ಪುಸ್ತಕದ ಹೊಸ ಆವೃತ್ತಿ ಬಿಡುಗಡೆಯಾಗಿದೆ, ಇದು ಅಮೆಜಾನ್‌ನಲ್ಲಿ ನಮೋ ಆಪ್‌ನೊಂದಿಗೆ ಲಭ್ಯವಿದೆ. ಕಿಂಡಲ್ ಆವೃತ್ತಿಯನ್ನು ಸಹ ಬಿಡುಗಡೆ ಮಾಡಲಾಗಿದೆ
- ಈ ಆವೃತ್ತಿಯು, ವಿದ್ಯಾರ್ಥಿಗಳು, ಪೋಷಕರು ಮತ್ತು ಶಿಕ್ಷಕರಿಂದ ಅಮೂಲ್ಯವಾದ ಸಲಹೆಗಳೊಂದಿಗೆ ಸಮೃದ್ಧವಾಗಿದೆ. ವಿಶೇಷವಾಗಿ ಪೋಷಕರು ಮತ್ತು ಶಿಕ್ಷಕರ ಹಿತಾಸಕ್ತಿಗಾಗಿ ಹೊಸ ಅಧ್ಯಾಯಗಳನ್ನು ಸೇರಿಸಲಾಗಿದೆ, ಪುಸ್ತಕವು ಹೊಸ ಮಂತ್ರಗಳನ್ನು ಮತ್ತು ಅನೇಕ ಆಸಕ್ತಿದಾಯಕ ಚಟುವಟಿಕೆಗಳನ್ನು ಹೊಂದಿದೆ. ಇದು ಪರೀಕ್ಷೆಗೂ ಮೊದಲು ಒತ್ತಡ ಮುಕ್ತವಾಗಿರುವುದು ಹೇಗೆ ಎಂಬ ಬಗ್ಗೆ ಒತ್ತು ನೀಡುತ್ತದೆ.

**ಪ್ರಧಾನಿ ನರೇಂದ್ರ ಮೋದಿಯವರ ಟ್ವೀಟ್:**
**"ಪರೀಕ್ಷಾ ಯೋಧರ ಈ ಆವೃತ್ತಿಯು ಹೊಸ ಮಂತ್ರಗಳು ಮತ್ತು ಅನೇಕ ಆಸಕ್ತಿದಾಯಕ ಚಟುವಟಿಕೆಗಳನ್ನು ಹೊಂದಿದೆ. ಈ ಪುಸ್ತಕವು ಪರೀಕ್ಷೆಗಳಿಗೂ ಮೊದಲು ಒತ್ತಡ ಮುಕ್ತವಾಗಿರಲು ಸಹಾಯ ಮಾಡುತ್ತದೆ."**

**"ಪರೀಕ್ಷೆಯನ್ನು ಒಂದು ಸಂಭ್ರಮವಾಗಿ ನೋಡಬೇಕು, ಚಿಂತೆಗೀಡು ಮಾಡುವ ವಿಷಯವಾಗಿ ಅಲ್ಲ.**
**ನಾವು ವೈಫಲ್ಯಗಳನ್ನು ಯಶಸ್ಸಿನ ಕೊರತೆ ಎಂದು ಪರಿಗಣಿಸಬಾರದು.**
**ತಾತ್ಕಾಲಿಕ ವೈಫಲ್ಯವು ನಾವು ಜೀವನದಲ್ಲಿ ಯಶಸ್ಸು ಕಾಣಲು ಸಾಧ್ಯವಿಲ್ಲ ಎಂದರ್ಥವಲ್ಲ.**
**ವಾಸ್ತವವಾಗಿ, ಅತ್ಯುತ್ತಮವಾದದ್ದು ನಮ್ಮಿಂದ ಇನ್ನೂ ಬರಬೇಕಾಗಿದೆ. ನಾವು ನಮ್ಮೊಂದಿಗೆ ಸ್ಪರ್ಧಿಸಬೇಕೇ ಹೊರತು ಇತರರೊಂದಿಗಲ್ಲ. ಎಲ್ಲಾ ಸವಾಲುಗಳನ್ನು ಗೆಲ್ಲುವ ಮೂಲಕ ಹೊಳೆಯಿರಿ, ಭವಿಷ್ಯವು ನೀವು ಇಡುವ ಹೆಜ್ಜೆಗಳಲ್ಲೇ ಇದೆ. ನಾವು ಪರೀಕ್ಷೆಯನ್ನು ಯಾವುದೇ ಚಿಂತೆಯಿಲ್ಲದೆ, ನಗುಮೊಗದಿಂದ ಎದುರಿಸೋಣ"**

**-ಪ್ರಧಾನ ಮಂತ್ರಿ ನರೇಂದ್ರ ಮೋದಿ**



**ನಿಮ್ಮ ಪ್ರತಿಯನ್ನು ಈಗಲೇ ಪಡೆದುಕೊಳ್ಳಿ !!!!**



# ನ್ಯೂ ಇಂಡಿಯಾ ಸಮಾಚಾರ

ಸಂಪುಟ 1, ಸಂಚಿಕೆ 20 ಏಪ್ರಿಲ್ 16-30, 2021


## ಒಳಗೆ


| | | |
|---|---|---|
| 1 | ಸಂಪಾದಕೀಯ | ಪುಟ. 02 |
| 2 | ಅಂಚೆ ಪೆಟ್ಟಿಗೆ | ಪುಟ. 03 |
| 3 | ಸುದ್ದಿ ತುಣುಕುಗಳು | ಪುಟ. 04-05 |
| 4 | ವಿಶೇಷ ಲೇಖನ: ಪಂಚಾಯತಿ ರಾಜ್ ದಿನ | ಪುಟ. 06-07 |
| 5 | ಸುಲಭ ಜೀವನ ಸೂಚ್ಯಂಕ | ಪುಟ. 08 |
| 6 | ವ್ಯಕ್ತಿತ್ವ | ಪುಟ. 09 |
| 7 | ವಾಹನಗಳ ಗುಜರಿ ನೀತಿ | ಪುಟ. 10-12 |
| 8 | ಮಳೆ ನೀರು ಹಿಡಿದಿಡಿ | ಪುಟ. 13-15 |
| 9 | ಆಜಾದಿ ಕಾ ಅಮೃತ ಮಹೋತ್ಸವ | ಪುಟ. 16-17 |
| 10 | ಮುಖಪುಟ ಲೇಖನ | ಪುಟ. 18-24 |
| 11 | ಸಂಪುಟ ತೀರ್ಮಾನಗಳು | ಪುಟ. 25 |
| 12 | ಕೊರೊನಾ ವಿರುದ್ಧ ಸಮರ | ಪುಟ. 26-27 |
| 13 | ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ | ಪುಟ. 28-29 |
| 14 | ರಸ್ತೆ ಬದಿ ಸೌಲಭ್ಯಗಳು | ಪುಟ. 30-31 |
| 15 | ಭಾರತ–ಬಾಂಗ್ಲಾದೇಶ ಸಂಬಂಧ | ಪುಟ. 32-35 |
| 16 | ನಾಗರಿಕ ಸೇವಾ ದಿನ | ಪುಟ. 36-37 |
| 17 | ಸಕಾರಾತ್ಮಕ ಕ್ರಮ | ಪುಟ. 38 |
| 18 | ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳು | ಪುಟ. 39 |
| 19 | ಮನ್ ಕಿ ಬಾತ್ | ಪುಟ. 40 |



**ಸಂಪಾದಕರು**
ಜೈದೀಪ್ ಭಟ್ನಾಗರ್
ಪ್ರಧಾನ ಮಹಾನಿರ್ದೇಶಕರು,
ಪಿಐಬಿ, ನವದೆಹಲಿ

**ಸಲಹಾ ಸಂಪಾದಕರು**
ವಿನೋದ್ ಕುಮಾರ್
ಸಂತೋಷ್ ಕುಮಾರ್

**ವಿನ್ಯಾಸಕ**
ರವೀಂದ್ರ ಕುಮಾರ್ ಶರ್ಮ

**ಮುದ್ರಕರು ಮತ್ತು ಪ್ರಕಾಶಕರು**
ಸತ್ಯೇಂದ್ರ ಪ್ರಕಾಶ್
ಪ್ರಧಾನ ಮಹಾನಿರ್ದೇಶಕರು,
ಬ್ಯೂರೋ ಆಫ್ ಔಟ್ ರೀಚ್
ಅಂಡ್ ಕಮ್ಯೂನಿಕೇಷನ್ ಪರವಾಗಿ

**ಮುದ್ರಣಾಲಯ**
ಇನ್‌ಫಿನಿಟಿ ಅಡ್ವರ್ಟೈಸಿಂಗ್
ಸರ್ವಿಸಸ್ ಪ್ರೈ. ಲಿಮಿಟೆಡ್
ಎಫ್‌ಬಿಡಿ–ಒನ್ ಕಾರ್ಪೋರೇಟ್
ಪಾರ್ಕ್, 10ನೇ ಮಹಡಿ,
ನವದೆಹಲಿ–ಫರೀದಾಬಾದ್ ಬಾರ್ಡರ್
ಎನ್‌ಹೆಚ್–1 ಫರೀದಾಬಾದ್–121003

**ಪ್ರಕಾಶಕರು**
ಬ್ಯೂರೋ ಆಫ್ ಔಟ್ ರೀಚ್
ಅಂಡ್ ಕಮ್ಯೂನಿಕೇಷನ್
2ನೇ ಮಹಡಿ, ಸೂಚನಾ ಭವನ,
ನವದೆಹಲಿ–110003

ನ್ಯೂ ಇಂಡಿಯಾ ಸಮಾಚಾರ

RNI No. : DELKAN/2020/78828

response-nis@pib.gov.in

# ಸಂಪಾದಕೀಯ

ಎಲ್ಲರಿಗೂ ನಮಸ್ಕಾರ,

ಕೊರೊನಾ ಸುಮಾರು ಒಂದು ವರ್ಷದಿಂದ ನಮ್ಮ ಸುತ್ತಲೇ ಇದ್ದರೂ, ದೇಶವು ಹೊಸ ದೃಢ ನಿಶ್ಚಯದಿಂದ ಮುಂದುವರಿಯುತ್ತಿದೆ ಮತ್ತು ಯಶಸ್ಸಿನ ಹೊಸ ಆಯಾಮಗಳನ್ನು ಏರುತ್ತಿದೆ. ನ್ಯೂ ಇಂಡಿಯಾ ಸಮಾಚಾರ್ ಸಹ ಓದುಗರಿಂದ ಯಾವಾಗಲೂ ಅದೇ ರೀತಿಯ ಪ್ರೀತಿಯನ್ನು ಪಡೆಯುತ್ತಿದೆ. ಕಳೆದ ವರ್ಷದ ಪ್ರತಿಕೂಲ ಸಂದರ್ಭಗಳಲ್ಲಿಯೂ ಸಹ, ತಂತ್ರಜ್ಞಾನವು ತಮ್ಮ ರಕ್ಷಣೆಗೆ ಬಂದಿದ್ದರಿಂದ ವಿದ್ಯಾರ್ಥಿಗಳ ಅಧ್ಯಯನಕ್ಕೆ ಧಕ್ಕೆಯಾಗಲಿಲ್ಲ. ಶಿಕ್ಷಣ ವ್ಯವಸ್ಥೆಯಲ್ಲಿ ಪರೀಕ್ಷೆಯು ಒಂದು ಪ್ರಮುಖ ಅಂಶವಾಗಿದೆ. ಆದ್ದರಿಂದ, ಸರ್ಕಾರವು 2017 ರಲ್ಲಿ ಮಹತ್ವದ ಸುಧಾರಣೆಗಳನ್ನು ತಂದಿತು. ಲಾರ್ಡ್ ಮಕಾಲೆ ಅವರು ಭಾರತದಲ್ಲಿ ಪರಿಚಯಿಸಿದ ಶಿಕ್ಷಣ ವ್ಯವಸ್ಥೆಯು ಭಾರತೀಯರನ್ನು ಗುಮಾಸ್ತರನ್ನಾಗಿ ಮಾತ್ರ ಮಾಡಲು ಬಯಸಿತ್ತು. ಸ್ವಾತಂತ್ರ್ಯದ ನಂತರವೂ ಅದನ್ನು ಬದಲಾಯಿಸಲು ಯಾವುದೇ ಗಂಭೀರ ಪ್ರಯತ್ನ ಮಾಡಿರಲಿಲ್ಲ.

ಅಂತಹ ಪರಿಸ್ಥಿತಿಯಲ್ಲಿ, 2018 ರಲ್ಲಿ ಸರ್ಕಾರದ ಉಪಕ್ರಮದ ಫಲವಾಗಿ ಅಂತರರಾಷ್ಟ್ರೀಯ ಮಾನದಂಡಗಳನ್ನು ಪೂರೈಸುವ ಒಂದು ಸ್ಥಾಪಿತ ಸಂಸ್ಥೆಯಾಗಿ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ರಚಿಸಲಾಯಿತು, ಇದು ವೈಜ್ಞಾನಿಕ ವಿಧಾನದೊಂದಿಗೆ ಅಭ್ಯರ್ಥಿಗಳ ಶಕ್ತಿ ಮತ್ತು ಸಾಮರ್ಥ್ಯವನ್ನು ನಿರ್ಣಯಿಸಲು ಮೂರು ವರ್ಷಗಳಲ್ಲಿ ಮೂಲಸೌಕರ್ಯವನ್ನು ಸಿದ್ಧಪಡಿಸಿದೆ. ಕೊರೊನಾ ಸಾಂಕ್ರಾಮಿಕ ಸಮಯದಲ್ಲಿ ಆನ್‌ಲೈನ್ ವ್ಯವಸ್ಥೆಯ ಮಹತ್ವವನ್ನು ಚೆನ್ನಾಗಿ ಅರಿತುಕೊಂಡು, ವಿದ್ಯಾರ್ಥಿಗಳ ಶೈಕ್ಷಣಿಕ ವರ್ಷವನ್ನು ಉಳಿಸಲು ಪ್ರತಿ ಪರೀಕ್ಷೆಯನ್ನು ಆನ್‌ಲೈನ್‌ನಲ್ಲಿ ನಡೆಸಲಾಯಿತು. ಎನ್‌ಟಿಎಯ ಅಗತ್ಯ ಮತ್ತು ಯಶೋಗಾಥೆ ಪ್ರಸ್ತುತ ಸಂಚಿಕೆಯ ಮುಖಪುಟ ಲೇಖನವಾಗಿದೆ. ಈ ಸಂಸ್ಥೆ ಕೇವಲ ಪರೀಕ್ಷೆಗಳನ್ನು ಮಾತ್ರ ನಡೆಸುತ್ತಿಲ್ಲ. ಬದಲಿಗೆ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಕೇಂದ್ರ ಬಿಂದುವಾಗಿರುವ ಶೈಕ್ಷಣಿಕ ಅಭ್ಯಾಸಗಳಲ್ಲಿ ಬದಲಾವಣೆಯನ್ನು ತರುವ ಸಾಧನವಾಗುತ್ತಿದೆ.

ಆಜಾದಿ ಕಾ ಅಮೃತ್ ಮಹೋತ್ಸವ ಆಚರಣೆಗಳಲ್ಲಿ ತೆರೆಮರೆಯ ವೀರರ ಕಥೆ; ಭಾರತ-ಬಾಂಗ್ಲಾದೇಶ ಸಂಬಂಧಗಳಲ್ಲಿ ಹೊಸ ಅಧ್ಯಾಯವನ್ನು ಪ್ರಾರಂಭಿಸಿದ ಪ್ರಧಾನ ಮಂತ್ರಿಗಳ ಬಾಂಗ್ಲಾದೇಶ ಭೇಟಿ; ಮಧ್ಯಮ ವರ್ಗದವರ ಜೀವನದಲ್ಲಿ ಬದಲಾವಣೆಯನ್ನು ಸೂಚಿಸುವ ಸುಲಭ ಜೀವನ ಸೂಚ್ಯಂಕ; ವಾಹನ ಮಾಲೀಕರಿಗೆ ಅನುಕೂಲವಾಗುವಂತೆ ಗುಜರಿ ನೀತಿ; ಗ್ರಾಮೀಣ ಪ್ರದೇಶಗಳಲ್ಲಿ ಉಳಿತಾಯವನ್ನು ಉತ್ತೇಜಿಸಲು ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್; ಹೆದ್ದಾರಿಗಳ ಉದ್ದಕ್ಕೂ ಸಾರ್ವಜನಿಕ ಸೌಲಭ್ಯಗಳನ್ನು ಒದಗಿಸುವ ಮಹತ್ವಾಕಾಂಕ್ಷೆಯ ಯೋಜನೆ ಮತ್ತು ಭಾರತೀಯ ಚಿತ್ರರಂಗವನ್ನು ಜಾಗತಿಕ ಮಟ್ಟಕ್ಕೇರಿಸಿದ ಸತ್ಯಜಿತ್ ರೇ ಕುರಿತ ಲೇಖನ ಈ ಸಂಚಿಕೆಯಲ್ಲಿರುವ ಕೆಲವು ಲೇಖನಗಳಾಗಿವೆ.

ಸಂಚಿಕೆಯನ್ನು ಓದಿ, ನಿಮ್ಮ ಪ್ರತಿಕ್ರಿಯೆಗಳನ್ನು ಅದೇ ಪ್ರೀತಿ, ವಿಶ್ವಾಸದಿಂದ ನಮಗೆ ಕಳುಹಿಸಿ.

ವಿಳಾಸ : ಬ್ಯೂರೋ ಆಫ್ ಔಟ್ ರೀಚ್ ಅಂಡ್ ಕಮ್ಯುನಿಕೇಷನ್, ಎರಡನೇ ಮಹಡಿ,
ಸೂಚನಾ ಭವನ, ನವದೆಹಲಿ - 110003

ಇ-ಮೇಲ್: response-nis@pib.gov.in

(ಜೈದೀಪ್ ಭಟ್ನಾಗರ್)

# ಅಂಚೆ ಪೆಟ್ಟಿಗೆ




ನಾನು ನ್ಯೂ ಇಂಡಿಯಾ ಸಮಾಚಾರದ ಪ್ರತಿ ಸಂಚಿಕೆಯನ್ನು ಓದುತ್ತೇನೆ ಮತ್ತು ಸರ್ಕಾರದ ವಿಭಿನ್ನ ಉಪಕ್ರಮಗಳ ಬಗ್ಗೆ ಸಾಕಷ್ಟು ತಿಳಿದುಕೊಳ್ಳುತ್ತೇನೆ. ದೇಶವನ್ನು ಉತ್ತಮಗೊಳಿಸಲು ರಾಜಕೀಯ ಇಚ್ಛಾಶಕ್ತಿ ಮತ್ತು ದಿಟ್ಟತನ ಹೊಂದಿರುವ ಸರ್ಕಾರವಿದೆ ಎಂದು ನನಗೆ ಅಪಾರ ಸಂತೋಷವಾಗಿದೆ. ಸರ್ಕಾರ ಇಲ್ಲಿಯವರೆಗೆ ಮಾಡಿದ ಎಲ್ಲ ಕಾರ್ಯಗಳಿಗಾಗಿ ಸರ್ಕಾರ ಮತ್ತು ಪ್ರಧಾನ ಮಂತ್ರಿವರಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ. ಈ ಸುದ್ದಿಗಳು ಸಮಯಕ್ಕೆ ಸರಿಯಾಗಿ ನಮ್ಮನ್ನು ತಲುಪಲು ಅವಕಾಶ ಮಾಡಿಕೊಟ್ಟ ಎನ್‌ಐಎಸ್ ತಂಡಕ್ಕೂ ನಾನು ಧನ್ಯವಾದ ಅರ್ಪಿಸುತ್ತೇನೆ. ದಯವಿಟ್ಟು ಒಳ್ಳೆಯ ಕೆಲಸವನ್ನು ಮುಂದುವರಿಸಿ.

**ಕುಮಾರ್ ಲೋಕೇಶ್**
**mlokesh8@gmail.com**

## ಡಿಜಿಟಲ್ ಕ್ಯಾಲೆಂಡರ್




**ಭಾರತ ಸರ್ಕಾರದ ಡಿಜಿಟಲ್ ಕ್ಯಾಲೆಂಡರ್ ಮತ್ತು ದಿನಚರಿಯು ಅಧಿಕೃತ ರಜಾದಿನಗಳ ಪಟ್ಟಿ ಮತ್ತು ವಿವಿಧ ಪ್ರಮುಖ ದಿನಾಂಕಗಳ ಜೊತೆಗೆ ಸರ್ಕಾರದ ವಿವಿಧ ಯೋಜನೆಗಳು, ಘಟನೆಗಳು ಮತ್ತು ಪ್ರಕಟಣೆಗಳ ಬಗ್ಗೆ ಇತ್ತೀಚಿನ ಮಾಹಿತಿಯನ್ನು ಒದಗಿಸುತ್ತದೆ**

ಇದನ್ನು ಗೂಗಲ್ ಪ್ಲೇ ಸ್ಟೋರ್ ಮತ್ತು ಐಒಎಸ್‌ನಿಂದ ಡೌನ್ಲೋಡ್ ಮಾಡಬಹುದು

ಗೂಗಲ್ ಪ್ಲೇ ಸ್ಟೋರ್ ಲಿಂಕ್
https://play.google.com/store/apps/details?id=in.gov.calendar

ಐಒಎಸ್ ಲಿಂಕ್
https://apps.apple.com/in/app/goi-calendar/id1546365594

**https://goicalendar.gov.in/**

ನ್ಯೂ ಇಂಡಿಯಾ ಸಮಾಚಾರ್ ನವ ಭಾರತವನ್ನು ನಿರ್ಮಿಸಲು ಪ್ರಧಾನಿ ನರೇಂದ್ರ ಮೋದಿಯವರ ನಾಯಕತ್ವದಲ್ಲಿ ಭಾರತ ಸರ್ಕಾರ ಕೈಗೊಂಡ ಉಪಕ್ರಮಗಳ ಕನ್ನಡಿಯಾಗಿದೆ. ನಾವು ಸಾಕಷ್ಟು ಮಾಹಿತಿಯನ್ನು ಪಡೆದಿದ್ದೇವೆ, ಇದಕ್ಕಾಗಿ ನಿಮಗೆ ಧನ್ಯವಾದಗಳು ಮತ್ತು ಈ ಪತ್ರಿಕೆಯ ಯಶಸ್ಸಿಗೆ ನನ್ನ ಶುಭಾಶಯಗಳನ್ನು ತಿಳಿಸುತ್ತೇನೆ.

**ಸಿಎಚ್. ಶಕ್ತಿ ಸಿಂಗ್, ವಕೀಲರು**
**shaktisinghadv@gmail.com**

ನ್ಯೂ ಇಂಡಿಯಾ ಸಮಾಚಾರದ ಪ್ರಸ್ತುತ ಸಂಚಿಕೆಯನ್ನು ಓದಲು ಸಂತೋಷವಾಗಿದೆ. ಕೇಂದ್ರ ಸರ್ಕಾರದ ಕಲ್ಯಾಣ ಯೋಜನೆಗಳನ್ನು ಅತ್ಯಂತ ಪರಿಣಾಮಕಾರಿ ಮತ್ತು ಆಕರ್ಷಕ ರೀತಿಯಲ್ಲಿ ಪ್ರಸ್ತುತಪಡಿಸಿದ ಈ ಸಂಚಿಕೆಯು ನಿಜಕ್ಕೂ ಪ್ರಶಂಸೆಗೆ ಅರ್ಹವಾಗಿದೆ. ಪ್ರಧಾನಿ ನರೇಂದ್ರ ಮೋದಿಯವರ ಮನ್ ಕಿ ಬಾತ್ ರೇಡಿಯೋ ಕಾರ್ಯಕ್ರಮದ ಸಾರಾಂಶವನ್ನು ಓದುವುದೂ ಒಂದು ಉತ್ತಮ ಅನುಭವವಾಗಿದೆ. ಪತ್ರಿಕೆಗಾಗಿ ಬರೆಯುವ ಮೂಲಕ ನಾನು ಕೊಡುಗೆ ನೀಡಲು ಬಯಸುತ್ತೇನೆ.

**ಮಾಧವಿ ಕುಲಕರ್ಣಿ**
**kulmadhavi@gmail.com**

ಬಹಳಷ್ಟು ಕೆಲಸಗಳನ್ನು ಮಾಡಲಾಗುತ್ತಿದೆ, ಇದಕ್ಕಾಗಿ ನಾವು ತುಂಬಾ ಕೃತಜ್ಞರಾಗಿರುತ್ತೇವೆ. ಭಾರತೀಯ ಆಟಿಕೆಗಳು ಅಳಿವಿನಂಚಿನಲ್ಲಿವೆ ಎಂದು ಕೆಲವೊಮ್ಮೆ ಅನಿಸುತ್ತಿತ್ತು, ಆದರೆ ಸರ್ಕಾರದ ಪ್ರಯತ್ನದಿಂದಾಗಿ, ಭಾರತೀಯ ಆಟಿಕೆಗಳು ಮತ್ತೊಮ್ಮೆ ಜನರನ್ನು ಸೆಳೆಯುತ್ತಿವೆ. ಭಾರತೀಯ ಆಟಿಕೆಗಳು ಒಂದು ದಿನ ನಮ್ಮ ಜೀವನದಲ್ಲಿ ಮರಳಿ ಬರುತ್ತವೆ ಎಂದು ನಾನು ಭಾವಿಸುತ್ತೇನೆ.

**ಶಶಿ ಸಿಂಗ್**
**shashi1gs@gmail.com**

ಮಾಧ್ಯಮಗಳಲ್ಲಿ ತಪ್ಪು ಮಾಹಿತಿಯ ಬದಲು ಭಾರತ ಸರ್ಕಾರ ಮಾಡುತ್ತಿರುವ ನಿಜವಾದ ಕೆಲಸದ ಬಗ್ಗೆ ದೇಶ ಮತ್ತು ಜಗತ್ತಿಗೆ ತಿಳಿಸಲು ಮುಂದಾಗಿರುವುದು ನನಗೆ ತುಂಬಾ ಖುಷಿ ತಂದಿದೆ. ನನ್ನ ಹೃದಯಾಂತರಾಳದಿಂದ ನಿಮಗೆ ಧನ್ಯವಾದಗಳು. ದಯವಿಟ್ಟು ಇದನ್ನು ಮುಂದುವರಿಸಿ ಮತ್ತು ಸುದ್ದಿಗಳ ವಿಷಯದಲ್ಲಿ ತಟಸ್ಥ ನಿಲುವು ತಳೆಯಿರಿ. ಪಕ್ಷಪಾತದ ದೃಷ್ಟಿಕೋನಗಳಿಗೆ ಬದಲಾಗಿ ಜನರಿಗೆ ನಿಜವಾದ ಸುದ್ದಿಗಳು ಬೇಕು.

**ಮಿತ್ರಾ ಪಂಚಲ್**
**mitrapanchal@gmail.com;**

ಸುದ್ದಿ ತುಣುಕುಗಳು

# ಹಳೆಯ ಬಲ್ಬ್ ನೀಡಿ 10 ರೂ.ಗೆ ಎಲ್ಇಡಿ ಬಲ್ಬ್ ಪಡೆಯಿರಿ



ಕೈಗೆಟುಕುವ ಬೆಲೆಯ ಎಲ್ಇಡಿ ಬಲ್ಬ್‌ಗಳೊಂದಿಗೆ ದೇಶದ ಪ್ರತಿಯೊಂದು ಮನೆಯನ್ನೂ ಬೆಳಗಿಸಲು ಸರ್ಕಾರ ಗ್ರಾಮ ಉಜಾಲಾ ಎಂಬ ಹೊಸ ಕಾರ್ಯಕ್ರಮವನ್ನು ಆರಂಭಿಸಿದೆ. ಈ ಕಾರ್ಯಕ್ರಮದಡಿ ಗ್ರಾಮೀಣ ಪ್ರದೇಶಗಳಲ್ಲಿ ಕೆಲಸ ಮಾಡುವ ಸ್ಥಿತಿಯಲ್ಲಿರುವ ಹಳೆಯ ಬಲ್ಬ್‌ಗಳಿಗೆ ಬದಲಾಗಿ ಎಲ್ಇಡಿ ಬಲ್ಬ್‌ಗಳನ್ನು ತಲಾ 10 ರೂ. ಗಳಿಗೆ ನೀಡಲಾಗುತ್ತದೆ. ಪ್ರತಿ ಮನೆಗೂ 7 ಮತ್ತು 12 ವ್ಯಾಟ್‌ಗಳ 5 ಎಲ್ಇಡಿ ಬಲ್ಬ್‌ಗಳು ಸಿಗುತ್ತವೆ. ಕೇಂದ್ರ ವಿದ್ಯುತ್ ಖಾತೆ ರಾಜ್ಯ ಸಚಿವ (ಸ್ವತಂತ್ರ ಉಸ್ತುವಾರಿ) ಆರ್ ಕೆ ಸಿಂಗ್ ಈ ಯೋಜನೆಗೆ ಬಿಹಾರದ ಆರಾ ಜಿಲ್ಲೆಯಲ್ಲಿ ಚಾಲನೆ ನೀಡಿದರು. ಮೊದಲ ಹಂತದಲ್ಲಿ 1.5 ಕೋಟಿ ಎಲ್ಇಡಿ ಬಲ್ಬ್‌ಗಳನ್ನು ಆರಾ (ಬಿಹಾರ), ವಾರಾಣಸಿ (ಉತ್ತರ ಪ್ರದೇಶ), ವಿಜಯವಾಡ (ಆಂಧ್ರಪ್ರದೇಶ), ನಾಗ್ಪುರ (ಮಹಾರಾಷ್ಟ್ರ) ಮತ್ತು ಪಶ್ಚಿಮ ಗುಜರಾತ್‌ನ ಹಳ್ಳಿಗಳಲ್ಲಿ ವಿತರಿಸಲಾಗುವುದು. ಇದು ಭಾರತದಲ್ಲಿ ಇಂತಹ ಮೊದಲ ಕಾರ್ಯಕ್ರಮವಾಗಿದೆ. ಗ್ರಾಮ ಉಜಾಲಾ ಕಾರ್ಯಕ್ರಮವು ಭಾರತದ ಹವಾಮಾನ ಬದಲಾವಣೆ ನೀತಿಯ ಮೇಲೆ ಗಮನಾರ್ಹ ಪರಿಣಾಮ ಬೀರುತ್ತದೆ. ಭಾರತದ ಎಲ್ಲಾ 300 ಮಿಲಿಯನ್ ಬಲ್ಬ್‌ಗಳನ್ನು ಬದಲಾಯಿಸಿದರೆ, ಒಟ್ಟು ಇಂಧನ ಉಳಿತಾಯವು ವರ್ಷಕ್ಕೆ 40,743 ಮಿಲಿಯನ್ ಕಿಲೋವ್ಯಾಟ್ ಮತ್ತು ವರ್ಷಕ್ಕೆ 37 ಮಿಲಿಯನ್ ಟನ್‌ಗಳಷ್ಟು ಇಂಗಾಲ ಕಡಿಮೆಯಾಗುತ್ತದೆ.

## ಎಂಎಸ್‌ಪಿಯಲ್ಲಿ ಭತ್ತ ಖರೀದಿಯ ಲಾಭ ಪಡೆದ 1 ಕೋಟಿಗೂ ಹೆಚ್ಚು ರೈತರು

ರೈತರಿಗೆ ಬೆಳೆಯ ಸರಿಯಾದ ಮೌಲ್ಯವನ್ನು ಒದಗಿಸುವ ಯಾವುದೇ ಅವಕಾಶವನ್ನೂ ಸರ್ಕಾರ ಕಳೆದುಕೊಳ್ಳುವುದಿಲ್ಲ. 2020-21ರ ಮುಂಗಾರಿನಲ್ಲಿ ಭತ್ತದ ಖರೀದಿ ಕುರಿತು ಇತ್ತೀಚೆಗೆ ಬಿಡುಗಡೆಯಾದ ಮಾಹಿತಿಯ ಪ್ರಕಾರ, 21 ರಾಜ್ಯಗಳ 100.92 ಲಕ್ಷ ರೈತರಿಂದ 685.39 ಲಕ್ಷ ಮೆಟ್ರಿಕ್ ಟನ್ ಭತ್ತ ಖರೀದಿಸಲಾಗಿದೆ. ಕಳೆದ ವರ್ಷದ ಇದೇ ಅವಧಿಯ 603.79 ಲಕ್ಷ ಮೆಟ್ರಿಕ್ ಟನ್ ಖರೀದಿಗೆ ಹೋಲಿಸಿದರೆ ಇದು ಶೇಕಡಾ 13.51 ರಷ್ಟು ಹೆಚ್ಚಾಗಿದೆ. ಪಂಜಾಬ್ ರಾಜ್ಯವೊಂದರಲ್ಲೇ 202.82 ಲಕ್ಷ ಮೆಟ್ರಿಕ್ ಟನ್ ಖರೀದಿಸಲಾಗಿದೆ. ಇದು ಒಟ್ಟು ಖರೀದಿಯ ಶೇಕಡಾ 29.59 ಆಗಿದೆ. ರೈತರಿಗೆ ಈಗಾಗಲೇ ಎಂಎಸ್‌ಪಿ ಮೌಲ್ಯ 1,29,402.60 ಕೋಟಿ ರೂ. ಪಾವತಿಸಲಾಗಿದೆ. ಮುಂಗಾರು ಮಾರುಕಟ್ಟೆ ಹಂಗಾಮು 2020-21 ಮತ್ತು ಹಿಂಗಾರು ಮಾರುಕಟ್ಟೆ ಹಂಗಾಮು 2021 ರ ಅವಧಿಯಲ್ಲಿ, ಸರ್ಕಾರವು 3,60,238.73 ಮೆ.ಟನ್ ಹೆಸರು, ಉದ್ದು, ತೊಗರಿ, ಕಡಲೆ, ನೆಲಗಡಲೆ ಮತ್ತು ಸೋಯಾಬೀನ್ ಅನ್ನು ಖರೀದಿಸಿತು. ಅಂತೆಯೇ, 26,719.51 ಕೋಟಿ ರೂ. ಮೌಲ್ಯದ 91,86,803 ಹತ್ತಿ ಬೇಲ್‌ಗಳನ್ನು ಖರೀದಿಸಲಾಗಿದ್ದು ಇದರಿಂದ 18,97,005 ರೈತರಿಗೆ ಲಾಭವಾಗಿದೆ.

## ಮೇರಾ ರೇಷನ್ ಆಪ್‌ನಿಂದ ಪಡಿತರ ಚೀಟಿಗಳು ಮತ್ತು ಪಡಿತರ ಅಂಗಡಿಗಳ ಮಾಹಿತಿ

ಗ್ರಾಹಕರ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರನಾ ಸಚಿವಾಲಯವು ಮೇರಾ ರೇಷನ್ ಮೊಬೈಲ್ ಅಪ್ಲಿಕೇಶನ್ ಬಿಡುಗಡೆ ಮಾಡಿದೆ. ಜೀವನೋಪಾಯಕ್ಕಾಗಿ ಹೊಸ ಪ್ರದೇಶಗಳಿಗೆ ತೆರಳುವ ಪಡಿತರ ಚೀಟಿ ಹೊಂದಿರುವವರಿಗೆ ಈ ಅಪ್ಲಿಕೇಶನ್ ವಿಶೇಷವಾಗಿ ಪ್ರಯೋಜನವನ್ನು ನೀಡುತ್ತದೆ. ಇದು ವಲಸೆ ಕಾರ್ಮಿಕರ ಜೀವನವನ್ನು ಸುಲಭಗೊಳಿಸುತ್ತದೆ. ಆಧಾರ್ ಪರಿಶೀಲನೆಗಾಗಿ ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ಲಭ್ಯವಿರುವ ಈ ಆ್ಯಪ್‌ನ ಸಹಾಯದಿಂದ ದೇಶದ ಯಾವ ಭಾಗದಲ್ಲಾದರೂ ಪಡಿತರವನ್ನು ಖರೀದಿಸಬಹುದು. ಶೀಘ್ರದಲ್ಲೇ ಈ ಸೇವೆ ಇತರ 14 ಭಾರತೀಯ ಭಾಷೆಗಳಲ್ಲಿ ಲಭ್ಯವಾಗಲಿದೆ. ಈ ಅಪ್ಲಿಕೇಶನ್‌ನ ಸಹಾಯದಿಂದ, ಹತ್ತಿರದ ಪಡಿತರ ಅಂಗಡಿಯ ಬಗ್ಗೆ ಮಾಹಿತಿಯನ್ನು ಪಡೆಯಬಹುದು. ಈ ಅಪ್ಲಿಕೇಶನ್ ಸರ್ಕಾರದ ಒಂದು ರಾಷ್ಟ್ರ, ಒಂದು ಪಡಿತರ ಚೀಟಿ ಯೋಜನೆಯ ಭಾಗವಾಗಿದೆ ಆಗಸ್ಟ್ 2019 ರಲ್ಲಿ ನಾಲ್ಕು ರಾಜ್ಯಗಳಿಂದ ಇದನ್ನು ಪ್ರಾರಂಭಿಸಲಾಯಿತು. ಪ್ರಸ್ತುತ, 32 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಇದರ ಲಾಭ ಪಡೆಯುತ್ತಿವೆ. 69 ಕೋಟಿಗೂ ಹೆಚ್ಚು ಜನರು ಪಡಿತರ ಚೀಟಿ ಪೋರ್ಟಬಿಲಿಟಿ ಪ್ರಯೋಜನಗಳನ್ನು ಪಡೆದಿದ್ದಾರೆ. ಪ್ರತಿ ತಿಂಗಳು, 1.5 ಕೋಟಿಗೂ ಹೆಚ್ಚು ಜನರು ಇದರೊಂದಿಗೆ ಸಂಪರ್ಕ ಹೊಂದುತ್ತಿದ್ದಾರೆ.

# ಅಟಲ್ ಟಿಂಕರಿಂಗ್ ಲ್ಯಾಬ್‌ನ

## ವಿದ್ಯಾರ್ಥಿಗಳಿಗೆ ಅಮೆಜಾನ್ ವೆಬ್ ಸೇವೆಗಳಿಂದ ಕ್ಲೌಡ್ ಕಂಪ್ಯೂಟಿಂಗ್ ಕಲಿಕೆ



ಅನೇಕ ಬಾರಿ ಮಕ್ಕಳು ಮತ್ತು ಯುವಕರು ತಮ್ಮ ಕಲ್ಪನೆಗಳಿಗೆ ಜೀವ ತುಂಬುತ್ತಾರೆ ಮತ್ತು ಹೊಸ ಗ್ಯಾಜೆಟ್‌ಗಳು ಅಥವಾ ಸಾಧನಗಳನ್ನು ಆವಿಷ್ಕರಿಸುತ್ತಾರೆ. ಅಟಲ್ ಇನ್ನೋವೇಶನ್ ಮಿಷನ್, ಮಕ್ಕಳು ಮತ್ತು ಯುವಜನರಲ್ಲಿ ಸೃಜನಶೀಲ ಪ್ರತಿಭೆಯನ್ನು ಉತ್ತೇಜಿಸಲು ಪ್ರಯತ್ನಿಸುತ್ತಿದೆ. ವಿಶ್ವದ ಪ್ರಮುಖ ಆನ್‌ಲೈನ್ ವೇದಿಕೆಯಾದ ಅಮೆಜಾನ್ ವೆಬ್ ಸರ್ವೀಸಸ್ ನೊಂದಿಗೆ ವಿದ್ಯಾರ್ಥಿಗಳಿಗೆ ಕ್ಲೌಡ್ ಕಂಪ್ಯೂಟಿಂಗ್ ಕೌಶಲ್ಯಗಳನ್ನು ಕಲಿಸುವ ಉದ್ದೇಶದಿಂದ ಕೈಜೋಡಿಸಲಾಗಿದೆ. ವಿದ್ಯಾರ್ಥಿಗಳಿಗೆ ಡಿಜಿಟಲ್ ಮತ್ತು ವೆಬ್ ಆಧಾರಿತ ತಂತ್ರಜ್ಞಾನವನ್ನು ಒದಗಿಸಲು ಅಮೆಜಾನ್ ಇತ್ತೀಚೆಗೆ ನೀತಿ ಆಯೋಗದ ಜೊತೆ ಒಪ್ಪಂದ ಮಾಡಿಕೊಂಡಿದೆ. ಮಿಷನ್ ನಿರ್ದೇಶಕ ಆರ್ ರಮಣನ್ ಪ್ರಕಾರ, ಅಮೆಜಾನ್ ವೆಬ್ ಸರ್ವೀಸಸ್ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಡಿಜಿಟಲ್ ಮತ್ತು ವೆಬ್ ಆಧಾರಿತ ತಂತ್ರಜ್ಞಾನವನ್ನು ಒದಗಿಸುತ್ತದೆ. ಇದರಿಂದ ಅವರ ಸೃಜನಶೀಲತೆ ಮತ್ತು ನಾವೀನ್ಯದ ಕೌಶಲಗಳು ಹೆಚ್ಚಾಗುತ್ತವೆ.

## ಒಂದು ವರ್ಷದಲ್ಲಿ 65 ಲಕ್ಷಕ್ಕೂ ಹೆಚ್ಚು ಮಂದಿ ಅಟಲ್ ಪಿಂಚಣಿ ಯೋಜನೆಗೆ ಸೇರ್ಪಡೆ



ವೃದ್ಧಾಪ್ಯದಲ್ಲಿ ಹಣಕಾಸಿನ ಮುಗ್ಗಟ್ಟು ದೇಶದಲ್ಲಿ ಹೆಚ್ಚಿನ ಸಂಖ್ಯೆಯ ಜನರನ್ನು ಪೀಡಿಸುತ್ತಿವೆ. ಈ ಸಮಸ್ಯೆಯನ್ನು ಪರಿಹರಿಸುವ ಸಲುವಾಗಿ, ಪ್ರಧಾನಿ ನರೇಂದ್ರ ಮೋದಿ ಅವರು ಜೂನ್ 1, 2015 ರಂದು ಅಟಲ್ ಪಿಂಚಣಿ ಯೋಜನೆ (ಎಪಿವೈ) ಅನ್ನು ಪ್ರಾರಂಭಿಸಿದರು, ಇದು ಉತ್ತಮ ಫಲಿತಾಂಶವನ್ನು ನೀಡುತ್ತಿದೆ. ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರವು ಫೆಬ್ರವರಿ 2021 ರಲ್ಲಿ 2.72 ಕೋಟಿ ಜನರು ತಮ್ಮ ಖಾತೆಗಳನ್ನು ಎಪಿವೈ ಅಡಿಯಲ್ಲಿ ತೆರೆದಿದ್ದಾರೆ ಎಂದು ಡೇಟಾ ಬಿಡುಗಡೆ ಮಾಡಿದೆ. ಕಳೆದ ವರ್ಷ ಫೆಬ್ರವರಿಯಲ್ಲಿ ಖಾತೆದಾರರ ಸಂಖ್ಯೆ 2.07 ಕೋಟಿ, ಅಂದರೆ ಕಳೆದ ಒಂದು ವರ್ಷದಲ್ಲಿ ಶೇಕಡಾ 31.48 ರಷ್ಟು ಏರಿಕೆಯಾಗಿದೆ. ಈ ಯೋಜನೆಯಡಿಯಲ್ಲಿ, ಒಬ್ಬ ವ್ಯಕ್ತಿಯು 60 ವರ್ಷ ದಾಟಿದ ನಂತರ ತಿಂಗಳಿಗೆ 1,000 ರೂ.ಗಳಿಂದ 5,000 ರೂ.ವರೆಗೆ ಪಿಂಚಣಿಯಾಗಿ ಪಡೆಯುತ್ತಾನೆ. ಇದನ್ನು ಅವನು ನೀಡಿದ ಕೊಡುಗೆಯ ಆಧಾರದ ಮೇಲೆ ಲೆಕ್ಕಹಾಕಲಾಗುತ್ತದೆ. ಮಾಸಿಕ ಅತ್ಯಲ್ಪ ಮೊತ್ತದ ಠೇವಣಿ ಇರಿಸುವ ಮೂಲಕ ಅಟಲ್ ಪಿಂಚಣಿ ಯೋಜನೆಯಡಿ ಪಿಂಚಣಿಯ ಲಾಭವನ್ನು ಪಡೆಯಬಹುದು, ಪಾಲಿಸಿದಾರರ ಕುಟುಂಬವು ಅವನ / ಅವಳ ಅಕಾಲಿಕ ಮರಣದ ಸಂದರ್ಭದಲ್ಲಿ ಪ್ರಯೋಜನಗಳನ್ನೂ ಪಡೆಯುತ್ತದೆ.

## ಬೆಂಗಳೂರಿನಲ್ಲಿ ದೇಶದ ಮೊದಲ ಕೇಂದ್ರೀಕೃತ ಎಸಿ ರೈಲ್ವೆ ಟರ್ಮಿನಲ್



ಬೆಂಗಳೂರು ನಗರವು ಈಗ ದೇಶದ ಮೊದಲ ಸಂಪೂರ್ಣ ಹವಾನಿಯಂತ್ರಿತ ಅತ್ಯಾಧುನಿಕ ರೈಲ್ವೆ ನಿಲ್ದಾಣವನ್ನು ಹೊಂದಿದೆ. 314 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗಿರುವ ಈ ಟರ್ಮಿನಲ್‌ಗೆ ದೇಶದ ಗಣ್ಯ ಸಿವಿಲ್ ಎಂಜಿನಿಯರ್ ಎಂ ವಿಶ್ವೇಶ್ವರಯ್ಯ ಅವರ ಹೆಸರಿಡಲಾಗಿದೆ. 42,000 ಚದರ ಮೀಟರ್ ವಿಸ್ತೀರ್ಣದಲ್ಲಿರುವ ಟರ್ಮಿನಲ್ 50,000 ಪ್ರಯಾಣಿಕರನ್ನು ನಿಭಾಯಿಸಬಲ್ಲದು. ಇದನ್ನು ಈ ವರ್ಷದ ಫೆಬ್ರವರಿಯಲ್ಲಿ ಉದ್ಘಾಟಿಸಲು ನಿರ್ಧರಿಸಲಾಗಿತ್ತು, ಟರ್ಮಿನಲ್‌ನ ಕಾರ್ಯಾಚರಣೆಯು ಒಂದು ತಿಂಗಳ ಕಾಲ ವಿಳಂಬವಾಗಿದೆ. ರೈಲ್ವೆಯ ಎಲ್ಲಾ ವರ್ಗದ ಪ್ರಯಾಣಿಕರಿಗೆ ಉತ್ತಮ ಸೌಕರ್ಯಗಳನ್ನು ಒದಗಿಸುವುದು ಪ್ರಧಾನಮಂತ್ರಿಯವರ ನೇತೃತ್ವದ ಸರ್ಕಾರದ ಪ್ರಯತ್ನವಾಗಿದೆ. ■

# "ನಾವು ನಿರಂತರವಾಗಿ ಸಶಕ್ತ, ಪಾರದರ್ಶಕ ಮತ್ತು ಪರಿಣಾಮಕಾರಿ ಪಂಚಾಯತಿ ರಾಜ್ ವ್ಯವಸ್ಥೆಯತ್ತ ಸಾಗುತ್ತಿದ್ದೇವೆ"



**ನರೇಂದ್ರ ಸಿಂಗ್ ತೋಮರ್**
ಕೇಂದ್ರ ಗ್ರಾಮೀಣಾಭಿವೃದ್ಧಿ, ಕೃಷಿ ಮತ್ತು ರೈತರ ಕಲ್ಯಾಣ ಹಾಗೂ ಪಂಚಾಯತಿ ರಾಜ್ ಸಚಿವರು

> "ಬಲವಾದ, ಸಂಪನ್ಮೂಲಭರಿತ ಮತ್ತು ಪಾರದರ್ಶಕ ಪಂಚಾಯತಿ ರಾಜ್ ವ್ಯವಸ್ಥೆಯು ಸ್ವಾವಲಂಬಿ ಭಾರತ ನಿರ್ಮಾಣದ ಸಂಕಲ್ಪವನ್ನು ಈಡೇರಿಸುವ ಮಾರ್ಗವಾಗಿದೆ"

ಭಾರತದಲ್ಲಿ ರಾಮ ರಾಜ್ಯ ಸ್ಥಾಪನೆಯ ಕನಸನ್ನು ಮತ್ತೊಮ್ಮೆ ಕಂಡವರು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು. ಇದರ ತಳಹದಿಯು ದೇಶದ ಒಂದೂವರೆ ಲಕ್ಷಕ್ಕೂ ಹೆಚ್ಚು ಹಳ್ಳಿಗಳಲ್ಲಿ ಬಲವಾದ ಪಂಚಾಯತಿ ರಾಜ್ ವ್ಯವಸ್ಥೆಯನ್ನು ಹೊಂದಿರುವ ಗ್ರಾಮೀಣಾಭಿವೃದ್ಧಿಯ ಯೋಜಿತ ಮಾದರಿಯಾಗಿದೆ. ನಿಜವಾದ ಪ್ರಜಾಪ್ರಭುತ್ವವು ರಾಷ್ಟ್ರ ರಾಜಧಾನಿಯಲ್ಲಿ ಕುಳಿತು ನಡೆಯುವ ಸರ್ಕಾರದಲ್ಲಿಲ್ಲ, ಬದಲಿಗೆ ಹಳ್ಳಿಗಳ ಪ್ರತಿಯೊಬ್ಬ ವ್ಯಕ್ತಿಯ ಸಹಕಾರದೊಂದಿಗೆ ಕಾರ್ಯನಿರ್ವಹಿಸುತ್ತದೆ ಎಂದು ಗಾಂಧೀಜಿ ಯಾವಾಗಲೂ ಹೇಳುತ್ತಿದ್ದರು.

ಹಳ್ಳಿಗಳ ಅಭಿವೃದ್ಧಿಯಲ್ಲಿ ಮತ್ತು ಪ್ರಾಚೀನ ಕಾಲದಿಂದಲೂ ನಮ್ಮ ದೇಶದಲ್ಲಿ ಸಾಮಾಜಿಕ ವ್ಯವಸ್ಥೆಯನ್ನು ಕಾಪಾಡಿಕೊಳ್ಳುವಲ್ಲಿ ಪಂಚಾಯಿತಿಗಳು ಪ್ರಮುಖ ಪಾತ್ರ ವಹಿಸಿವೆ. ಈ ಪಂಚಾಯತ್‌ಗಳಿಗೆ ಯಾವುದೇ ಸಾಂವಿಧಾನಿಕ ರಚನೆ ಇರಲಿಲ್ಲವಾದರೂ, ಪಂಚರು ಮತ್ತು ಪಂಚಾಯತ್‌ಗಳು ಹಳ್ಳಿಗಳಲ್ಲಿ ಅಭಿವೃದ್ಧಿ ಮತ್ತು ಪರಸ್ಪರ ವಿವಾದಗಳನ್ನು ಬಗೆಹರಿಸಲು ಬಲವಾದ ಆಧಾರಸ್ತಂಭವಾಗಿವೆ. ಭಾರತವು ಶತಮಾನಗಳ ಕಾಲ ವಿದೇಶಿ ಆಕ್ರಮಣವನ್ನು ಎದುರಿಸಿತು. ಆದರೆ ಆಕ್ರಮಣಕಾರರಿಗೆ ಈ ಪಂಚಾಯತ್‌ಗಳ ಮೂಲಕ ಹಳ್ಳಿಗಳಲ್ಲಿ ಬೇರೂರಿರುವ ನಮ್ಮ ಬಲವಾದ ಗ್ರಾಮೀಣ ಆರ್ಥಿಕತೆ, ಸಾಮಾಜಿಕ ಸಾಮರಸ್ಯ ಮತ್ತು ಏಕತೆಯನ್ನು ಮುರಿಯಲು ಸಾಧ್ಯವಾಗಲಿಲ್ಲ.

ಬ್ರಿಟಿಷ್ ವೈಸ್ ರಾಯ್ ಲಾರ್ಡ್ ರಿಪ್ಪನ್ ಸ್ವತಃ ಪ್ರಾಚೀನ ಭಾರತೀಯ ಪಂಚಾಯತಿ ರಾಜ್ ವ್ಯವಸ್ಥೆಯ ಅಭಿಮಾನಿಯಾಗಿದ್ದರು. 1882 ರಲ್ಲಿ ಬ್ರಿಟಿಷ್ ಆಡಳಿತದ ಸಮಯದಲ್ಲಿ ಭಾರತದಲ್ಲಿ ಅವರು ಪ್ರಾರಂಭಿಸಿದ ಗ್ರಾಮ ಮಟ್ಟದ ಸ್ಥಳೀಯ ಸ್ವಯಂ-ಆಡಳಿತವು ನಮ್ಮ ಪ್ರಾಚೀನ ಪಂಚಾಯತಿ ರಾಜ್ ವ್ಯವಸ್ಥೆಯನ್ನು ಆಧರಿಸಿತ್ತು.

ಸಂವಿಧಾನದ 73 ನೇ ತಿದ್ದುಪಡಿಯ ಮೂಲಕ ದೇಶದ ಪಂಚಾಯತಿ ರಾಜ್ ವ್ಯವಸ್ಥೆಗೆ ಮೂಲ ಮತ್ತು ಸಶಕ್ತ ಚೌಕಟ್ಟನ್ನು ಒದಗಿಸಲಾಗಿದೆ. ಈ ಕಾಯ್ದೆ 1993 ರ ಏಪ್ರಿಲ್ 24 ರಂದು ದೇಶದಲ್ಲಿ ಜಾರಿಗೆ ಬಂದಿತು. ಆದ್ದರಿಂದ ನಾವು ಈ ದಿನವನ್ನು ಪಂಚಾಯತಿ ರಾಜ್ ದಿನವಾಗಿ ಆಚರಿಸುತ್ತೇವೆ.

2,55,487 ಗ್ರಾಮ ಪಂಚಾಯತ್‌ಗಳು ಮತ್ತು ದೇಶದ ಸುಮಾರು ಏಳೂವರೆ ಸಾವಿರ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳ ಸಾಂವಿಧಾನಿಕ ಸಶಕ್ತ ರಚನೆಯು ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆಯ ಬಲವಾದ ಆಧಾರಸ್ತಂಭವಾಗಿದೆ. ಪ್ರತಿ ಐದು ವರ್ಷಗಳಿಗೊಮ್ಮೆ ಗ್ರಾಮಸ್ಥರು ಗ್ರಾಮ ಆಡಳಿತವನ್ನು ತಮ್ಮ ಮತದಿಂದ ಆಯ್ಕೆ ಮಾಡುತ್ತಾರೆ. ದೇಶದಲ್ಲಿ 31.65 ಲಕ್ಷ ಚುನಾಯಿತ ಜನ ಪ್ರತಿನಿಧಿಗಳಲ್ಲಿ ಸುಮಾರು ಶೇ. 46 ರಷ್ಟು ಅಂದರೆ 14.53 ಲಕ್ಷ ನಮ್ಮ ಸಹೋದರಿಯರು ಗ್ರಾಮೀಣ ಸ್ವಯಂ-ಸರ್ಕಾರವನ್ನು ಪೂರ್ಣ ಶಕ್ತಿ ಮತ್ತು ದಕ್ಷತೆಯಿಂದ ನಿರ್ವಹಿಸುತ್ತಿರುವುದಕ್ಕಿಂತ ಮಹಿಳಾ ಸಬಲೀಕರಣಕ್ಕೆ ಉತ್ತಮ ಉದಾಹರಣೆ ಬೇರೆ ಯಾವುದಿದೆ?

ಹಿಂದಿನ ಪಂಚಾಯತಿ ರಾಜ್ ದಿನವನ್ನು ಏಪ್ರಿಲ್ 24, 2020 ರಂದು ಲಾಕ್ ಡೌನ್ ಮತ್ತು ಕೋವಿಡ್19- ಸಾಂಕ್ರಾಮಿಕ ರೋಗದ ಮಧ್ಯೆಯೇ ಆಚರಿಸಲಾಯಿತು. ಈ ಸಂದರ್ಭದಲ್ಲಿ ನಮ್ಮ ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಪಂಚಾಯತ್ ಪ್ರತಿನಿಧಿಗಳೊಂದಿಗೆ ವರ್ಚುವಲ್ ಮಾಧ್ಯಮದ ಮೂಲಕ ಸಂವಹನ ನಡೆಸಿ, ದೇಶದ ಗ್ರಾಮಗಳಿಗೆ ಎರಡು ದೊಡ್ಡ ಉಡುಗೊರೆಗಳನ್ನು ನೀಡಿದರು. ಪ್ರಧಾನಮಂತ್ರಿ ಸ್ವಾಮಿತ್ವ ಎಂಬ ಮಹತ್ವಾಕಾಂಕ್ಷೆ ಯೋಜನೆಗೆ ಚಾಲನೆ ನೀಡಿದರು.

ಇದು ಸ್ವಾತಂತ್ರ್ಯದ ನಂತರ ಗ್ರಾಮಗಳ ಮೂಲಸೌಕರ್ಯಗಳನ್ನು ಬಲಪಡಿಸುವ ದೊಡ್ಡ ಹೆಜ್ಜೆಯಾಗಿದೆ. 83 ಕೋಟಿಗೂ ಹೆಚ್ಚು ಗ್ರಾಮವಾಸಿಗಳಿಗೆ ಆಸ್ತಿ ಹಕ್ಕು ನೀಡುವುದು ಮಹಾತ್ಮ ಗಾಂಧಿಯವರ 151ನೇ ಜಯಂತಿಯಂದು ಅವರಿಗೆ ನೀಡಿದ ದೊಡ್ಡ ಗೌರವವಾಗಿದೆ. ಈ ಗ್ರಾಮಸ್ಥರು ಈ ಮೊದಲು ತಮ್ಮ ಜಮೀನಿನ ಮಾಲೀಕತ್ವಕ್ಕಾಗಿ ಯಾವುದೇ ಕಾನೂನಾತ್ಮಕ ದಾಖಲೆಗಳನ್ನು ಹೊಂದಿರಲಿಲ್ಲ.

ಸ್ವಾಮಿತ್ವ ಯೋಜನೆಯಡಿ ಬರುವ ಹಳ್ಳಿಗಳ ಡ್ರೋನ್ ಮ್ಯಾಪಿಂಗ್, ಗ್ರಾಮಸ್ಥರಿಗೆ

ಕಾನೂನುಬದ್ಧ ಆಸ್ತಿ ಹಕ್ಕುಗಳನ್ನು ನೀಡುವುದಲ್ಲದೆ, ದೇಶದ ಪ್ರತಿಯೊಂದು ಹಳ್ಳಿಯ ಯೋಜಿತ ಅಭಿವೃದ್ಧಿಗೆ ಆಧಾರವಾಗಲಿದೆ.

ಕಳೆದ ವರ್ಷ ಆರು ರಾಜ್ಯಗಳಲ್ಲಿ ಪ್ರಾಯೋಗಿಕ ಯೋಜನೆಯಾಗಿ ಪ್ರಾರಂಭವಾದ ಸ್ವಾಮಿತ್ವ ಯೋಜನೆಯನ್ನು ದೇಶಾದ್ಯಂತ ಜಾರಿಗೆ ತರಲು 2021 ರ ಬಜೆಟ್‌ನಲ್ಲಿ ಸರ್ಕಾರ ನಿರ್ಧರಿಸಿತು. ಕಳೆದ ಪಂಚಾಯತಿ ರಾಜ್ ದಿನದಂದು, ಪ್ರಧಾನಮಂತ್ರಿಯವರು ಪಂಚಾಯತ್‌ಗಳಲ್ಲಿ ಪಾರದರ್ಶಕ ಮತ್ತು ತ್ವರಿತ ವ್ಯವಸ್ಥೆಯನ್ನು ತರಲು ಏಕೀಕೃತ ಇ-ಗ್ರಾಮ ಸ್ವರಾಜ್ ಪೋರ್ಟಲ್ ಮತ್ತು ಅದರ ಮೊಬೈಲ್ ಅಪ್ಲಿಕೇಶನ್ ಗೆ ಚಾಲನೆ ನೀಡಿದರು.

ಕಳೆದ ಪಂಚಾಯತಿ ರಾಜ್ ದಿನದಂದು ಪ್ರಧಾನಿ ನರೇಂದ್ರ ಮೋದಿಯವರೊಂದಿಗಿನ ಸಂವಾದದ ನಂತರ, ಬಿಕ್ಕಟ್ಟಿನ ಸಂದರ್ಭದಲ್ಲಿ ಕೋವಿಡ್- 19 ರ ಹರಡುವಿಕೆಯನ್ನು ನಿಯಂತ್ರಿಸಲು ಮತ್ತು ವಲಸೆ ಕಾರ್ಮಿಕರನ್ನು ಬೆಂಬಲಿಸಲು ಪಂಚಾಯತ್‌ಗಳು ಪ್ರಯತ್ನಿಸಿದ ರೀತಿ ಶ್ಲಾಘನೀಯವಾದುದು.

ಬಿಕ್ಕಟ್ಟಿನ ಸಂದರ್ಭದಲ್ಲಿ ಎಂಜಿಎನ್‌ಆರ್‌ಇಜಿಎ ಮತ್ತು ಗರೀಬ್ ಕಲ್ಯಾಣ್ ರೋಜ್‌ಗಾರ್ ಯೋಜನೆಗಳು ಪ್ರತಿ ನಿರ್ಗತಿಕ ಮತ್ತು ಬಡವರಿಗೆ ಉದ್ಯೋಗವನ್ನು ಒದಗಿಸುವ ಮೂಲಕ ಇತಿಹಾಸವನ್ನು ನಿರ್ಮಿಸಲಾಯಿತು. ಕಳೆದ ಹಣಕಾಸು ವರ್ಷದಲ್ಲಿ, ದಾಖಲೆಯ 387.66 ಕೋಟಿ ಮಾನವ ದಿನಗಳ ಉದ್ಯೋಗ ಸೃಷ್ಟಿಯಾಗಿದೆ ಮತ್ತು 11.25 ಕೋಟಿಗೂ ಹೆಚ್ಚು ಗ್ರಾಮಸ್ಥರಿಗೆ ಉದ್ಯೋಗ ದೊರಕಿತು. ಅಂತೆಯೇ, ಗರೀಬ್ ಕಲ್ಯಾಣ್ ರೋಜ್‌ಗಾರ್ ಯೋಜನೆ ಅಡಿಯಲ್ಲಿ 50.78 ಕೋಟಿ ಮಾನವ-ದಿನಗಳ ಉದ್ಯೋಗವನ್ನು ಸೃಷ್ಟಿಸಲಾಯಿತು.



**ಇಂದಿನ ಹಳ್ಳಿಗಳು ನಗರಗಳಂತೆ ಯೋಜಿತ ಅಭಿವೃದ್ಧಿಯ ದಿಕ್ಕಿನತ್ತ ಸಾಗುತ್ತಿವೆ ಎಂಬುದನ್ನು ಇದು ಸಾಬೀತುಪಡಿಸುತ್ತದೆ, ಅಭಿವೃದ್ಧಿಯಲ್ಲಿ ವರ್ತಮಾನದ ಜೊತೆಗೆ ಭವಿಷ್ಯದ ವಿಷಯಗಳನ್ನೂ ಸಹ ಪರಿಗಣಿಸಲಾಗುತ್ತಿದೆ.**

ಜನರ ಹಿತಕ್ಕಾಗಿ ಮೀಸಲಾಗಿರುವ ಸಬಲೀಕೃತ, ಪಾರದರ್ಶಕ ಮತ್ತು ಪರಿಣಾಮಕಾರಿ ಪಂಚಾಯತಿ ರಾಜ್ ವ್ಯವಸ್ಥೆಯತ್ತ ನಾವು ನಿರಂತರವಾಗಿ ಸಾಗುತ್ತಿದ್ದೇವೆ. ಕೇಂದ್ರ ಹಣಕಾಸು ಆಯೋಗವು ಪಂಚಾಯಿತಿಗಳ ಆರ್ಥಿಕ ಸಬಲೀಕರಣದಲ್ಲಿ ಅತ್ಯಂತ ನಿರ್ಣಾಯಕ ಪಾತ್ರ ವಹಿಸಿದೆ. 14 ನೇ ಹಣಕಾಸು ಆಯೋಗದ ಅಡಿಯಲ್ಲಿ (2015-20), ಗ್ರಾಮ ಪಂಚಾಯತ್‌ಗಳಿಗೆ 2.292 ಲಕ್ಷ ಕೋಟಿ ರೂ.ಗಳನ್ನು ನೀಡಲು ಶಿಫಾರಸು ಮಾಡಲಾಗಿದ್ದು, ಇದು 13ನೇ ಹಣಕಾಸು ಆಯೋಗದ ಅನುದಾನಕ್ಕಿಂತ ಮೂರು ಪಟ್ಟು ಹೆಚ್ಚಾಗಿದೆ.

ಕಳೆದ ವರ್ಷ (2020-21), 60,750 ಕೋಟಿ ರೂ.ಗಳ ಮಧ್ಯಂತರ ಶಿಫಾರಸು ಮಾಡಲಾಯಿತು, ಇದು ಇದುವರೆಗಿನ ಅತ್ಯಧಿಕ ವಾರ್ಷಿಕ ಹಂಚಿಕೆಯಾಗಿದ್ದು, ಸರ್ಕಾರವು ಅದನ್ನು ಸಂಪೂರ್ಣವಾಗಿ ಒಪ್ಪಿಕೊಂಡಿತು. 15 ನೇ ಹಣಕಾಸು ಆಯೋಗ (2021- 26) ಸ್ಥಳೀಯ ಗ್ರಾಮೀಣ ಸಂಸ್ಥೆಗಳಿಗೆ 2,36,805 ಕೋಟಿ ರೂ. ಗ್ರಾಮೀಣ ಪ್ರದೇಶದ ಆರೋಗ್ಯ ಸೌಲಭ್ಯಗಳಿಗಾಗಿ 43,928 ಕೋಟಿ ರೂ. ಹೆಚ್ಚುವರಿ ಹಣವನ್ನು ಆಯೋಗ ಶಿಫಾರಸು ಮಾಡಿದೆ. ಭಾರತ ಸರ್ಕಾರ ಈ ಶಿಫಾರಸುಗಳನ್ನು ಸಂಪೂರ್ಣವಾಗಿ ಒಪ್ಪಿಕೊಂಡಿದೆ.

ಗ್ರಾಮಗಳ ಯೋಜಿತ ಅಭಿವೃದ್ಧಿ ಮತ್ತು ಹಣಕಾಸು ಆಯೋಗವು ನಿಗದಿಪಡಿಸಿದ ಹಣವನ್ನು ಪಾರದರ್ಶಕವಾಗಿ ಬಳಸುವುದಕ್ಕಾಗಿ ಗ್ರಾಮ ಪಂಚಾಯತ್ ಅಭಿವೃದ್ಧಿ ಯೋಜನೆ (ಜಿಪಿಡಿಪಿ) ಯನ್ನು ಶೇ. 96 ರಷ್ಟು ಗ್ರಾಮ ಪಂಚಾಯತ್‌ಗಳು ಜಾರಿಗೆ ತಂದಿವೆ. ಈ ವರ್ಷ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳು ಕೂಡ ಗ್ರಾಮಗಳ ಅಭಿವೃದ್ಧಿ ಯೋಜನೆಗಳನ್ನು ರೂಪಿಸುತ್ತಿವೆ. ಇಂದಿನ ಹಳ್ಳಿಗಳು ನಗರಗಳಂತೆ ಯೋಜಿತ ಅಭಿವೃದ್ಧಿಯ ದಿಕ್ಕಿನತ್ತ ಸಾಗುತ್ತಿವೆ ಎಂಬುದನ್ನು ಇದು ಸಾಬೀತುಪಡಿಸುತ್ತದೆ, ಅಲ್ಲಿ ವರ್ತಮಾನದ ಜೊತೆಗೆ ಭವಿಷ್ಯದ ವಿಷಯಗಳನ್ನೂ ಸಹ ಪರಿಗಣಿಸಲಾಗುತ್ತಿದೆ. ಈ ಯೋಜನೆಗಳನ್ನು ರಾಜಧಾನಿಯಲ್ಲಿ ಕುಳಿತು ರೂಪಿಸಲಾಗಿಲ್ಲ, ಬದಲಿಗೆ ಹಳ್ಳಿಗಳಲ್ಲಿ ಜನ ಯೋಜನೆ ಅಭಿಯಾನದ ಮೂಲಕ ಸಿದ್ಧಪಡಿಸಲಾಗಿದೆ.

2018 ರಲ್ಲಿ ಪಂಚಾಯತಿ ರಾಜ್ ದಿನದ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ರಾಷ್ಟ್ರೀಯ ಗ್ರಾಮ ಸ್ವರಾಜ್ ಅಭಿಯಾನವನ್ನು (ಆರ್‌ಜಿಎಸ್‌ಎ) ಪ್ರಾರಂಭಿಸಿದರು. ಚುನಾಯಿತ ಪ್ರತಿನಿಧಿಗಳು ಮತ್ತು ಪಂಚಾಯತ್‌ಗಳ ಇತರ ಪಾಲುದಾರರಿಗೆ ತರಬೇತಿ ನೀಡುವ ಸರ್ಕಾರದ ನಿರ್ಧಾರವು ಸಾಮರ್ಥ್ಯ ವೃದ್ಧಿಯಲ್ಲಿ ಒಂದು ಮೈಲಿಗಲ್ಲು ಎಂದು ಸಾಬೀತಾಯಿತು.

2018 ರಿಂದ, ಹಣಕಾಸು ಆಯೋಗವು ನಿಗದಿಪಡಿಸಿದ ನಿಧಿಯ ಬಳಕೆಯು ಪಿ ಆರ್ ಐ ಎ ಸಾಫ್ಟ್ (ಪಂಚಾಯತಿ ರಾಜ್ ಇನ್ಸ್ಟಿಟ್ಯೂಶನ್ಸ್ ಅಕೌಂಟಿಂಗ್ ಸಾಫ್ಟ್‌ವೇರ್), ಹಣಕಾಸು ಆಯೋಗದ ನಿಧಿಯಿಂದ ರಚಿಸಲಾದ ಪ್ರತಿಯೊಂದು ಆಸ್ತಿಯ ಜಿಯೋ ಟ್ಯಾಗಿಂಗ್ ಮತ್ತು ಫೋಟೋ ಅಪ್‌ಲೋಡ್ ಮಾಡುವಂತಹ ಕಾರ್ಯವಿಧಾನಗಳು ಪಂಚಾಯತಿ ರಾಜ್ ವ್ಯವಸ್ಥೆಯನ್ನು ಸಂಪೂರ್ಣವಾಗಿ ಪಾರದರ್ಶಕ ಮತ್ತು ಚುರುಕಾಗಿಸಿವೆ. ಇ-ಗ್ರಾಮ್ ಸ್ವರಾಜ್ ಅಪ್ಲಿಕೇಶನ್ ಸಹಾಯದಿಂದ ಪ್ರತಿ ಕೆಲಸದ ವರದಿ, ಟ್ರ್ಯಾಕಿಂಗ್ ಮತ್ತು ಮೇಲ್ವಿಚಾರಣೆಯನ್ನು ಸರಳೀಕರಿಸುವ ಮೂಲಕ ಪಂಚಾಯತ್‌ಗಳ ಕಾರ್ಯದಕ್ಷತೆ ಹೆಚ್ಚಾಗಿದೆ. 23 ರಾಜ್ಯಗಳಲ್ಲಿ 14 ನೇ ಹಣಕಾಸು ಆಯೋಗದ ಖಾತೆಗಳ ಆನ್‌ಲೈನ್ ಲೆಕ್ಕಪರಿಶೋಧನೆಯನ್ನು ಈಗಾಗಲೇ ಪ್ರಾರಂಭಿಸಲಾಗಿದೆ.

ಮಾಹಿತಿ ತಂತ್ರಜ್ಞಾನದ ಯುಗದಲ್ಲಿ, ರಾಷ್ಟ್ರ ರಾಜಧಾನಿ ದೆಹಲಿ ಮತ್ತು ದೇಶದ ದೂರದ ಹಳ್ಳಿಗಳಲ್ಲಿ ಪಂಚಾಯತ್‌ಗಳ ನಡುವಿನ ಅಂತರವು ಕಡಿಮೆಯಾಗಿರುವುದು ಮಾತ್ರವಲ್ಲ ಬಹುತೇಕ ಇಲ್ಲವಾಗಿದೆ. ದೆಹಲಿಯಿಂದ 100 ರೂಗಳನ್ನು ಬಿಡುಗಡೆ ಮಾಡಿದರೆ, ಪ್ರತಿ ಪೈಸೆಯನ್ನೂ ಗ್ರಾಮಗಳ ಅಭಿವೃದ್ಧಿ ಮತ್ತು ಕಲ್ಯಾಣಕ್ಕಾಗಿ ಬಳಸಲಾಗುತ್ತಿದೆ.

ಕಳೆದ ಏಳು ವರ್ಷಗಳಲ್ಲಿ, ಸರ್ಕಾರವು ತಳಮಟ್ಟದಲ್ಲಿ ಮಾಡಿದ ಪರಿಣಾಮಕಾರಿ ಸುಧಾರಣೆಗಳಿಂದಾಗಿ ಪ್ರಜಾಪ್ರಭುತ್ವವು ಬಲಗೊಂಡಿದೆ. ಸ್ವಾವಲಂಬಿ ಹಳ್ಳಿಗಳು ಮಾತ್ರ ಸ್ವಾವಲಂಬಿ ಭಾರತವನ್ನು ನಿರ್ಮಿಸಲು ಸಾಧ್ಯ ಎಂದು ಪ್ರಧಾನ ಮಂತ್ರಿಯವರೇ ಹೇಳಿದ್ದಾರೆ.

ಬಲವಾದ, ಸಂಪನ್ಮೂಲಭರಿತ ಮತ್ತು ಪಾರದರ್ಶಕ ಪಂಚಾಯತಿ ರಾಜ್ ವ್ಯವಸ್ಥೆಯು ಸ್ವಾವಲಂಬಿ ಭಾರತ ನಿರ್ಮಾಣದ ಸಂಕಲ್ಪವನ್ನು ಈಡೇರಿಸುವ ಮಾರ್ಗವಾಗಿದೆ. ■



# ಮಧ್ಯಮ ವರ್ಗವನ್ನು ಬಲಗೊಳಿಸುವುದು

"ಪವಾಡ ಸದೃಶ ಕೆಲಸಗಳನ್ನು ಮಾಡುವ ಶಕ್ತಿ ಮಧ್ಯಮ ವರ್ಗಕ್ಕೆ ಇದೆ. ಆದ್ದರಿಂದ ಮಧ್ಯಮ ವರ್ಗದ ಕುಟುಂಬಗಳು ಸುಲಭ ಜೀವನದ ಹೆಚ್ಚಿನ ಪ್ರಯೋಜನಗಳನ್ನು ಪಡೆಯುತ್ತವೆ. ಅಗ್ಗದ ಇಂಟರ್ನೆಟ್, ಕೈಗೆಟುಕುವ ಸ್ಮಾರ್ಟ್‌ಫೋನ್‌ಗಳು ಅಥವಾ ಉಡಾನ್ ಯೋಜನೆ ಅಡಿಯಲ್ಲಿ ಅಗ್ಗದ ವಿಮಾನ ಟಿಕೆಟ್‌ಗಳು ಅಥವಾ ನಮ್ಮ ಹೆದ್ದಾರಿಗಳು ಅಥವಾ ಮಾಹಿತಿ ಮಾರ್ಗಗಳು - ಈ ಎಲ್ಲ ವಿಷಯಗಳು ಮಧ್ಯಮ ವರ್ಗದ ಬಲವನ್ನು ಹೆಚ್ಚಿಸಲಿವೆ"

ಪ್ರಧಾನಿ ನರೇಂದ್ರ ಮೋದಿ

**2020ರ ಸುಲಭ ಜೀವನ ಸೂಚ್ಯಂಕವು ನಗರವೊಂದರ ಸುಲಭ ಜೀವನದ ಶ್ರೇಯಾಂಕದ ಬಗ್ಗೆ ಹೇಳುತ್ತದೆ. ಜನರ ಜೀವನವನ್ನು ಉತ್ತಮಗೊಳಿಸಲು ನಗರಗಳು ಮತ್ತು ಸ್ಥಳೀಯ ಸಂಸ್ಥೆಗಳನ್ನು ಸ್ಮಾರ್ಟ್ ಸಿಟಿಗಳಾಗಿ ಪರಿವರ್ತಿಸುವ ಬಗ್ಗೆಯೂ ಇದು ಹೇಳುತ್ತದೆ. ಸ್ಮಾರ್ಟ್ ಸಿಟಿಗಳೆಂದರೆ, ನಗರಗಳ ಪುನಃಸ್ಥಾಪನೆ, ಉತ್ತಮ ಆಡಳಿತ, ಉತ್ತರದಾಯಿತ್ವ ಮತ್ತು ಸುಲಭ ಜೀವನ ಇವೆಲ್ಲವೂ ಆಗಿವೆ.**

ಸುಲಭ ಜೀವನ ಸೂಚ್ಯಂಕ (ಇಒಎಲ್‌ಐ) ಜೀವನದ ಗುಣಮಟ್ಟ ಮತ್ತು ನಗರ ಅಭಿವೃದ್ಧಿಯಲ್ಲಿ ವಿವಿಧ ಉಪಕ್ರಮಗಳ ಪ್ರಭಾವವನ್ನು ಮೌಲ್ಯಮಾಪನ ಮಾಡುವ ಒಂದು ಸಾಧನವಾಗಿದೆ. ಜನರ ಜೀವನವನ್ನು ಸುಲಭಗೊಳಿಸಲು ನೀತಿಗಳನ್ನು ರೂಪಿಸಲು ಇದು ಸಹಾಯ ಮಾಡುತ್ತದೆ. ಇದು ಜೀವನದ ಗುಣಮಟ್ಟ, ಆರ್ಥಿಕತೆ, ಸುಸ್ಥಿರತೆ ಮತ್ತು ಸ್ಥಿತಿಸ್ಥಾಪಕತ್ವವನ್ನು ಆಧರಿಸಿ ಭಾರತದಾದ್ಯಂತ ಭಾಗವಹಿಸುವ ನಗರಗಳ ಬಗ್ಗೆ ಸಮಗ್ರ ತಿಳಿವಳಿಕೆಯನ್ನು ನೀಡುತ್ತದೆ. ನಾಗರಿಕ ದೃಷ್ಟಿಕೋನ ಸಮೀಕ್ಷೆಯ ಮೂಲಕ ನಗರ ಆಡಳಿತವು ಒದಗಿಸುವ ಸೇವೆಗಳ ಬಗ್ಗೆ ಅಲ್ಲಿನ ನಿವಾಸಿಗಳ ದೃಷ್ಟಿಕೋನವನ್ನು ಮೌಲ್ಯಮಾಪನವು ಒಳಗೊಂಡಿದೆ. ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ರಾಜ್ಯ ಸಚಿವ (ಸ್ವತಂತ್ರ) ಹರ್ದೀಪ್ ಸಿಂಗ್ ಪುರಿ ಅವರು 2021 ರ ಮಾರ್ಚ್‌ನಲ್ಲಿ 2021 ರ ಸುಲಭ ಜೀವನ ಸೂಚ್ಯಂಕ ಮತ್ತು ನಗರಪಾಲಿಕೆಗಳ ಕಾರ್ಯಕ್ಷಮತೆ ಸೂಚ್ಯಂಕವನ್ನು ಪ್ರಕಟಿಸಿದರು.

10 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ನಗರಗಳಿಗೆ ಮತ್ತು 10 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರುವ ನಗರಗಳ ಸುಲಭ ಜೀವನ ಸೂಚ್ಯಂಕದ 2020 ರ ಶ್ರೇಯಾಂಕಗಳನ್ನು ಘೋಷಿಸಲಾಯಿತು. 2020 ರಲ್ಲಿ ನಡೆಸಿದ ಮೌಲ್ಯಮಾಪನದಲ್ಲಿ 111 ನಗರಗಳ ಸುಮಾರು 32 ಲಕ್ಷ ಜನರು ಭಾಗವಹಿಸಿ, ದೇಶದ ನಗರಗಳ ಸುಲಭ ಜೀವನದ ಬಗ್ಗೆ ತಿಳಿಸಿದರು. ನಗರಪಾಲಿಕೆಗಳ ಕಾರ್ಯಕ್ಷಮತೆ ಸೂಚ್ಯಂಕದಲ್ಲಿ ಹಣಕಾಸು, ನೀತಿ, ತಂತ್ರಜ್ಞಾನ ಮತ್ತು ಸರ್ಕಾರವನ್ನು ಮೌಲ್ಯಮಾಪನ ಮಾಡಲಾಯಿತು ಮತ್ತು ಅದಕ್ಕೆ ಅನುಗುಣವಾಗಿ ಪಟ್ಟಿಯನ್ನು ಸಿದ್ಧಪಡಿಸಲಾಯಿತು. ■

## ಅಗ್ರ 10 ನಗರಗಳು

(10 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ನಗರಗಳು)

01 ಬೆಂಗಳೂರು
02 ಪುಣೆ
03 ಅಹಮದಾಬಾದ್
04 ಚೆನ್ನೈ
05 ಸೂರತ್
06 ನವೀ ಮುಂಬೈ
07 ಕೊಯಮತ್ತೂರು
08 ವಡೋದರಾ
09 ಇಂದೋರ್
10 ಗ್ರೇಟರ್ ಮುಂಬೈ




## ಅಗ್ರ 10 ನಗರಗಳು

(10 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರುವ ನಗರಗಳು)

01 ಶಿಮ್ಲಾ
02 ಭುವನೇಶ್ವರ
03 ಸಿಲ್ವಾಸ್ಸಾ
04 ಕಾಕಿನಾಡ
05 ಸೇಲಂ
06 ವೆಲ್ಲೂರು
07 ಗಾಂಧಿನಗರ
08 ಗುರುಗ್ರಾಮ
09 ದಾವಣಗೆರೆ
10 ತಿರುಚಿರಾಪಳ್ಳಿ

## ಅಗ್ರ ನಗರಪಾಲಿಕೆಗಳು

ಮಿಲಿಯನ್+ ವಿಭಾಗದಲ್ಲಿ, ಇಂದೋರ್ ಅತ್ಯುನ್ನತ ಶ್ರೇಣಿಯ ನಗರಪಾಲಿಕೆಯಾಗಿ ಹೊರಹೊಮ್ಮಿದೆ, ನಂತರ ಸೂರತ್ ಮತ್ತು ಭೋಪಾಲ್ ನಗರಗಳಿವೆ. ಮಿಲಿಯನ್ ಗಿಂತ ಕಡಿಮೆ ವಿಭಾಗದಲ್ಲಿ, ನವದೆಹಲಿ ಮಹಾನಗರ ಪಾಲಿಕೆ ಮೊದಲ ಸ್ಥಾನದಲ್ಲಿದ್ದರೆ, ನಂತರದ ಸ್ಥಾನಗಳಲ್ಲಿ ತಿರುಪತಿ ಮತ್ತು ಗಾಂಧಿನಗರಗಳಿವೆ.





# ಸಿನಿಮಾ ರಂಗದ ಅಜರಾಮರ ಪ್ರತಿಭೆ

*ವಿಶ್ವದ ಶ್ರೇಷ್ಠ ಚಲನಚಿತ್ರ ನಿರ್ದೇಶಕರಲ್ಲಿ ಒಬ್ಬರಾದ ಅಕಿರಾ ಕುರುಸೋವಾ ಅವರು "ಸತ್ಯಜಿತ್ ರೇ ಅವರ ಸಿನೆಮಾಗಳನ್ನು ನೋಡಿಲ್ಲವೆಂದರೆ ಸೂರ್ಯ ಮತ್ತು ಚಂದ್ರನನ್ನು ಕಾಣದ ಜಗತ್ತಿನಲ್ಲಿ ಬದುಕಿದ್ದೇವೆ ಎಂದು ಅರ್ಥ..." ಎಂದು ಹೇಳುತ್ತಾರೆ. ಏಪ್ರಿಲ್ 23 ರಂದು ರೇ ಅವರ ಪುಣ್ಯತಿಥಿ. ಈ ಸಂದರ್ಭದಲ್ಲಿ ರೇ ಚಿತ್ರರಂಗಕ್ಕೆ ನೀಡಿದ ಕೊಡುಗೆಯನ್ನು ಸ್ಮರಿಸುವ, ಅಪು ಟ್ರೈಲಾಜಿಯ ಮೊದಲ ಭಾಗವಾದ ಪಥೇರ್ ಪಾಂಚಾಲಿಯಂತಹ ಅದ್ಭುತ ಸಿನಿಮಾಗಳನ್ನು ಸೃಷ್ಟಿಸಿದ ಪ್ರತಿಭೆಗೆ ಗೌರವ ಸಲ್ಲಿಸುವ ಪ್ರಯತ್ನವಾಗಿದೆ.*



**ಜನನ:** ಮೇ 2, 1921
**ಮರಣ:** ಏಪ್ರಿಲ್ 23, 1992

*ಬಹು ದಿನ್ ಧಾರೆ ಬಾಹು ಕ್ರೋಶ್ ದೂರೆ*
*ಬಹು ವ್ಯಯ್ ಕರಿ ಬಹು ದೇಶ್ ಘುರೆ*
*ದೇಖಿತೆ ಗಿಯೆಚಿ ಪರ್ವತ್-ಮಾಲಾ,*
*ದೇಖಿತ್ ಗಿಯೆಚಿ ಸಿಂಧು |*
*ದೇಖಾ ಹೋಯ್ ನಾಯ್ ಚಕ್ಷು ಮೆಲಿಯಾ*
*ಘರ್ ಹೋತೆ ಶುದ್ಧು ದುಯಿ ಪಾ ಫೆಲಿಯಾ*
*ಏಕ್ ತಿ ಧನೇರ್ ಶಿಶರ್ ಉಪರೆ*
*ಏಕ್ ತಿ ಶಿಶಿರ್-ಬಿಂದು*

ತಮ್ಮ ತಾಯಿಯೊಂದಿಗೆ ಶಾಂತಿನಿಕೇತನಕ್ಕೆ ಭೇಟಿ ನೀಡಿದ ಮಗು ಮಾಣಿಕ್ ನೋಟ್ ಪುಸ್ತಕದಲ್ಲಿ ಗುರುದೇವ ರವೀಂದ್ರನಾಥ ಟ್ಯಾಗೋರ್ ಅವರು ಈ ಕವನವನ್ನು ಬರೆದಿದ್ದಾರೆ. ಕವಿತೆಯ ಸಾರಾಂಶವೆಂದರೆ, "ನಾವು ನಮ್ಮ ಸುತ್ತ ಇರುವ ವಸ್ತುಗಳಿಗೆ ಬೆಲೆ ನೀಡುವುದಿಲ್ಲ. ಮತ್ತು ನಮ್ಮಿಂದ ದೂರವಿರುವ ವಿಷಯಗಳಿಗೆ ಹೆಚ್ಚು ಪ್ರಾಮುಖ್ಯತೆ ನೀಡುತ್ತೇವೆ... ಆ ಮಗುವೇ ಸತ್ಯಜಿತ್ ರೇ ಎಂದು ಜಗತ್ತಿಗೆ ಪರಿಚಿತವಾದದ್ದು. ಗುರುದೇವ್ ಅವರ ಕವಿತೆಯಿಂದ ಪ್ರೇರಣೆಗೊಂಡ ಅವರು, ಎಂದಿಗೂ ಆಸ್ಕರ್ ಪ್ರಶಸ್ತಿಗಾಗಿ ತಮ್ಮ ಸಿನಿಮಾ ಕಳುಹಿಸಲಿಲ್ಲ. ವಿಶ್ವದ ಅತ್ಯುತ್ತಮ ಚಲನಚಿತ್ರ ಸೃಷ್ಟಿಕರ್ತರಲ್ಲಿ ಒಬ್ಬರಾದ ರೇ ಅವರು ಮೇ 2, 1921 ರಂದು ಜನಿಸಿದರು. ದುರದೃಷ್ಟವಶಾತ್, ತಮ್ಮ ಮೂರನೇ ವರ್ಷದಲ್ಲಿಯೇ ತಂದೆಯನ್ನು ಕಳೆದುಕೊಂಡ ಅವರ ಬಾಲ್ಯ ಕಷ್ಟದಿಂದ ಕೂಡಿತ್ತು..ಅವರು ಪ್ರೆಸಿಡೆನ್ಸಿ ಕಾಲೇಜ್ ಮತ್ತು ಶಾಂತಿನಿಕೇತನ ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಪಡೆದರು ನಂತರ, ಅವರು ಗ್ರಾಫಿಕ್ ಡಿಸೈನರ್ ಆಗಿ ಕೆಲಸ ಮಾಡಲು ಪ್ರಾರಂಭಿಸಿದರು. ಜಿಮ್ ಕಾರ್ಬೆಟ್ ಅವರ ಮ್ಯಾನ್ ಈಟರ್ಸ್ ಆಫ್ ಕುಮಾವೂನ್ ಮತ್ತು ಪಂ. ಜವಾಹರಲಾಲ್ ನೆಹರು ಅವರ ಡಿಸ್ಕವರಿ ಆಫ್ ಇಂಡಿಯಾ ಪುಸ್ತಕಗಳ ಮುಖಪುಟ ವಿನ್ಯಾಸ ಮಾಡಿದರು. ಸತ್ಯಜಿತ್ ರೇ ಅವರನ್ನು 1950 ರಲ್ಲಿ ಲಂಡನ್ ಗೆ ಕಳುಹಿಸಲಾಯಿತು, ಅದು ಅವರ ಜೀವನವನ್ನೇ ಬದಲಿಸಿತು. ಅವರು ಅಲ್ಲಿದ್ದ ಆರು ತಿಂಗಳಲ್ಲಿ 100 ಕ್ಕೂ ಹೆಚ್ಚು ಚಲನಚಿತ್ರಗಳನ್ನು ವೀಕ್ಷಿಸಿದರು.

ಕೋಲ್ಕತ್ತಾಗೆ ಹಿಂತಿರುಗಿದ ನಂತರ, ಉತ್ಪ್ರೇಕ್ಷೆ ಮತ್ತು ನಾಟಕೀಯತೆ ಬಿಟ್ಟು ಭಾರತೀಯ ಹಳ್ಳಿಯ ಕುಟುಂಬವೊಂದರ ಹೋರಾಟದ ಕಥೆಯನ್ನು ಪಥೇರ್ ಪಾಂಚಾಲಿ ಹೆಸರಿನಲ್ಲಿ ಅರ್ಥಪೂರ್ಣವಾದ ಸಿನೆಮಾ ಮಾಡಲು ನಿರ್ಧರಿಸಿದರು. ಈ ಚಿತ್ರವು ಬಿಭೂತಿಭೂಷಣ್ ಬಂಡೋಪಾಧ್ಯಾಯ ಅವರ ಕಾದಂಬರಿಯನ್ನು ಆಧರಿಸಿದೆ. ಆದರೆ ಅಪು ಟ್ರೈಲಾಜಿ - ಪಥೇರ್ ಪಾಂಚಾಲಿ, ಅಪರಾಜಿತೋ ಮತ್ತು ಅಪೂರ್ ಸಂಸಾರ್ - ಚಲನಚಿತ್ರಗಳು ಅವರನ್ನು ಸಿನಿರಂಗದಲ್ಲಿ ಅಮರರನ್ನಾಗಿ ಮಾಡಿದವು. ಸಹಜವಾಗಿ, ಅವರ ಇತರ ಚಿತ್ರಗಳೂ ಅಷ್ಟೇ ಪ್ರಶಂಸನೀಯವಾಗಿವೆ! ಹವ್ಯಾಸಿ ನಟರಿಗೆ ಮತ್ತು ಹೆಸರಿಲ್ಲದ ನಿರ್ದೇಶಕರಿಗೆ ಹಣಕಾಸು ಒದಗಿಸಲು ಯಾರೂ ಸಿದ್ಧರಿರಲಿಲ್ಲ. ಆದರೆ 1955 ರಲ್ಲಿ ಪಥೇರ್ ಪಾಂಚಾಲಿ ಬಿಡುಗಡೆಯಾದಾಗ, ಇದು ವಿಶ್ವದಾದ್ಯಂತ ಪ್ರಶಂಸೆಗಳನ್ನು ಗಳಿಸಿತು ಮತ್ತು 11 ಅಂತರರಾಷ್ಟ್ರೀಯ ಪ್ರಶಸ್ತಿಗಳನ್ನು ಗೆದ್ದುಕೊಂಡಿತು. ರೇ ಅವರು ತಮ್ಮ ಮೂರು ದಶಕಗಳ ವೃತ್ತಿಜೀವನದಲ್ಲಿ ಮೂರು ಡಜನ್ ನಷ್ಟು ಚಲನಚಿತ್ರಗಳನ್ನು ನಿರ್ದೇಶಿಸಿದ್ದಾರೆ, ಇದರಲ್ಲಿ ಪರಾಶ್ ಪಥಾರ್, ಕಾಂಚನಜುಂಗಾ, ಮಹಾಪುರುಷ್, ಅಪೂರ್ ಸಂಸಾರ್, ಮಹಾನಗರ, ಚಾರುಲತಾ, ಅಪರಾಜಿತೋ ಮತ್ತು ಗೂಪಿ ಗೈನೆ ಬಾಘಾ ಬೈನೆ ಸೇರಿವೆ. ಅವರು ಹಿಂದಿ ಚಲನಚಿತ್ರ ಶತರಂಜ್ ಕೆ ಖಿಲಾಡಿ ನಿರ್ದೇಶಿಸಿದ್ದಾರೆ. ಆಳವಾದ ಅವಲೋಕನ, ತಿಳುವಳಿಕೆ ಮತ್ತು ಮಾನವ ಪ್ರೀತಿಯನ್ನು ಅವರ ಚಲನಚಿತ್ರಗಳಲ್ಲಿ ನಿರೂಪಿಸಲಾಗಿದೆ.

1978ರಲ್ಲಿ ನಡೆದ ಬರ್ಲಿನ್ ಚಲನಚಿತ್ರೋತ್ಸವದಲ್ಲಿ, ರೇ ಅವರನ್ನು ನಿರ್ವಹಣಾ ಸಮಿತಿಯು ವಿಶ್ವದ ಮೂವರು ಸಾರ್ವಕಾಲಿಕ ಶ್ರೇಷ್ಠ ನಿರ್ದೇಶಕರಲ್ಲಿ ಒಬ್ಬರೆಂದು ಘೋಷಿಸಿತು. ಭಾರತ ಸರ್ಕಾರವು ಅವರ ವಿಭಿನ್ನ ಕಲಾ ಪ್ರಕಾರಕ್ಕಾಗಿ 32 ರಾಷ್ಟ್ರೀಯ ಪ್ರಶಸ್ತಿಗಳನ್ನು ನೀಡಿದೆ. ಅವರಿಗೆ 1985 ರಲ್ಲಿ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ನೀಡಲಾಯಿತು; ಮತ್ತು 1992 ರಲ್ಲಿ ಭಾರತ ರತ್ನ ಮತ್ತು ಜೀವಮಾನದ ಸಾಧನೆಗಳಿಗಾಗಿ ಆಸ್ಕರ್ ಗೌರವ ನೀಡಲಾಯಿತು. ರೇ ಅನಾರೋಗ್ಯದಿಂದ ಬಳಲುತ್ತಿದ್ದರಿಂದ ಆಸ್ಕರ್ ಪ್ರಶಸ್ತಿ ಸಮಿತಿಯು ಪ್ರಶಸ್ತಿಯನ್ನು ಅವರ ನಿವಾಸದಲ್ಲಿಯೇ ಪ್ರದಾನ ಮಾಡಿತು. ಸತ್ಯಜಿತ್ ರೇ ಅವರು ಏಪ್ರಿಲ್ 23, 1992 ರಂದು ಹೃದಯಾಘಾತದಿಂದ ನಿಧನರಾದರು. ■

ವಿಶೇಷ ವರದಿ | ವಾಹನ ಗುಜರಿ ನೀತಿ



# ಹಳೆಯ ವಾಹನಗಳಿಂದ ಅದೃಷ್ಟ

ಗುಜರಿ ನೀತಿಯ ಅನುಪಸ್ಥಿತಿಯಲ್ಲಿ, ಜನರು ತಮ್ಮ ಹಳೆಯ ಮತ್ತು ಅನರ್ಹ ವಾಹನಗಳನ್ನು ಅನಿವಾರ್ಯವಾಗಿ ಜಂಕ್ ಮಾರುಕಟ್ಟೆಯಲ್ಲಿ ಕನಿಷ್ಠ ಬೆಲೆಗೆ ಮಾರಾಟ ಮಾಡಬೇಕಾಗುತ್ತದೆ. ಅವರು ಕ್ರಮವಾಗಿ **20** ಮತ್ತು **15** ವರ್ಷಕ್ಕಿಂತ ಹಳೆಯದಾದ ಖಾಸಗಿ ಮತ್ತು ವಾಣಿಜ್ಯ ವಾಹನಗಳಿಗೆ ನಿಕೃಷ್ಟ ಬೆಲೆ ಪಡೆಯುತ್ತಿದ್ದರು. ಆದರೆ ಇನ್ನು ಮುಂದೆ ಹಾಗಿರುವುದಿಲ್ಲ! ಈಗ, ಹಳೆಯ ಮತ್ತು ಅನರ್ಹವಾದ ವಾಹನವು ಅದರ ಮಾಲೀಕರಿಗೆ ಉತ್ತಮ ಮೌಲ್ಯವನ್ನು ಕೊಡುವುದಲ್ಲದೆ, ಹೊಸ ಗುಜರಿ ನೀತಿಯು ಮಾಲಿನ್ಯವನ್ನು ಕಡಿಮೆ ಮಾಡಲು ಮತ್ತು ದೇಶದಲ್ಲಿ ವಾಹನ ಉತ್ಪಾದನೆಗೆ ಉತ್ತೇಜನ ನೀಡಲು ಸಹಕಾರಿಯಾಗುತ್ತದೆ.

ಅಧಿಕೃತ ಮಾಹಿತಿಯ ಪ್ರಕಾರ, ಭಾರತದಲ್ಲಿ 20 ವರ್ಷಕ್ಕಿಂತ ಹಳೆಯದಾದ 51 ಲಕ್ಷ ಲಘು ಮೋಟಾರು ವಾಹನಗಳು ಮತ್ತು 15 ವರ್ಷಕ್ಕಿಂತ ಹಳೆಯದಾದ 34 ಲಕ್ಷ ಲಘು ಮೋಟಾರು ವಾಹನಗಳಿವೆ. ಇದಲ್ಲದೆ, 15 ವರ್ಷಕ್ಕಿಂತ ಮೇಲ್ಪಟ್ಟ 17 ಲಕ್ಷ ವಾಣಿಜ್ಯ ವಾಹನಗಗಳಿದ್ದು, ಇವು ಫಿಟ್ನೆಸ್ ಪ್ರಮಾಣಪತ್ರವಿಲ್ಲದೆ ಚಲಿಸುತ್ತಿವೆ. ಈ ವಾಹನಗಳು ದೇಶದಲ್ಲಿ ವಾಹನ ಮಾಲಿನ್ಯಕ್ಕೆ ಪ್ರಮುಖ ಕಾರಣವಾಗಿದ್ದು ರಸ್ತೆ ಸುರಕ್ಷತೆಗೆ ಅಪಾಯವನ್ನುಂಟುಮಾಡುತ್ತಿವೆ. ಸರ್ಕಾರವು ಮೊದಲ ಬಾರಿಗೆ ಅಂತರರಾಷ್ಟ್ರೀಯ ಮಾನದಂಡಗಳನ್ನು ಪೂರೈಸುವ ಗುಜರಿ ನೀತಿಯನ್ನು ತಂದಿದೆ. ಜರ್ಮನಿ, ಇಂಗ್ಲೆಂಡ್, ಅಮೆರಿಕಾ ಮತ್ತು ಜಪಾನ್‌ನಂತಹ ದೇಶಗಳ ಮಾನದಂಡಗಳ ತುಲನಾತ್ಮಕ ಅಧ್ಯಯನದ ನಂತರ ಮಾನದಂಡಗಳನ್ನು ಅಂತರರಾಷ್ಟ್ರೀಯ ಅತ್ಯುತ್ತಮ ಅಭ್ಯಾಸಗಳಿಂದ ಅಳವಡಿಸಿಕೊಳ್ಳಲಾಗಿದೆ.

ನರೇಂದ್ರ ಮೋದಿಯವರ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದಲೂ, ಜನಸಾಮಾನ್ಯರ ಅನುಕೂಲಕ್ಕಾಗಿ ಹಲವಾರು ಉಪಕ್ರಮಗಳನ್ನು ಕೈಗೊಂಡಿದೆ ಮತ್ತು ಪರಿಸರ ಮತ್ತು ಅದಕ್ಕೆ ಸಂಬಂಧಿಸಿದ ಇತರ ಕ್ಷೇತ್ರಗಳ ಮೇಲೆ ಸಕಾರಾತ್ಮಕ ಪರಿಣಾಮ ಬೀರುವ ನೀತಿಗಳನ್ನು



**ಹೊಸ ನಿಯಮಗಳ ಘಟನಾವಳಿ**

- **ಅಕ್ಟೋಬರ್ 1, 2021** – ಫಿಟ್‌ನೆಸ್ ಪರೀಕ್ಷೆಗಳು ಮತ್ತು ಸ್ಕ್ರ್ಯಾಪಿಂಗ್ ಕೇಂದ್ರಗಳಿಗೆ ನಿಯಮಗಳು
- **ಏಪ್ರಿಲ್ 1, 2022** – 15 ವರ್ಷಕ್ಕಿಂತ ಮೇಲ್ಪಟ್ಟ ಸರ್ಕಾರಿ ಮತ್ತು ಸರ್ಕಾರಿ ಸ್ವಾಮ್ಯದ ಉದ್ದಿಮೆಗಳ ವಾಹನಗಳನ್ನು ರದ್ದುಪಡಿಸುವುದು
- **ಏಪ್ರಿಲ್ 1, 2023** – ಭಾರಿ ವಾಣಿಜ್ಯ ವಾಹನಗಳಿಗೆ ಕಡ್ಡಾಯ ಫಿಟ್‌ನೆಸ್ ಪರೀಕ್ಷೆ
- **ಜೂನ್ 1, 2024** – ಕಡ್ಡಾಯ ಫಿಟ್ನೆಸ್- ಪರೀಕ್ಷೆ (ಇತರ ವರ್ಗಗಳಿಗೆ ಹಂತ ಹಂತವಾಗಿ)

**ಲಕ್ಷಾಂತರ ಹೊಸ ಉದ್ಯೋಗಗಳ ಸೃಷ್ಟಿ** | **ವಾಹನ ಗುಜರಿ ನೀತಿಯ ಬಗ್ಗೆ ನೀವು ತಿಳಿದುಕೊಳ್ಳಬೇಕಾದದ್ದು**

## ಏನಿದು ಗುಜರಿ ನೀತಿ?

- ಹೊಸ ವಾಹನ ಗುಜರಿ ನೀತಿಯು 15 ವರ್ಷಕ್ಕಿಂತ ಹಳೆಯದಾದ ವಾಣಿಜ್ಯ ವಾಹನಗಳಿಗೆ ಮತ್ತು 20 ವರ್ಷ ಹಳೆಯ ಖಾಸಗಿ ವಾಹನಗಳಿಗೆ ಅನ್ವಯಿಸುತ್ತದೆ. ವೈಯಕ್ತಿಕ ವಾಹನಗಳು ಪ್ರತಿವರ್ಷ ಸರ್ಕಾರಿ ಪ್ರಮಾಣೀಕೃತ ಫಿಟ್‌ನೆಸ್ ಕೇಂದ್ರಗಳಲ್ಲಿ ಫಿಟ್‌ನೆಸ್ ಪರೀಕ್ಷೆಗೆ ಒಳಗಾಗಬೇಕಾಗುತ್ತದೆ. ಏತನ್ಮಧ್ಯೆ, ಹಳೆಯ ವಾಹನಗಳ ನೋಂದಣಿ ನವೀಕರಣಾ ಶುಲ್ಕವನ್ನು ವಾಹನಗಳಿಗೆ ಅನುಗುಣವಾಗಿ ಎರಡರಿಂದ ಮೂರು ಪಟ್ಟು ಹೆಚ್ಚಿಸಲಾಗಿದೆ.
- ಫಿಟ್‌ನೆಸ್ ಪ್ರಮಾಣೀಕರಣವನ್ನು ಪಡೆಯಲು ವಿಫಲವಾದರೆ ಅಥವಾ ಅನರ್ಹವೆಂದು ಕಂಡುಬಂದಲ್ಲಿ, 15 ವರ್ಷಗಳ ನಂತರ ವಾಣಿಜ್ಯ ವಾಹನಗಳ ನೋಂದಣಿ ರದ್ದು ಮಾಡಲಾಗುತ್ತದೆ.
- ಅನರ್ಹವೆಂದು ಕಂಡುಬಂದಲ್ಲಿ ಅಥವಾ ನೋಂದಣಿ ಪ್ರಮಾಣಪತ್ರವನ್ನು ನವೀಕರಿಸಲು ವಿಫಲವಾದರೆ ಖಾಸಗಿ ವಾಹನಗಳನ್ನು 20 ವರ್ಷಗಳ ನಂತರ ನೋಂದಾಯಿಸಲಾಗುವುದಿಲ್ಲ. 15 ವರ್ಷಗಳು ಪೂರ್ಣಗೊಂಡ ನಂತರ, ವಾಹನಗಳು ಹೆಚ್ಚಿಸಿದ ಮರು ನೋಂದಣಿ ಶುಲ್ಕವನ್ನು ಪಾವತಿಸಬೇಕಾಗುತ್ತದೆ.
- ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳು, ನಗರ ಪಾಲಿಕೆಗಳು, ಪಂಚಾಯಿತಿಗಳು, ರಾಜ್ಯ ಸಾರಿಗೆ ಸಂಸ್ಥೆಗಳು, ಸಾರ್ವಜನಿಕ ವಲಯದ ಸಂಸ್ಥೆಗಳು ಮತ್ತು ಕೇಂದ್ರ ಮತ್ತು ರಾಜ್ಯ ಸರ್ಕಾರಗಳೊಂದಿಗಿನ ಸ್ವಾಯತ್ತ ಸಂಸ್ಥೆಗಳ ಎಲ್ಲಾ ವಾಹನಗಳನ್ನು ನೋಂದಾಯಿಸಿದ ದಿನಾಂಕದಿಂದ 15 ವರ್ಷಗಳ ನಂತರ ನೋಂದಾವಣಿ ರದ್ದು ಮಾಡಲಾಗುತ್ತದೆ.



## ವಾಹನಗಳ ಗುಜರಿ ನೀತಿಯ ಪ್ರಯೋಜನಗಳು

(ಎ) ಗುಜರಿ ಕೇಂದ್ರವು ಹಳೆಯ ವಾಹನಕ್ಕೆ ನೀಡಿದ ಗುಜರಿ ಮೌಲ್ಯವು ಹೊಸ ವಾಹನದ ಎಕ್ಸ್‌ಶೋ ರೂಂ ಬೆಲೆಯ ಸರಿಸುಮಾರು 4-6 ರಷ್ಟಿರುತ್ತದೆ.

(ಬಿ) ಗುಜರಿ ಪ್ರಮಾಣಪತ್ರ ನೀಡಿದರೆ ವಾಹನ ತಯಾರಕರು ಹೊಸ ವಾಹನಗಳ ಖರೀದಿಗೆ ಶೇ 5 ರಷ್ಟು ರಿಯಾಯಿತಿ ನೀಡಲಿದ್ದಾರೆ. ನೀವು 10 ಲಕ್ಷ ರೂ.ಗಳ ಎಕ್ಸ್‌ಶೋರೂಂ ಬೆಲೆಯೊಂದಿಗೆ ವಾಹನವನ್ನು ಖರೀದಿಸಿದರೆ, ನಿಮಗೆ ಸುಮಾರು 50,000 ರೂ.ಗಳ ರಿಯಾಯಿತಿ ಸಿಗುತ್ತದೆ. ಈ ರಿಯಾಯಿತಿ ಕಾಲಕಾಲಕ್ಕೆ ವಾಹನ ತಯಾರಕರು ನಿಮಗೆ ನೀಡುವ ರಿಯಾಯಿತಿಗೆ ಹೆಚ್ಚುವರಿಯಾಗಿರುತ್ತದೆ.

(ಸಿ) ಗುಜರಿ ಪ್ರಮಾಣಪತ್ರ ಹೊಂದಿರುವವರಿಗೆ ಹೊಸ ವಾಹನವನ್ನು ಖರೀದಿಸಿದಾಗ ನೋಂದಣಿ ಶುಲ್ಕವನ್ನು ಸಹ ಮನ್ನಾ ಮಾಡಬಹುದು.

(ಡಿ) ವೈಯಕ್ತಿಕ ವಾಹನಗಳಿಗೆ ಶೇ 25 ರವರೆಗೆ ಮತ್ತು ವಾಣಿಜ್ಯ ವಾಹನಗಳಿಗೆ ಶೇ 15 ರವರೆಗೆ ರಸ್ತೆ ತೆರಿಗೆ ರಿಯಾಯಿತಿ ನೀಡುವಂತೆ ರಾಜ್ಯ ಸರ್ಕಾರಗಳಿಗೆ ಸೂಚಿಸಲಾಗಿದೆ.

### ಮರುಬಳಕೆಯಿಂದ ವೆಚ್ಚದಲ್ಲಿ ಕಡಿತ

ದೇಶದಲ್ಲಿ ಗುಜರಿ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಗುಜರಿ ಕೇಂದ್ರಗಳಲ್ಲಿ ಹಳೆಯ ವಾಹನಗಳನ್ನು ಮರುಬಳಕೆ ಮಾಡಲಾಗುತ್ತದೆ. ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರ ಪ್ರಕಾರ, ಗುಜರಿ ಸೌಲಭ್ಯವಿಲ್ಲದ ದೇಶಗಳಲ್ಲಿನ ವಾಹನಗಳನ್ನು ಸಹ ಈ ಕೇಂದ್ರಗಳಲ್ಲಿ ಗುಜರಿಗೆ ಹಾಕಬಹುದು. ಇದು ಅಲ್ಯುಮಿನಿಯಂ, ತಾಮ್ರ ಮತ್ತು ರಬ್ಬರ್ ಮರುಬಳಕೆಯನ್ನು ಉತ್ತೇಜಿಸುತ್ತದೆ. ವಾಹನ ಉತ್ಪಾದನಾ ಕಂಪನಿಗಳು ಮರುಬಳಕೆಯಿಂದ ಕಚ್ಚಾ ವಸ್ತುಗಳನ್ನು ಪಡೆಯುತ್ತವೆ. ಅಂದಾಜಿನ ಪ್ರಕಾರ ವಾಹನಗಳ ವೆಚ್ಚ ಶೇಕಡಾ 40 ರಷ್ಟು ಕಡಿಮೆಯಾಗುವ ನಿರೀಕ್ಷೆಯಿದೆ.

ರೂಪಿಸಿದೆ. ಹಳೆಯ ಮತ್ತು ಅನರ್ಹ ವಾಹನಗಳಿಗೆ ಹೊಸ ವಾಹನ ಗುಜರಿ ನೀತಿ ಈ ದಿಕ್ಕಿನತ್ತ ಹೆಜ್ಜೆಯಾಗಿದೆ. ಫೆಬ್ರವರಿ 21, 2021 ರಂದು ಕೇಂದ್ರ ಬಜೆಟ್ ಮಂಡಿಸುವಾಗ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಇದನ್ನು ಘೋಷಿಸಿದರು. ಹೊಸ ವಾಹನ ಗುಜರಿ ನೀತಿಯ ಕರಡನ್ನು ಹಣಕಾಸು ಸಚಿವರು ಘೋಷಿಸಿದ 46 ದಿನಗಳಲ್ಲಿ ಮಾರ್ಚ್ 18 ರಂದು ಕೇಂದ್ರ ರಸ್ತೆ ಮತ್ತು ಸಾರಿಗೆ ಸಚಿವ ನಿತಿನ್ ಗಡ್ಕರಿ ಹೊರಡಿಸಿರುವುದು ಸಮಯ ನಿಗದಿಯಲ್ಲಿ ಕೆಲಸ ಮಾಡುವ ಸರ್ಕಾರದ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ. ಕರಡು ಕುರಿತ ಎಲ್ಲಾ ಸಲಹೆಗಳನ್ನು ಪರಿಗಣಿಸಿದ ನಂತರ ಅಕ್ಟೋಬರ್ 1 ರಿಂದ ನೀತಿಯನ್ನು ಜಾರಿಗೆ ತರಲಾಗುವುದು.

ಇದೀಗ ಅಮೆರಿಕಾ, ಜರ್ಮನಿ, ರಷ್ಯಾ, ಜಪಾನ್ ಮತ್ತು ಇಂಗ್ಲೇಂಡ್ ಮುಂತಾದ ದೇಶಗಳು ಮಾತ್ರ ಗುಜರಿ ನೀತಿಯನ್ನು

# ಪ್ರಯೋಜನಗಳನ್ನು ನೀವು ಈ ರೀತಿಯೂ ಅರ್ಥಮಾಡಿಕೊಳ್ಳಬಹುದು...

ನೀವು ವಾಹನವನ್ನು ಗುಜರಿಗೆ ನೀಡಿದ್ದೀರಿ ಎಂದು ಭಾವಿಸೋಣ. ಮಾರುಕಟ್ಟೆಯಲ್ಲಿ ಈ ವಾಹನದ ಬೆಲೆ ಸುಮಾರು 10 ಲಕ್ಷ ರೂ. ಆದ್ದರಿಂದ, ಈ ಹಳೆಯ ವಾಹನದ ಗುಜರಿ ಕೇಂದ್ರದಿಂದ ನೀವು ಅಂದಾಜು 60,000 ರೂ. ಗಳನ್ನು ಪಡೆಯುತ್ತೀರಿ. ಈಗ, ನೀವು ವೈಯಕ್ತಿಕ ಬಳಕೆಗಾಗಿ 10 ಲಕ್ಷ ರೂಪಾಯಿಗಳ ಎಕ್ಸ್ ಶೋರೂಂನ ಹೊಸ ಪೆಟ್ರೋಲ್ ವಾಹನವನ್ನು ಖರೀದಿಸಿದರೆ, ಗುಜರಿ ನೀತಿಯ ಪ್ರಕಾರ ನಿಮಗೆ ದೊರೆಯುವ ಪ್ರಯೋಜನಗಳು

ಎಕ್ಸ್ ಶೋ ರೂಂ ಬೆಲೆ
₹ 10,00000

ಗುಜರಿ ಪ್ರಮಾಣಪತ್ರ ನೀಡಿದರೆ
₹50,000

₹600
ನೋಂದಣಿ ರಿಯಾಯ್ತಿ



ದೆಹಲಿಯಲ್ಲಿ ಶೇಕಡಾ 7 ರಷ್ಟು ರಸ್ತೆ ತೆರಿಗೆ ಇದೆ. ಅಂದರೆ ಸುಮಾರು 70,000 ರೂ

ಇದರ ಮೇಲೆ ಶೇ 25 ರಷ್ಟು ರಿಯಾಯಿತಿ: 17,500 ರೂ

ನಿಮ್ಮ ಒಟ್ಟು ಲಾಭ
60,000+50,000+600+17,500 = 1,28,100

(ಅಂಕಿ ಸಂಖ್ಯೆಗಳು ಅಂದಾಜು ಆಗಿವೆ. ನೀತಿಯ ಅಂತಿಮ ಕರಡು ಸಿದ್ಧವಾದಾಗ ಬದಲಾವಣೆಗಳಾಗಬಹುದು)

### ವಿಶ್ವದ ಅತಿದೊಡ್ಡ ಆಟೋಮೊಬೈಲ್ ಹಬ್ ಆಗಲಿರುವ ಭಾರತ

ಭಾರತೀಯ ವಾಹನ ತಯಾರಿಕಾ ಕಂಪನಿಗಳು **50%** ರಷ್ಟು ವಾಹನಗಳನ್ನು ಇತರ ದೇಶಗಳಿಗೆ ರಫ್ತು ಮಾಡುತ್ತವೆ

ಗುಜರಿ ನೀತಿಯಲ್ಲಿ ಮರುಬಳಕೆ ಮಾಡುವಿಕೆಯ ಉತ್ತೇಜನವುವಾಹನಗಳ ಬೆಲೆಯನ್ನು ಮತ್ತಷ್ಟು ಕಡಿಮೆ ಮಾಡುತ್ತದೆ, ಬೆಲೆಗಳು ಪ್ರಪಂಚದಲ್ಲಿ ಹೆಚ್ಚು ಸ್ಪರ್ಧಾತ್ಮಕವಾಗಲಿದೆ

ಗುಜರಿ ನೀತಿಯು ಭಾರತವನ್ನು ವಿಶ್ವದ ಅತಿದೊಡ್ಡ ವಾಹನ ಕೇಂದ್ರವನ್ನಾಗಿ ಮಾಡುತ್ತದೆ. ಪ್ರತಿ ಜಿಲ್ಲೆಯಲ್ಲಿಯೂ ವಾಹನಗಳ ಫಿಟ್‌ನೆಸ್ ಮತ್ತು ಮಾಲಿನ್ಯ ಮಟ್ಟವನ್ನು ಪರೀಕ್ಷಿಸಲು ಕೇಂದ್ರಗಳನ್ನು ಸ್ಥಾಪಿಸಲಾಗುವುದು



ಇದು ರೂ. **10,000** ಕೋ. ಹೂಡಿಕೆಯನ್ನು ಆಕರ್ಷಿಸುತ್ತದೆ

ಅದೇ ಸಮಯದಲ್ಲಿ,

**35,000**

ಹೊಸ ನೇರ ಉದ್ಯೋಗಗಳು ಸೃಷ್ಟಿಯಾಗಲಿವೆ ಪರೋಕ್ಷವಾಗಿ ಲಕ್ಷಾಂತರ ಹೊಸ ಉದ್ಯೋಗಗಳು ಸೃಷ್ಟಿಯಾಗುತ್ತವೆ

### ಇ-ವಾಹನಗಳಿಗೆ ಪ್ರೋತ್ಸಾಹ

ಹೊಸ ಗುಜರಿ ನೀತಿಯ ಜೊತೆಗೆ, ಸರ್ಕಾರವು ದೇಶದಲ್ಲಿ ಎಲೆಕ್ಟ್ರಿಕ್ ವಾಹನಗಳನ್ನು ಉತ್ತೇಜಿಸುತ್ತಿದೆ. ಈ ವಾಹನಗಳಲ್ಲಿ ಬಳಸುವ ಶೇಕಡಾ 81 ರಷ್ಟು ಲೀಥಿಯಂ ಬ್ಯಾಟರಿಗಳನ್ನು ದೇಶದಲ್ಲಿಯೇ ತಯಾರಿಸಲಾಗುತ್ತಿದೆ.

### ಮಾಲಿನ್ಯಕ್ಕೆ ತಡೆ, ಇಂಧನದಲ್ಲಿ ಉಳಿತಾಯ

- ಈ ನೀತಿಯ ವ್ಯಾಪ್ತಿಯಲ್ಲಿ ರಸ್ತೆಗಳಲ್ಲಿ ಓಡಾಡಲು ಅನರ್ಹವಾದ ಒಂದು ಕೋಟಿ ಹಳೆಯ ವಾಹನಗಳನ್ನು ಭಾರತ ಹೊಂದಿದೆ. 2025 ರ ವೇಳೆಗೆ ಅಂತಹ ವಾಹನಗಳ ಸಂಖ್ಯೆ ಸುಮಾರು 2.8 ಕೋಟಿ ಇರುತ್ತದೆ. ವಾಸ್ತವವಾಗಿ, ಹಳೆಯ ವಾಹನವು (ಉದಾಹರಣೆಗೆ 15 ವರ್ಷಕ್ಕಿಂತ ಹಳೆಯದು) ಪ್ರಮಾಣಿತ ಮತ್ತು ಆಧುನಿಕ ವಾಹನಕ್ಕಿಂತ 10-12 ಪಟ್ಟು ಹೆಚ್ಚು ಮಾಲಿನ್ಯವನ್ನು ಉಂಟುಮಾಡುತ್ತದೆ
- ಅಂತಹ ಹಳೆಯ ವಾಹನಗಳನ್ನು ರಸ್ತೆಗಳಿಂದ ಹಿಂತೆಗೆದುಕೊಳ್ಳುವುದರಿಂದ ಇಂಗಾಲಾಮ್ಲ ಹೊರಸೂಸುವಿಕೆಯು ಶೇಕಡಾ 17 ರಷ್ಟು ಕಡಿಮೆಯಾಗುತ್ತದೆ. ಅಂತಹ ವಾಹನಗಳಿಂದ ಹೊರಹೊಮ್ಮುವ ವಿಷಕಾರಿ ಕಣಗಳು ಶೇಕಡಾ 24 ರಷ್ಟು ಕಡಿಮೆಯಾಗುತ್ತವೆ. ಅಧ್ಯಯನದ ಪ್ರಕಾರ, ಒಟ್ಟು ಮಾಲಿನ್ಯದ ಶೇಕಡಾ 60 ಕ್ಕಿಂತ ಹೆಚ್ಚು ವಾಹನ ಮಾಲಿನ್ಯದಿಂದಲೇ ಉಂಟಾಗುತ್ತದೆ.

ಹೊಂದಿವೆ. ಈ ದೇಶಗಳ ಮಾನದಂಡಗಳ ತುಲನಾತ್ಮಕ ಅಧ್ಯಯನದ ನಂತರ ಅಂತರರಾಷ್ಟ್ರೀಯ ಅತ್ಯುತ್ತಮ ಅಭ್ಯಾಸಗಳಿಂದ ಅಳವಡಿಸಿಕೊಂಡ ಮಾನದಂಡಗಳ ಪ್ರಕಾರ ಸರ್ಕಾರ ಈ ನೀತಿಯನ್ನು ರೂಪಿಸಿದೆ. ಹೊಸ ಗುಜರಿ ನೀತಿಯು ಹೆಚ್ಚಿನ ಸಂಖ್ಯೆಯ ಉದ್ಯೋಗಗಳನ್ನು ಸೃಷ್ಟಿಸುವುದಲ್ಲದೆ, ವಾಹನ ವಲಯಕ್ಕೆ ಹೊಸ ವೇಗವನ್ನು ನೀಡುತ್ತದೆ. ಎಲ್ಲಾ ಸಲಹೆಗಳನ್ನು ಗಣನೆಗೆ ತೆಗೆದುಕೊಂಡ ನಂತರ ಹೊಸ ನೀತಿ ಜಾರಿಗೆ ಬರಲಿದೆ. ■



# ನೀರಿನ ಸಂರಕ್ಷಣೆಗಾಗಿ ಸ್ಮರಣೀಯ ಪ್ರತಿಜ್ಞೆ

**ತನ್ನ ನೀತಿಗಳು ಮತ್ತು ನಿರ್ಧಾರಗಳಲ್ಲಿ ನೀರಿನ ಸಂರಕ್ಷಣೆಗೆ ಆದ್ಯತೆ ನೀಡುತ್ತಿರುವ ಸರ್ಕಾರವು ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ, ಪ್ರತಿ ಜಮೀನಿಗೂ ನೀರು ಅಭಿಯಾನ (ಹರ್ ಖೇತ್ ಕೋ ಪಾನಿ), 'ಪರ್ ಡ್ರಾಪ್ ಮೋರ್ ಕ್ರಾಪ್' ಅಭಿಯಾನ, ನಮಾಮಿ ಗಂಗೆ ಮಿಷನ್, ಜಲ ಜೀವನ್ ಮಿಷನ್ ಮತ್ತು ಅಟಲ್ ಭೂಜಲ ಯೋಜನೆಯಂತಹ ಹಲವಾರು ಕಾರ್ಯಕ್ರಮಗಳನ್ನು ಕೈಗೊಂಡಿದೆ. ಈಗ, ನೀರಿನ ಸಂರಕ್ಷಣೆಯ ದಿಕ್ಕಿನಲ್ಲಿ 'ಕ್ಯಾಚ್ ದಿ ರೇನ್' -ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಮಳೆನೀರನ್ನು ಸಂಗ್ರಹಿಸಿ- ಅಭಿಯಾನ ಮತ್ತು ನದಿ ಜೋಡಣೆಯ ಯೋಜನೆಯೊಂದಿಗೆ ಐತಿಹಾಸಿಕ ಆರಂಭವನ್ನು ಮಾಡಲಾಗಿದೆ.**

> "ನೀರು ನಮಗೆ ಜೀವನ, ನಂಬಿಕೆ ಮತ್ತು ಅಭಿವೃದ್ಧಿಯ ತೊರೆ. ಒಂದು ರೀತಿಯಲ್ಲಿ ನೀರು ಸ್ಪರ್ಶಮಣಿಗಿಂತಲೂ ಅಮೂಲ್ಯವಾದುದು. ಮಣಿಯ ಸ್ಪರ್ಶವು ಕಬ್ಬಿಣವನ್ನು ಚಿನ್ನವಾಗಿ ಪರಿವರ್ತಿಸುತ್ತದೆ ಎಂದು ಹೇಳಲಾಗುತ್ತದೆ. ಅಂತೆಯೇ, ನೀರು ಜೀವನಕ್ಕೆ ಮಾತ್ರವಲ್ಲದೆ ಅಭಿವೃದ್ಧಿಗೂ ಸಹ ಅವಶ್ಯಕವಾಗಿದೆ.
>
> ಪ್ರಧಾನ ಮಂತ್ರಿ ನರೇಂದ್ರ ಮೋದಿ



ಪ್ರತಿ ವರ್ಷ, ದೇಶದ ಮೂರನೇ ಒಂದು ಭಾಗದಷ್ಟು ಸುಮಾರು 40 ಮಿಲಿಯನ್ ಹೆಕ್ಟೇರ್ ಭೂಮಿಯು ಬರ ಮತ್ತು ಪ್ರವಾಹದಿಂದಾಗಿ ಬಾಧಿತವಾಗುತ್ತದೆ. ಈ ಅಸಮತೋಲನವನ್ನು ಪರಿಹರಿಸಲು ಸಾಧ್ಯವಾದರೆ, ದೇಶದ ಅಪಾರ ನೀರಿನ ಭಂಡಾರವು ವಿನಾಶದ ಕಥೆಯನ್ನಲ್ಲದೇ, ಅಭಿವೃದ್ಧಿಯ ಕಥೆಯನ್ನು ಮಾತ್ರ ಬರೆಯಬಲ್ಲದು. ಪ್ರಸ್ತುತ ಮತ್ತು ಭವಿಷ್ಯದ ಬಿಕ್ಕಟ್ಟುಗಳನ್ನು ಎದುರಿಸುವ ಸಲುವಾಗಿ, ಮಾರ್ಚ್ 22 ರಂದು ವಿಶ್ವ ಜಲ ದಿನಾಚರಣೆಯ ಸಂದರ್ಭದಲ್ಲಿ ಸರ್ಕಾರವು ನದಿ ಸಂಪರ್ಕಿಸುವ ಯೋಜನೆ ಮತ್ತು ನೀರು ಕೊಯ್ಲು ರೂಪದಲ್ಲಿ ಒಂದು ಕ್ರಾಂತಿಕಾರಿ ಆರಂಭವನ್ನು ಮಾಡಿದೆ. 'ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಮಳೆ ನೀರು ಹಿಡಿದಿಡಿ' 'ಅಭಿಯಾನದ ಜೊತೆಗೆ, ಬಹುನಿರೀಕ್ಷಿತ ಕೆನ್-ಬೆತ್ವಾ ಜೋಡಣೆ ಯೋಜನೆ ಸಹ ಸಾಕಾರಗೊಳ್ಳಲಿದೆ.

ನೀರಿನ ಸಂರಕ್ಷಣೆ | ಮಳೆ ನೀರು ಹಿಡಿದಿಡಿ

# ಕೆನ್-ಬೆತ್ವಾ ನದಿ ಜೋಡಣೆ

## ಬುಂದೇಲ್‌ಖಂಡ್‌ನಲ್ಲಿ ಹೊಸ ಶಕೆ




| ಭಾಗವಹಿಸುವ ರಾಜ್ಯಗಳು | ಪ್ರಯೋಜನ ಪಡೆಯುವ ಬುಂದೇಲ್‌ಖಂಡ್‌ನ ಜಿಲ್ಲೆಗಳು | | |
|---|---|---|---|
| ಉತ್ತರ ಪ್ರದೇಶ ಮತ್ತು ಮಧ್ಯ ಪ್ರದೇಶ | | • ಮಧ್ಯಪ್ರದೇಶ<br>• ಛತರ್‌ಪುರ್ • ಪನ್ನಾ<br>• ತಿಕಮ್‌ಗಢ | • ಉತ್ತರ ಪ್ರದೇಶ<br>• ಲಲಿತಪುರ • ಝಾನ್ಸಿ<br>• ಬಂಡಾ • ಮಹೋಬಾ |

ಕೆನ್-ಬೆತ್ವಾ ನದಿಗಳ ಜೋಡಣೆ ಯೋಜನೆಯು ರಾಷ್ಟ್ರೀಯ ಮಟ್ಟದಲ್ಲಿ ನದಿ ಜೋಡಣೆಯ ಮೊದಲ ಯೋಜನೆಯಾಗಿದೆ. ಇದು ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಕನಸಾಗಿತ್ತು.ಈಗ ಅದನ್ನು ಪ್ರಧಾನಿ ನರೇಂದ್ರ ಮೋದಿ ಅವರು ನನಸಾಗಿಸುತ್ತಿದ್ದಾರೆ. ಬಹುನಿರೀಕ್ಷಿತ ಕೆನ್-ಬೆತ್ವಾ ಜೋಡಣೆ ಯೋಜನೆಯನ್ನು ಪ್ರಾರಂಭಿಸುವುದರೊಂದಿಗೆ ನದಿ ಜೋಡಣೆ ಯೋಜನೆಗೆ ಆರಂಭ ನೀಡಲಾಗಿದೆ. "ನದಿಗಳನ್ನು ಜೋಡಿಸಲು ಅಟಲ್ ಜಿಯವರಿಗೆ ರಿವರ್ ಗ್ರಿಡ್ ಕನಸು ಇತ್ತು. ಕೆನ್-ಬೆತ್ವಾ ನದಿಗಳನ್ನು ಜೋಡಿಸುವ ಜವಾಬ್ದಾರಿಯನ್ನು ನಾವು ತೆಗೆದುಕೊಂಡಿದ್ದೇವೆ. ಕೆನ್-ಬೆತ್ವಾ ಯೋಜನೆಯನ್ನು ಕಾರ್ಯಗತಗೊಳಿಸಿದ ನಂತರ ಮತ್ತು ನೀರು ನೆಲಕ್ಕೆ ಹೋಗಲು ಪ್ರಾರಂಭಿಸಿದಾಗ, ಬುಂದೇಲ್‌ಖಂಡ್‌ನ ನೀರಿನ ಮಟ್ಟ ಸುಧಾರಿಸುತ್ತದೆ. ಇದು ರೈತರಿಗೆ ಅಪಾರ ಪ್ರಯೋಜನವನ್ನು ನೀಡುತ್ತದೆ." ಎಂಬ ಪ್ರಧಾನ ಮಂತ್ರಿಯವರ ಮಾತುಗಳು ಅವರ ಸಂಕಲ್ಪವನ್ನು ಪ್ರತಿಬಿಂಬಿಸುತ್ತವೆ. ನದಿಗಳನ್ನು ಜೋಡಿಸುವ ಪ್ರಧಾನ ಮಂತ್ರಿಯವರ ಪ್ರತಿಜ್ಞೆಯ ಹಿಂದೆ ಪ್ರತಿ ಹನಿ ನೀರಿಗಾಗಿ ಹಂಬಲಿಸುವ ಬುಂದೇಲ್‌ಖಂಡ್‌ನ ಜನರ ಬಗ್ಗೆ ಒಂದು ಸೂಕ್ಷ್ಮ ಸಂವೇದನೆಯಿದೆ.

**ಕೆನ್ ನದಿಯ ನೀರನ್ನು ಬೆತ್ವಾ ನದಿಗೆ ತರಲು 221 ಕಿ.ಮೀ ಉದ್ದದ ಸಂಪರ್ಕ ಕಾಲುವೆ**

*ಯೋಜನೆಯ ಅಡಿಯಲ್ಲಿ, ಕೆನ್ ನದಿಯ 2,800 ಮಿಲಿಯನ್ ಘನ ಮೀಟರ್ (ಎಂಸಿಎಂ) ಗಿಂತ ಹೆಚ್ಚಿನ ಪ್ರವಾಹದ ನೀರನ್ನು ಧೌಧನ್ ಅಣೆಕಟ್ಟೆನಲ್ಲಿ ಸಂಗ್ರಹಿಸಲಾಗುವುದು. ಇದಲ್ಲದೆ, ಕೆನ್‌ನ ನೀರನ್ನು ಬೆತ್ವಾ ನದಿಗೆ ತರಲು 221 ಕಿ.ಮೀ ಉದ್ದದ ಸಂಪರ್ಕ ಕಾಲುವೆಯನ್ನು ನಿರ್ಮಿಸಲಾಗುವುದು. ಈ ಪ್ರದೇಶದ ವಿವಿಧ ಕೆರೆಗಳು, ಜಲಾಶಯಗಳನ್ನು ಜೋಡಣೆ ಯೋಜನೆಯೊಂದಿಗೆ ಸಂಯೋಜಿಸಲಾಗುವುದು.*

### ನೀರಾವರಿಗೆ ಸಾಕಷ್ಟು ನೀರು

ಈ ಯೋಜನೆಯು ಮಧ್ಯಪ್ರದೇಶದ ಒಂಬತ್ತು ಜಿಲ್ಲೆಗಳಾದ ಪನ್ನಾ, ತಿಕಮ್‌ಗಢ, ಛತರ್‌ಪುರ್, ಸಾಗರ್, ದಾಮೋ, ದಾಟಿಯಾ, ವಿದಿಶಾ, ಶಿವಪುರಿ ಮತ್ತು ರೈಸನ್ ಜೊತೆಗೆ ಉತ್ತರ ಪ್ರದೇಶದ ನಾಲ್ಕು ಜಿಲ್ಲೆಗಳಾದ ಬಂಡಾ, ಮಹೋಬಾ, ಝಾನ್ಸಿ ಮತ್ತು ಲಲಿತಪುರಗಳಿಗೆ ನೇರವಾಗಿ ಪ್ರಯೋಜನವನ್ನು ನೀಡುತ್ತದೆ. ಬುಂದೇಲ್‌ಖಂಡ್ ಪ್ರದೇಶದ ಚಿತ್ರಣವನ್ನು ಬದಲಾಯಿಸುವ ಕೆನ್-ಬೆತ್ವಾ ನದಿ ಜೋಡಣೆ ಯೋಜನೆಯು ಪೂರ್ಣಗೊಂಡ ನಂತರ, ಎರಡು ರಾಜ್ಯಗಳ 13 ಜಿಲ್ಲೆಗಳಲ್ಲಿ ಸುಮಾರು 10.62 ಲಕ್ಷ ಹೆಕ್ಟೇರ್ ಕೃಷಿ ಭೂಮಿಯು ನೀರಾವರಿ ಸೌಲಭ್ಯ ಪಡೆಯುತ್ತದೆ.

**8.11** ಲಕ್ಷ ಹೆಕ್ಟೇರ್ ಭೂಮಿಗೆ ಮಧ್ಯಪ್ರದೇಶದಲ್ಲಿ ನೀರಾವರಿ

**2.51** ಲಕ್ಷ ಹೆಕ್ಟೇರ್ ಭೂಮಿಗೆ ಉತ್ತರ ಪ್ರದೇಶದಲ್ಲಿ ನೀರಾವರಿ

ಶುದ್ಧ ಕುಡಿಯುವ ನೀರು **62 ಲಕ್ಷ** ಜನರಿಗೆ

**130 ಮೆ.ವ್ಯಾ** ವಿದ್ಯುತ್ ಉತ್ಪಾದನೆ

### ಸಾರ್ವಜನಿಕ ಭಾಗವಹಿಸುವಿಕೆಯೊಂದಿಗೆ ಜನಾಂದೋಲನ

ಮಾರ್ಚ್ 22 ರಿಂದ ನವೆಂಬರ್ 30 ರವರೆಗೆ ದೇಶದ ಎಲ್ಲಾ ಜಿಲ್ಲೆಗಳ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 'ಕ್ಯಾಚ್ ದಿ ರೇನ್' ಅಭಿಯಾನ ಮುಂದುವರಿಯಲಿದ್ದು, ಇದರಿಂದ ನೀರಿನ ಸಂರಕ್ಷಣಾ ಅಭಿಯಾನವು ಸಾರ್ವಜನಿಕರ ಸಹಭಾಗಿತ್ವದೊಂದಿಗೆ ಬೃಹತ್ ಆಂದೋಲನವಾಗಿದೆ. ಇತ್ತೀಚೆಗೆ, ಪ್ರಧಾನಿ ನರೇಂದ್ರ ಮೋದಿ ಅವರು ಅಭಿಯಾನಕ್ಕೆ ಚಾಲನೆ ನೀಡಿದರು ಮತ್ತು ಕೆನ್-ಬೆತ್ವಾ ಜೋಡಣೆ ಯೋಜನೆಯ ಐತಿಹಾಸಿಕ ಒಪ್ಪಂದಕ್ಕೆ ಸಹಿ ಹಾಕಿದರು. ಅದೇ ಸಮಯದಲ್ಲಿ, ಎಲ್ಲಾ ಗ್ರಾಮ ಪಂಚಾಯಿತಿಗಳು ನೀರು ಮತ್ತು ಅದರ ಸಂರಕ್ಷಣೆಗೆ ಸಂಬಂಧಿಸಿದ ವಿವಿಧ ಅಂಶಗಳನ್ನು ಚರ್ಚಿಸಲು ದೇಶಾದ್ಯಂತ ಗ್ರಾಮ ಸಭೆಗಳನ್ನು ಆಯೋಜಿಸಿದರು. ಈ ಸಂದರ್ಭದಲ್ಲಿ "ನೀರಿನ ಪ್ರತಿಜ್ಞೆಯನ್ನು" ಸಹ ಬೋಧಿಸಲಾಯಿತು. "ಈ ಪ್ರಯತ್ನಗಳ ನಡುವೆಯೂ, ನಮ್ಮ ದೇಶದಲ್ಲಿ ಹೆಚ್ಚಿನ ಮಳೆ ನೀರು ಪೋಲಾಗುತ್ತಿರುವುದು ಕಳವಳದ ಸಂಗತಿ. ಉತ್ತಮ ಭಾರತವು ಮಳೆನೀರನ್ನು ನಿರ್ವಹಿಸುತ್ತದೆ, ದೇಶವು ಅಂತರ್ಜಲವನ್ನು ಅವಲಂಬಿಸುವುದು ಕಡಿಮೆಯಾಗುತ್ತದೆ. ಆದ್ದರಿಂದ, 'ಕ್ಯಾಚ್ ದಿ ರೇನ್' ನಂತಹ

## ‘ಕ್ಯಾಚ್ ದಿ ರೇನ್’ ಅಭಿಯಾನ ಕುರಿತು ಪ್ರಧಾನ ಮಂತ್ರಿ

*“ನೀರಿನ ಕಡೆಗೆ ನಮ್ಮ ಪ್ರವೃತ್ತಿ ಬದಲಾದಾಗ, ಪ್ರಕೃತಿಯೂ ಸಹ ನಮಗೆ ಬೆಂಬಲ ನೀಡುತ್ತದೆ. ಶಾಂತಿಗಾಗಿ ಹೆಚ್ಚು ಬೆವರು ಹರಿಸಿದರೆ, ಯುದ್ಧದಲ್ಲಿ ಕಡಿಮೆ ರಕ್ತಪಾತವಾಗುತ್ತದೆ ಎಂದು ಸೈನ್ಯದ ಬಗ್ಗೆ ಹೇಳಲಾಗುತ್ತದೆ.. ಈ ನಿಯಮವು ನೀರಿಗೂ ಅನ್ವಯಿಸುತ್ತದೆ ಎಂದು ನಾನು ಭಾವಿಸುತ್ತೇನೆ. ನಾವು ಕಷ್ಟಪಟ್ಟು ಮಳೆಯ ನೀರನ್ನು ಉಳಿಸುವ ಯೋಜನೆಗಳನ್ನು ರೂಪಿಸಿದರೆ, ಎಲ್ಲಾ ಕೆಲಸಗಳು ನಿಂತುಹೋಗುವ, ಜನಸಾಮಾನ್ಯರಿಗೆ ತೊಂದರೆಯಾಗುವ ಮತ್ತು ಪ್ರಾಣಿಗಳ ವಲಸೆಗೆ ಕಾರಣವಾಗುವ ಬರಗಾಲದ ಸಮಯದಲ್ಲಿ ನಾವು ಶತಕೋಟಿ ರೂಪಾಯಿಗಳಷ್ಟು ನಷ್ಟವನ್ನು ತಡೆಯಬಹುದು. ಶಾಂತಿಕಾಲದಲ್ಲಿ ಬೆವರು ಹರಿಸುವ ಮಂತ್ರವು ಯುದ್ಧದ ಸಮಯದಲ್ಲಿ ಉಪಯುಕ್ತವಾದಂತೆ, ಮಳೆಗೂ ಮೊದಲು ಜೀವಗಳನ್ನು ಉಳಿಸಲು ನಾವು ಹೆಚ್ಚಿನ ಪ್ರಯತ್ನಗಳನ್ನು ಮಾಡಿದರೆ ಅದೇ ಪ್ರಯೋಜನ ಇಲ್ಲೂ ಆಗುತ್ತದೆ.”*

- ನಮ್ಮ ಪೂರ್ವಜರು ನಮಗೆ ಒದಗಿಸಿರುವ ನೀರನ್ನು ಮುಂದಿನ ಪೀಳಿಗೆಗೆ ಲಭ್ಯವಾಗುವಂತೆ ಮಾಡುವುದು ನಮ್ಮ ಜವಾಬ್ದಾರಿಯಾಗಿದೆ. ನಾವು ನೀರನ್ನು ಸಂರಕ್ಷಿಸುವ ಪ್ರತಿಜ್ಞೆಯನ್ನು ಮಾಡಬೇಕು
- ಎಂಜಿಎನ್‌ಆರ್‌ಇಜಿಎಯ ಪ್ರತಿ ಪೈಸೆಯನ್ನೂ ಮಳೆಗಾಲ ಆರಂಭವಾಗುವವರೆಗೆ ಈ ಕೆಲಸಕ್ಕೆ ಬಳಸಿಕೊಳ್ಳಬೇಕೆಂದು ನಾನು ಬಯಸುತ್ತೇನೆ. ಎಂಜಿಎನ್‌ಆರ್‌ಇಜಿಎ ಹಣವನ್ನು ನೀರಿಗೆ ಸಂಬಂಧಿಸಿದ ಸಿದ್ಧತೆಗಳನ್ನು ಹೊರತುಪಡಿಸಿ ಬೇರೆ ಯಾವುದಕ್ಕೂ ಖರ್ಚು ಮಾಡಬಾರದು
- ಅಭಿವೃದ್ಧಿ ಮತ್ತು ಸ್ವಾವಲಂಬನೆಯ ಬಗ್ಗೆ ಭಾರತದ ದೃಷ್ಟಿಕೋನವು ನಮ್ಮ ಜಲಮೂಲಗಳು ಮತ್ತು ನಮ್ಮ ನೀರಿನ ಸಂಪರ್ಕವನ್ನು ಅವಲಂಬಿಸಿರುತ್ತದೆ
- ಸ್ವಾತಂತ್ರ್ಯದ ನಂತರ ಮೊದಲ ಬಾರಿಗೆ ನೀರು ಪರೀಕ್ಷೆಗೆ ಸಂಬಂಧಿಸಿದಂತೆ ಸರ್ಕಾರ ಇಷ್ಟು ಗಂಭೀರವಾಗಿ ಕಾರ್ಯನಿರ್ವಹಿಸುತ್ತಿದೆ. ಪ್ರತಿ ಹಳ್ಳಿಯಲ್ಲಿ ಕನಿಷ್ಠ ಐದು ಮಂದಿ ವಿದ್ಯಾವಂತ ಮಹಿಳೆಯರು ನೀರು ಪರೀಕ್ಷಿಸುತ್ತಿದ್ದಾರೆ. ನೀರಿನ ನಿರ್ವಹಣೆಯಲ್ಲಿ ನಮ್ಮ ಸಹೋದರಿಯರು ಮತ್ತು ಹೆಣ್ಣುಮಕ್ಕಳ ಪಾತ್ರವನ್ನು ಹೆಚ್ಚು ಪ್ರೋತ್ಸಾಹಿಸಲಾಗುತ್ತಿದೆ, ಉತ್ತಮ ಫಲಿತಾಂಶಗಳು ನಿಶ್ಚಿತವಾಗಿವೆ. ಮಳೆ ನೀರು ಸಂರಕ್ಷಣೆ ಅಭಿಯಾನವನ್ನು ಯಶಸ್ವಿಗೊಳಿಸೋಣ.
- ವಿಶ್ವಸಂಸ್ಥೆಯ ವರದಿಯ ಪ್ರಕಾರ, ಭಾರತವು ವಿಶ್ವದ ನೀರಿನ ಶೇಕಡಾ 4 ರಷ್ಟನ್ನು ಹೊಂದಿದ್ದರೆ, ವಿಶ್ವದ ಜನಸಂಖ್ಯೆಯ ಶೇ.18 ರಷ್ಟು ಜನರು ಇಲ್ಲಿ ವಾಸಿಸುತ್ತಿದ್ದಾರೆ.
- ಕೇಂದ್ರೀಯ ಅಂತರ್ಜಲ ಮಂಡಳಿಯ ಪ್ರಕಾರ, ಭಾರತದಲ್ಲಿ ಅಂತರ್ಜಲ ಮಟ್ಟವು ವೇಗವಾಗಿ ಕ್ಷೀಣಿಸುತ್ತಿದೆ. ಪ್ರಪಂಚದಾದ್ಯಂತದ ಒಟ್ಟು ಅಂತರ್ಜಲದ ಶೇಕಡಾ 24 ರಷ್ಟು ನಮ್ಮ ದೇಶದಲ್ಲಿ ಬಳಕೆಯಾಗುತ್ತಿದೆ. ನಮ್ಮ ನೀರಿನ ಬಳಕೆಯು ಶೇಕಡಾ 40 ರಷ್ಟು ಅಂತರ್ಜಲದ ಮೂಲಕ ಆಗುತ್ತಿದೆ. ಒಟ್ಟು ಬಳಸಬಹುದಾದ ನೀರಿನ ಸಂಪನ್ಮೂಲಗಳಲ್ಲಿ ಅಂತರ್ಜಲದ ಪಾಲು 432 ಬಿಲಿಯನ್ ಘನ ಮೀಟರ್.
- ನೀತಿ ಆಯೋಗದ ಇತ್ತೀಚಿನ ವರದಿಯ ಪ್ರಕಾರ, 2030 ರ ವೇಳೆಗೆ ಭಾರತದ ನೀರಿನ ಬೇಡಿಕೆಯು ಪೂರೈಕೆಯ ದುಪ್ಪಟ್ಟಾಗುತ್ತದೆ ಎಂದು ಅಂದಾಜಿಸಲಾಗಿದೆ.



ಪ್ರಧಾನ ಮಂತ್ರಿಯವರ ಪೂರ್ಣ ಭಾಷಣವನ್ನು ಕೇಳಲು ಈ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಯಶಸ್ವಿ ಅಭಿಯಾನಗಳು ಬಹಳ ಮುಖ್ಯವಾಗಿವೆ” ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು. ಉತ್ತಮ ನಿರ್ವಹಣೆ ಮತ್ತು ಫಲಿತಾಂಶಗಳಿಗಾಗಿ ನೀರಿನ ಸಂಪರ್ಕದ ಉಪಕ್ರಮದಲ್ಲಿ ತಂತ್ರಜ್ಞಾನದ ಹೆಚ್ಚಿನ ಬಳಕೆಯ ಬಗ್ಗೆ ಸರ್ಕಾರ ಗಮನ ಕೇಂದ್ರೀಕರಿಸಿದೆ.

### ಸಮಗ್ರ ವಿಧಾನದೊಂದಿಗೆ ಜಲ ನೀತಿ

ನೀರು ಅಮೂಲ್ಯವಾದ ಆಸ್ತಿ. ಆದ್ದರಿಂದ, ನೀರಿನ ಸಂರಕ್ಷಣೆಯ ಮಹತ್ವವನ್ನು ಗುರುತಿಸಿ, ನೀರಿಗೆ ಸಂಬಂಧಿಸಿದ ಎಲ್ಲಾ ಕೆಲಸಗಳನ್ನು 2019 ರಲ್ಲಿ ಜಲಶಕ್ತಿ ಸಚಿವಾಲಯಕ್ಕೆ ವಹಿಸಲಾಗಿದೆ. ನೀರು ಕೊಯ್ಲು ಮಾಡುವುದನ್ನು ಒಂದು ಬೃಹತ್ ಆಂದೋಲನವನ್ನಾಗಿ ಮಾಡಲು ಕರೆ ನೀಡಲಾಯಿತು. 2019 ರಲ್ಲಿ ತೀವ್ರ ನೀರಿನ ಬಿಕ್ಕಟ್ಟಿನಿಂದ ತತ್ತರಿಸಿರುವ 256 ಜಿಲ್ಲೆಗಳಲ್ಲಿ ಜಲ ಶಕ್ತಿ ಅಭಿಯಾನವನ್ನು ಪ್ರಾರಂಭಿಸಲಾಯಿತು. ಪ್ರತಿ ಗ್ರಾಮೀಣ ಮನೆಗೂ ನಲ್ಲಿ ನೀರು ಒದಗಿಸುವ ಮತ್ತು ಅಂತರ್ಜಲ ಮೂಲಗಳ ಉತ್ತಮ ನಿರ್ವಹಣೆಯ ಉದ್ದೇಶದಿಂದ ಹರ್ ಘರ್ ಜಲ (ಪ್ರತಿ ಮನೆಗೂ ನೀರು) ಮತ್ತು ಅಟಲ್ ಭೂ ಜಲ ಯೋಜನೆಗಳನ್ನು ಪ್ರಾರಂಭಿಸಲಾಯಿತು. ಜಲಶಕ್ತಿ ಅಭಿಯಾನದ ಪ್ರಾಮುಖ್ಯವೆಂದರೆ ಅದು ನಗರ ಮತ್ತು ಗ್ರಾಮೀಣ ಪ್ರದೇಶಗಳನ್ನು ಒಳಗೊಂಡಿದೆ. ಮುಂಗಾರು ಆರಂಭಕ್ಕೆ ಇನ್ನೂ ಕೆಲವು ವಾರಗಳಿವೆ ಮತ್ತು ಮುಂಗಾರು ಪ್ರಾರಂಭವಾಗುವ ಮೊದಲು ಕೆರೆ, ಕೊಳಗಳು, ಬಾವಿಗಳು ಮತ್ತು ಚರಂಡಿಗಳನ್ನು ಹೂಳು ತೆಗೆದು ಸ್ವಚ್ಛಗೊಳಿಸುವ ಎಲ್ಲಾ ಕೆಲಸಗಳನ್ನು ಪೂರ್ಣಗೊಳಿಸಬೇಕು. ನೀರನ್ನು ಸಂರಕ್ಷಿಸಲು ಸಾಮರ್ಥ್ಯವನ್ನು ಹೆಚ್ಚಿಸಬೇಕು ಮತ್ತು ಮಳೆ ನೀರು ಹರಿಯುವ ಮಾರ್ಗದಲ್ಲಿನ ಅಡೆತಡೆಗಳನ್ನು ತೆಗೆದುಹಾಕಲು ಪ್ರಯತ್ನಿಸಬೇಕು ಎಂದು ಪ್ರಧಾನಮಂತ್ರಿ ಹೇಳಿದ್ದಾರೆ. ■






# ವೇಲು ಮಹಿಳೆಯರಿಗೆ ಸ್ಫೂರ್ತಿ ಖುದಿರಾಮ್ ಬೋಸ್ ಯುವಕರಿಗೆ ಶಕ್ತಿಯ ಮೂಲ

**ರಾಷ್ಟ್ರವು ತನ್ನ ಸ್ವಾತಂತ್ರ್ಯದ 75ನೇ ವರ್ಷವನ್ನು ಆಚರಿಸುತ್ತಿದೆ. ಇದು ಮುಂದಿನ 25 ವರ್ಷಗಳವರೆಗೆ 'ಶತಮಾನೋತ್ಸವ ನಿರ್ಣಯ'ಮಾಡಲಿರುವ ಅದರ ಅಭಿವೃದ್ಧಿ ಪ್ರಯಾಣದ ಮೈಲಿಗಲ್ಲು ಎಂದು ಸಾಬೀತುಪಡಿಸಲಿದೆ. ನವ ಭಾರತದ ಕನಸು ಮತ್ತು ರಾಷ್ಟ್ರ ನಿರ್ಮಾಣದ ಹೊಸ ಆರಂಭವನ್ನು ಮಾಡುವ ಯುವಕರ ಆಕಾಂಕ್ಷೆಯನ್ನು ಸಾಕಾರಗೊಳಿಸಲು ಸ್ವಾತಂತ್ರ್ಯ ಹೋರಾಟಗಾರರ ಜೀವನದಿಂದ ಸ್ಫೂರ್ತಿ ಪಡೆಯುವುದು ಅವಶ್ಯಕ. ಸ್ವಾತಂತ್ರ್ಯ ಹೋರಾಟದ ತೆರೆಮರೆಯ ವೀರರ ಕಥೆಯನ್ನು ಹೇಳಲು ನ್ಯೂ ಇಂಡಿಯಾ ಸಮಾಚಾರ್ ನಿರ್ಧರಿಸಿದೆ...**

ಬ್ರಿಟಿಷ್ ಗುಲಾಮಗಿರಿಯ ನೊಗವನ್ನು ಕಿತ್ತೆಸೆಯಲು ಕೋಟಿ, ಕೋಟಿ ಭಾರತೀಯರು ಹೇಗೆ ಶ್ರಮಿಸಿದರು ಎಂಬ ಹಿನ್ನೆಲೆಯಲ್ಲಿ ಭಾರತದ ಸ್ವಾತಂತ್ರ್ಯದ 75ನೇ ವರ್ಷದ ಆಚರಣೆಯು ಹೆಚ್ಚು ವೈಭವಯುತ ಮತ್ತು ಸ್ಮರಣೀಯವಾಗುತ್ತದೆ. ಈ ಆಚರಣೆಯು ಸನಾತನ ಭಾರತದ ಸಂಪ್ರದಾಯಗಳು, ಸ್ವಾತಂತ್ರ್ಯ ಹೋರಾಟದ ನೋಟ ಮತ್ತು ಸ್ವತಂತ್ರ ಭಾರತದ ಅಭಿವೃದ್ಧಿಯ ಕ್ಷಣಗಳನ್ನು ಪ್ರದರ್ಶಿಸುತ್ತದೆ. ಪ್ರಧಾನಿ ನರೇಂದ್ರ ಮೋದಿಯವರ ಮಾತುಗಳಲ್ಲಿ ಹೇಳುವುದಾದರೆ, "ರಾಮನ ಯುಗದಲ್ಲಿ ಇದ್ದ ಅನ್ಯಾಯ, ಶೋಷಣೆ ಮತ್ತು ಹಿಂಸಾಚಾರದ ವಿರುದ್ಧ ಭಾರತದ ಪ್ರಜ್ಞೆಯು ಮಹಾಭಾರತದ ಕುರುಕ್ಷೇತ್ರದಲ್ಲಿ, ಹಲ್ದಿಘಾಟಿಯ ಯುದ್ಧಭೂಮಿಯಲ್ಲಿ, ಶಿವಾಜಿಯ ರಣರಂಗದಲ್ಲಿಯೂ ಇತ್ತು. ಅದೇ ಪ್ರಜ್ಞೆ, ಅದೇ ಅದಮ್ಯ ಶೌರ್ಯ, ಸ್ವಾತಂತ್ರ್ಯದ ಹೋರಾಟದಲ್ಲಿ ಭಾರತದ ಪ್ರತಿಯೊಂದು ಪ್ರದೇಶ, ವರ್ಗ ಮತ್ತು ಸಮಾಜದಲ್ಲಿ ಕಿಡಿ ಹೊತ್ತಿಸಿತು."

ಇದು ಕೋಲ್ ದಂಗೆ ಅಥವಾ ಹೋ ಚಳುವಳಿ, ಖಾಸಿ ಆಂದೋಲನ ಅಥವಾ ಸಂತಾಲ್ ಕ್ರಾಂತಿ, ಕಾಚರ್ ನಾಗಾ ಆಂದೋಲನ ಅಥವಾ ಕುಕಾ ಚಳುವಳಿ, ಭಿಲ್ ಚಳುವಳಿ ಅಥವಾ ಮುಂಡಾ ಕ್ರಾಂತಿ, ಸನ್ಯಾಸಿ ಚಳವಳಿ ಅಥವಾ ರಾಮೋಸಿ ದಂಗೆ, ಕಿತ್ತೂರು ಚಳುವಳಿ, ತಿರುವಾಂಕೂರು ಚಳುವಳಿ, ಬಾರ್ದೋಲಿ ಸತ್ಯಾಗ್ರಹ, ಚಂಪಾರಣ್ ಸತ್ಯಾಗ್ರಹ, ಸಂಭಲ್ಪುರ ಸಂಘರ್ಷ, ಚುವಾರ್ ದಂಗೆ, ಬುಂದೇಲ್ ಚಳುವಳಿ... ಇಂತಹ ಅನೇಕ ಆಂದೋಲನಗಳು ಮತ್ತು ಚಳುವಳಿಗಳು ದೇಶದ ಪ್ರತಿಯೊಂದು ಭಾಗದಲ್ಲೂ ಪ್ರತಿ ಅವಧಿಯಲ್ಲೂ ಸ್ವಾತಂತ್ರ್ಯದ ಜ್ವಾಲೆಯನ್ನು ಹೊತ್ತಿಸಿದವು. ಸಿಖ್ ಗುರು ಸಂಪ್ರದಾಯವು ದೇಶದ ಸಂಸ್ಕೃತಿ ಮತ್ತು ಪದ್ಧತಿಗಳನ್ನು ರಕ್ಷಿಸಲು ಹೊಸ ಶಕ್ತಿ, ಸ್ಫೂರ್ತಿ, ಪರಿತ್ಯಾಗ ಮತ್ತು ತ್ಯಾಗವನ್ನು ನೀಡಿತು. ಆದ್ದರಿಂದ, ಆ ಹೋರಾಟಗಳನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳಬೇಕು.



# ವೇಲು ನಾಚಿಯಾರ್: ಬ್ರಿಟಿಷರಿಗೆ ನಡುಕ ಹುಟ್ಟಿಸಿದ ರಾಣಿ

ವೇಲು ನಾಚಿಯಾರ್ ಬ್ರಿಟಿಷ್ ಆಡಳಿತದ ವಿರುದ್ಧ ಹೋರಾಡಿದ ತಮಿಳುನಾಡಿನ ಮೊದಲ ರಾಣಿ. ರಾಮನಾಥಪುರಂ ನಿವಾಸಿ ವೇಲು ಮದುವೆಯ ನಂತರ ಶಿವಗಂಗೆಯ ರಾಣಿಯಾದಳು. 1772 ರಲ್ಲಿ ಬ್ರಿಟಿಷರು ಶಿವಗಂಗಾವನ್ನು ವಶಪಡಿಸಿಕೊಳ್ಳಲು ದಾಳಿ ಮಾಡಿದರು. ಅವರ ಪತಿ ಬ್ರಿಟಿಷರೊಂದಿಗೆ ಮಾತನಾಡಲು ದೂತರನ್ನು ಕಳುಹಿಸಿದನು. ಆದರೆ ಬ್ರಿಟಿಷ್ ಸೈನ್ಯವು ಅವನ ಮೇಲೆ ದಾಳಿ ಮಾಡಿ ಆತನನ್ನು ಕೊಂದಿತು. ಇದು ವೇಲು ತನ್ನ ಗಂಡನ ಸಾವಿಗೆ ಪ್ರತೀಕಾರ ತೀರಿಸಿಕೊಳ್ಳುವಂತೆ ಮಾಡಿತು. ಮಾರುದು ಸೋದರರು, ಕೆಲವು ದೊಡ್ಡ ಪಾಳೆಯಗಾರರು, ನಿಷ್ಠಾವಂತರು ಮತ್ತು ಉದಯಾಳ್ ನೇತೃತ್ವದ ಅಂಗರಕ್ಷಕರ ಬೆಂಬಲ ಅವಳಿಗಿತ್ತು. ಏತನ್ಮಧ್ಯೆ, ಬ್ರಿಟಿಷರು ಉದಯಾಳ್ ಳನ್ನು ಸೆರೆಹಿಡಿದು ವೇಲು ನಾಚಿಯಾರ್ ಎಲ್ಲಿದ್ದಾರೆ ಎಂದು ತಿಳಿಯಲು ಹಿಂಸೆ ನೀಡಿದರು. ಉದಯಾಳ್ ಏನನ್ನೂ ಬಹಿರಂಗಪಡಿಸಲಿಲ್ಲ. ಆಕೆಯನ್ನು ಬ್ರಿಟಿಷರು ಕೊಂದರು. ದಿಟ್ಟ ವೇಲು ಮಹಿಳೆಯರ ಬೆಟಾಲಿಯನ್ ಅನ್ನು ಕಟ್ಟಿ, ಅದಕ್ಕೆ ಉದಯಾಳ್ ರೆಜಿಮೆಂಟ್ ಎಂದು ಹೆಸರಿಸಿದ್ದರು. ಈ ಬೆಟಾಲಿಯನ್‌ನ ಅವಳ ನಿಷ್ಠಾವಂತೆಯಾದ ಕುಯಿಲಿಯೊಂದಿಗೆ ಇತ್ತು. ಅವರು ಕೆಲವು ಮಹಿಳಾ ಗೆರಿಲ್ಲಾಗಳನ್ನು ಯುದ್ಧದಲ್ಲಿ ತೊಡಗಿಸಿಕೊಂಡರು, ಆದರೆ ಬ್ರಿಟಿಷರು ಅವರನ್ನು ವಶಪಡಿಸಿಕೊಂಡಾಗ, ಆಕೆ ಮದ್ದುಗುಂಡು ಸಂಗ್ರಹಾಗಾರಕ್ಕೆ ಪ್ರವೇಶಿಸಿ ಬೆಂಕಿ ಹಚ್ಚಿದರು. ಈ ಸಾಹಸದಲ್ಲಿ ಕುಯಿಲಿ ನಿಧನರಾದರು. ವೇಲು ನಾಚಿಯಾರ್ ಶಿವಗಂಗೆಯನ್ನು ಬ್ರಿಟಿಷರಿಂದ ಮುಕ್ತಗೊಳಿಸಿ ಅದರ ಸಿಂಹಾಸನವನ್ನು ಏರಿದರು. ಅವಳು 10 ವರ್ಷಗಳ ಕಾಲ ಆಳಿದಳು. 1947 ರಲ್ಲಿ ಭಾರತದೊಂದಿಗೆ ವಿಲೀನಗೊಳ್ಳುವವರೆಗೆ ಅವರ ಕುಟುಂಬವು ಶಿವಗಂಗೆಯನ್ನು ಆಳಿತು. ಆಕೆಯ ಸ್ಮರಣಾರ್ಥ ಭಾರತ ಸರ್ಕಾರ 2008 ರಲ್ಲಿ ಅಂಚೆ ಚೀಟಿ ಬಿಡುಗಡೆ ಮಾಡಿತು.

# ಖುದಿರಾಮ್ ಬೋಸ್: ಇತರರನ್ನು ಜಾಗೃತಗೊಳಿಸಲು ತನ್ನ ಪ್ರಾಣವನ್ನೇ ಬಲಿಕೊಟ್ಟ ಕ್ರಾಂತಿಕಾರಿ



ಖುದಿರಾಮ್ ಬೋಸ್ ಭಾರತದ ಸ್ವಾತಂತ್ರ್ಯ ಹೋರಾಟದ ಅತ್ಯಂತ ಕಿರಿಯ ಕ್ರಾಂತಿಕಾರಿಗಳಲ್ಲಿ ಒಬ್ಬರಾಗಿದ್ದರು, ಅವರ ನಿಸ್ವಾರ್ಥ ಸೇವೆ ಮತ್ತು ರಾಷ್ಟ್ರಕ್ಕಾಗಿ ಮಾಡಿದ ತ್ಯಾಗ ಎಲ್ಲರಿಗೂ ಸ್ಫೂರ್ತಿ ನೀಡಿತು. ಖುದಿರಾಮ್ ಬೋಸ್‌ರನ್ನು 18ನೇ ವಯಸ್ಸಿನಲ್ಲಿ 1908ರ ಆಗಸ್ಟ್ 11 ರಂದು ಬಿಹಾರದ ಮುಜಾಫರ್ಪುರ ಜಿಲ್ಲಾ ಜೈಲಿನಲ್ಲಿ ಗಲ್ಲಿಗೇರಿಸಲಾಯಿತು. ಖುದಿರಾಮ್ ಬೋಸ್ 1889 ರ ಸೆಪ್ಟೆಂಬರ್ 3 ರಂದು ಅವಿಭಜಿತ ಬಂಗಾಳದ ಮಿಡ್ನಾಪೋರ್ ಜಿಲ್ಲೆಯ ಒಂದು ಸಣ್ಣ ಹಳ್ಳಿಯಲ್ಲಿ ಜನಿಸಿದರು. ಅವರು 1905 ರಲ್ಲಿ ಬಂಗಾಳ ವಿಭಜನೆಯ ನಂತರ ಸ್ವಾತಂತ್ರ್ಯ ಚಳವಳಿಗೆ ಧುಮುಕಿದರು ಮತ್ತು ಸತ್ಯೇನ್ ಬೋಸ್ ಅವರ ನೇತೃತ್ವದಲ್ಲಿ ತಮ್ಮ ಕ್ರಾಂತಿಕಾರಿ ಚಟುವಟಿಕೆಗಳನ್ನು ಪ್ರಾರಂಭಿಸಿದರು. ಕ್ರೂರ ಬ್ರಿಟಿಷ್ ಅಧಿಕಾರಿ ಕಿಂಗ್ಸ್‌ಫೋರ್ಡ್‌ನನ್ನು ಕೊಲ್ಲುವ ಜವಾಬ್ದಾರಿಯನ್ನು ಖುದಿರಾಮ್ ಬೋಸ್‌ಗೆ ವಹಿಸಲಾಗಿತ್ತು. ಈ ಸಂಬಂಧ ಬೋಸ್ ಮುಜಾಫರ್ಪುರವನ್ನು ತಲುಪಿದರು. ಅವಕಾಶಕ್ಕಾಗಿ ಕಾದು, ಅವರು ಕಿಂಗ್ಸ್‌ಫೋರ್ಡ್‌ನ ಕುದುರೆ ಗಾಡಿಯ ಮೇಲೆ ಬಾಂಬ್ ಎಸೆದರು. ಆದರೆ ಫೋರ್ಡ್ ಗಾಡಿಯಲ್ಲಿ ಇರಲಿಲ್ಲ. ಬದಲಿಗೆ ಆತನ ಹೆಂಡತಿ ಮತ್ತು ಇನ್ನೊಬ್ಬ ಅಧಿಕಾರಿಯ ಮಗಳು ದಾಳಿಯಲ್ಲಿ ಕೊಲ್ಲಲ್ಪಟ್ಟರು. ಈ ಘಟನೆಯ ನಂತರ ಖುದಿರಾಮ್ ಬೋಸ್ ರನ್ನು ಪೊಲೀಸರು ಬಂಧಿಸಿದರು. ನಂತರ ಮರಣದಂಡನೆ ವಿಧಿಸಲಾಯಿತು. ಆಗ ಅವರಿಗೆ ಕೇವಲ 18 ವರ್ಷ, 8 ತಿಂಗಳು ಮತ್ತು 8 ದಿನ. ಅಷ್ಟು ಚಿಕ್ಕ ವಯಸ್ಸಿನಲ್ಲಿ ಕ್ರಾಂತಿಕಾರಿಯಾಗಿ ಹುತಾತ್ಮರಾದದ್ದು ದೇಶದ ಕೋಟಿ ಜನರನ್ನು ಬೆಚ್ಚಿಬೀಳಿಸಿತು ಮತ್ತು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಲು ಅವರನ್ನು ಪ್ರೋತ್ಸಾಹಿಸಿತು. ಖುದಿರಾಮ್ ಬೋಸ್ ಚಿರಂತನ ಸ್ಫೂರ್ತಿಯಾಗಿದ್ದಾರೆ. ■



# ರಾಷ್ಟ್ರೀಯ ಪರೀಕ್ಷಾ ಸಂಸ್ಥೆ

# ಅರ್ಹತೆಯ ಪರೀಕ್ಷೆ ಮತ್ತು ಸಾಮರ್ಥ್ಯಕ್ಕೆ ಆದ್ಯತೆ



*ಮೇ 2018 ರಲ್ಲಿ ಅಸ್ತಿತ್ವಕ್ಕೆ ಬಂದ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು (ಎನ್‌ಟಿಎ) ಸಂಶೋಧನೆ ಆಧಾರಿತ ಅಂತರರಾಷ್ಟ್ರೀಯ ಮಾನದಂಡಗಳು, ದಕ್ಷತೆ ಮತ್ತು ಪಾರದರ್ಶಕತೆಗೆ ಹೊಂದಿಕೆಯಾಗುವಂತೆ ಪರೀಕ್ಷೆಗಳ ಪರಿಕಲ್ಪನೆಯನ್ನು ಪರಿವರ್ತಿಸಿದ ಸಂಸ್ಥೆಯಾಗಿ ಹೊರಹೊಮ್ಮಿದೆ. ವಿಶ್ವದ ಪ್ರವರ್ತಕ ಶಿಕ್ಷಣ ಸಂಸ್ಥೆಗಳ ಉತ್ತಮ ಅಭ್ಯಾಸಗಳನ್ನು ಅಳವಡಿಸಿಕೊಂಡ ಎನ್‌ಟಿಎ, ನಮ್ಮ ದೇಶದಲ್ಲಿ ಮಕ್ಕಳ ಬೌದ್ಧಿಕ ಮಟ್ಟವನ್ನು ಮೌಲ್ಯಮಾಪನ ಮಾಡುವ ವಿಧಾನದಲ್ಲಿ ಮಾದರಿ ಬದಲಾವಣೆಯನ್ನು ತಂದಿದೆ. ಮೊದಲ ಬಾರಿಗೆ, ಶ್ರೇಯಾಂಕಗಳ ಮೇಲೆ ಮಾತ್ರವಲ್ಲದೆ ಮೆರಿಟ್ ಆಧಾರಿತ ಶಿಕ್ಷಣ ವ್ಯವಸ್ಥೆಯ ಮೇಲೆ ವಿಶೇಷ ಒತ್ತು ನೀಡಲಾಗಿದೆ.*

**ಪ್ರಮೋದ್ ಕುಮಾರ್ ಪಾಸ್ವಾನ್ ಕಳೆದ ವರ್ಷ ರಾಷ್ಟ್ರೀಯ ಅರ್ಹತಾ ಪರೀಕ್ಷೆಗೆ (ನೆಟ್) ಅರ್ಹತೆ ಪಡೆದರು. ನಾಲ್ಕು ವರ್ಷಗಳ ಹಿಂದೆ ಸಿಬಿಎಸ್ಇ ನಡೆಸುತ್ತಿದ್ದ ಎನ್ಇಟಿ ಪರೀಕ್ಷೆಗೂ ಅವರು ಕುಳಿತಿದ್ದರು. ಭಾರತದಲ್ಲಿ ಪ್ರವೇಶ ಪರೀಕ್ಷೆಗಳ ಮಾದರಿಯನ್ನು ಬದಲಾಯಿಸಿದ ಶ್ರೇಯಸ್ಸನ್ನು ಎನ್‌ಟಿಎಗೆ ನೀಡುವ ಪ್ರಮೋದ್, "ಹಿಂದಿನ ಪ್ರಶ್ನೆಗಳು ಹೆಚ್ಚಾಗಿ ಪುಸ್ತಕಗಳಿಂದ ಬಂದಿದ್ದವು, ಆದರೆ ಈಗ ಸಮಕಾಲೀನ ಪ್ರಶ್ನೆಗಳು ಸೈದ್ಧಾಂತಿಕವಾಗಿರದೆ, ಪ್ರಾಯೋಗಿಕ ಜ್ಞಾನವನ್ನು ಆಧರಿಸಿವೆ" ಎಂದು ಹೇಳುತ್ತಾರೆ. ಎನ್ಇಟಿ ಬರೆದ ಮುದ್ರಿಕಾ ಪ್ರಸಾದ್ ಮಂಡಲ್, "ಆಫ್‌ಲೈನ್ ಪರೀಕ್ಷೆಯಿಂದಾಗಿ ಇಡೀ ದಿನ ವ್ಯರ್ಥವಾಗುತ್ತಿತ್ತು, ಆದರೆ ಈಗ ಆನ್‌ಲೈನ್ ಪರೀಕ್ಷೆಯಿಂದಾಗಿ ಕೇವಲ ಮೂರು ಗಂಟೆಗಳಲ್ಲಿ ಪರೀಕ್ಷೆ ಮುಗಿಯುತ್ತದೆ. ಆಫ್‌ಲೈನ್ ಪರೀಕ್ಷೆಯಲ್ಲಿ ಇಲ್ಲದ ಉತ್ತರ ಪತ್ರಿಕೆಯನ್ನು ಸಲ್ಲಿಸುವ ಸಮಯದವರೆಗೂ ಅದನ್ನು ಬದಲಾಯಿಸುವ ಆಯ್ಕೆ ಇಲ್ಲಿ ಇರುವುದರಿಂದ ಉತ್ತರವನ್ನು ಒಎಂಆರ್ ಹಾಳೆಯಲ್ಲಿ ಗುರುತು ಮಾಡುವುದು ಈಗ ಸುಲಭವಾಗಿದೆ." ಎನ್ನುತ್ತಾರೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿರುವ ವಿದ್ಯಾರ್ಥಿಗಳು, ಎನ್‌ಟಿಎ ಪರೀಕ್ಷೆಗಳ ಆನ್‌ಲೈನ್ ಮಾದರಿಯು ಕಾಗದವನ್ನು ಉಳಿಸುವ ಮೂಲಕ ಪರಿಸರ ಸಂರಕ್ಷಣೆಯಾಗುತ್ತದೆ ಮತ್ತು ಸೈದ್ಧಾಂತಿಕ ಪ್ರಶ್ನೆಗಳಿಗೆ ಬದಲಾಗಿ ಪ್ರಾಯೋಗಿಕ ಪ್ರಶ್ನೆಗಳು ಈ ಪರೀಕ್ಷೆಯ ಮಹತ್ವವನ್ನು ಹೆಚ್ಚಿಸುತ್ತವೆ, ಇದು ಅಭ್ಯರ್ಥಿಗಳ ನಿಜವಾದ ಜ್ಞಾನವನ್ನು ಅಳೆಯಲು ಸಹಾಯ ಮಾಡುತ್ತದೆ ಎನ್ನುತ್ತಾರೆ.**

ಮಗುವೊಂದು ವೈದ್ಯನಾಗಬೇಕೆಂದು ಬಯಸುವುದನ್ನು ನೀವು ಆಗಾಗ್ಗೆ ಗಮನಿಸಿರಬಹುದು, ಆದರೆ ಮಗುವಿನ ಪೋಷಕರು ಅಥವಾ ಇತರ ಸಂದರ್ಭಗಳು ಅವನನ್ನು ಎಂಜಿನಿಯರಿಂಗ್ ಕಡೆಗೆ ತಳ್ಳುತ್ತವೆ. ಇದು ತುಂಬಾ ಸಾಮಾನ್ಯ ಸಂಗತಿಯಾಗಿದೆ. ಪರಿಣಾಮವಾಗಿ, ಅಭ್ಯರ್ಥಿಯು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಗತ್ಯವಾದ ಶ್ರೇಣಿಯನ್ನು ಪಡೆಯಲು ಸಾಧ್ಯವಾಗದೇ ತನ್ನ ಆಯ್ಕೆಯ ಸಂಸ್ಥೆ ಮತ್ತು ವಿಷಯವನ್ನು ಆಯ್ಕೆ ಮಾಡಿಕೊಳ್ಳಲಾಗುವುದಿಲ್ಲ. ಅಂತಹ ಪರಿಸ್ಥಿತಿಯಲ್ಲಿ, ಅವನಿಗೆ ಕೇವಲ ಎರಡು ಆಯ್ಕೆಗಳಿರುತ್ತವೆ - ಮುಂದಿನ ವರ್ಷದ ಪರೀಕ್ಷೆಗೆ ಮತ್ತೆ ತಯಾರಿ ಮಾಡುವುದು ಅಥವಾ ಅವನ ಆಸಕ್ತಿಯಲ್ಲದ ಇನ್ನೊಂದು ವಿಷಯವನ್ನೇ ಓದುವುದು. ಅಭಿವೃದ್ಧಿ ಹೊಂದಿದ ದೇಶಗಳಿಗಿಂತ ಭಿನ್ನವಾಗಿ, ವಿದ್ಯಾರ್ಥಿಯ ನಿಜವಾದ ಪ್ರತಿಭೆ ಮತ್ತು ಅರ್ಹತೆಗಳನ್ನು ಗುರುತಿಸಲು ಮತ್ತು ಅವನು / ಅವಳು ನಿಜವಾದ ಕೊಡುಗೆ ನೀಡುವ ಕ್ಷೇತ್ರಕ್ಕೆ ಅವನನ್ನು / ಅವಳನ್ನು ಸೆಳೆಯುವ ಪ್ರಯತ್ನ ಭಾರತದಲ್ಲಿ ಎಂದಿಗೂ ನಡೆದಿಲ್ಲ. ತಜ್ಞರು ಮತ್ತು ಶಿಕ್ಷಣ ತಜ್ಞರೊಂದಿಗೆ ವ್ಯಾಪಕವಾದ ಚರ್ಚೆಯ ನಂತರ, 2017 ರ ನವೆಂಬರ್‌ನಲ್ಲಿ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಯನ್ನು ಸ್ವಾಯತ್ತ ಮತ್ತು ಸ್ವಾವಲಂಬಿ ಪರೀಕ್ಷಾ ಸಂಸ್ಥೆಯಾಗಿ ರಚಿಸಲು ಕೇಂದ್ರ ಸಂಪುಟವು ಅನುಮೋದನೆ ನೀಡಿತು, ಇದು ವಿದ್ಯಾರ್ಥಿಯೊಬ್ಬರ ನೈಜ ಸಾಮರ್ಥ್ಯವನ್ನು ಗುರುತಿಸಲು ಮತ್ತು ಅವನ / ಅವಳು ಸೂಕ್ತ ವೃತ್ತಿಜೀವನವನ್ನು ಆಯ್ಕೆ ಮಾಡಿಕೊಳ್ಳ ಅನುವು ಮಾಡಿಕೊಡುತ್ತದೆ. ಅಸ್ತಿತ್ವಕ್ಕೆ ಬಂದ ಕೇವಲ ಮೂರು ವರ್ಷಗಳ ಅವಧಿಯಲ್ಲಿ, ವಿದ್ಯಾರ್ಥಿಗಳ ನೈಜ ಸಾಮರ್ಥ್ಯವನ್ನು ನಿರ್ಣಯಿಸುವಲ್ಲಿ ಎನ್‌ಟಿಎಯ ವೈಜ್ಞಾನಿಕ ವಿಧಾನವು ಉತ್ತಮ ಭರವಸೆಯನ್ನು ಮೂಡಿಸಿದೆ. ಎನ್‌ಟಿಎಯು ವಿದ್ಯಾರ್ಥಿಗಳನ್ನು ಪರೀಕ್ಷೆಯ ಮೂಲಕ ಮೌಲ್ಯಮಾಪನ ಮಾಡುವುದು ಮಾತ್ರವಲ್ಲ, ಪರೀಕ್ಷೆಯ ಸಮಯದಲ್ಲಿ ಪ್ರಶ್ನೆಪತ್ರಿಕೆಗಳನ್ನು ಪರಿಹರಿಸುವ ವಿದ್ಯಾರ್ಥಿಗಳ ವಿಧಾನಗಳು, ಸಮಯ, ತಿಳುವಳಿಕೆ ಇತ್ಯಾದಿಗಳನ್ನು ನಿರ್ಣಯಿಸುವ ಮೂಲಕ ಸಂಬಂಧಪಟ್ಟ ಮಂಡಳಿಗಳು ಮತ್ತು ತಜ್ಞರಿಗೆ ಅಗತ್ಯ ಬದಲಾವಣೆಗಳನ್ನು ಸೂಚಿಸುತ್ತಿದೆ. ಶಿಕ್ಷಣದಲ್ಲಿ ಅಸ್ತಿತ್ವದಲ್ಲಿರುವ ಸವಾಲುಗಳನ್ನು ಎದುರಿಸುವುದು ಮತ್ತು ಭಾರತದ ಭರವಸೆಯ ಭವಿಷ್ಯಕ್ಕೆ ಬುನಾದಿಯನ್ನು ಹಾಕುವುದು ಇದರ ಉದ್ದೇಶವಾಗಿದೆ.

> *ಒಂದು ವರ್ಷ ಮಾತ್ರ ಯೋಚಿಸುವವರು, ಆಹಾರ ಧಾನ್ಯಗಳ ಬಿತ್ತನೆ ಮಾಡುತ್ತಾರೆ, ಒಂದು ದಶಕದವರೆಗೆ ಯೋಚಿಸುವವರು ಹಣ್ಣಿನ ಗಿಡಗಳನ್ನು ನೆಡುತ್ತಾರೆ. ಆದರೆ ತಲೆಮಾರುಗಳವರೆಗೆ ಯೋಚಿಸುವವರು ಮನುಷ್ಯರನ್ನು ಸಿದ್ಧಪಡಿಸುತ್ತಾರೆ. ಅಂದರೆ, ಶಿಕ್ಷಣ ನೀಡುವುದು, ಸಂಸ್ಕೃತಿಯನ್ನು ಅಳವಡಿಸಿಕೊಳ್ಳುವುದು ಮತ್ತು ಬದುಕಿಗೆ ಸಿದ್ಧಪಡಿಸುವುದು. ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಬದುಕನ್ನು ಕಟ್ಟುವ ಉತ್ಸಾಹದೊಂದಿಗೆ ನಾವು ಹೇಗೆ ಜೀವಂತಗೊಳಿಸಬಹುದು.*
>
> **ಪ್ರಧಾನ ಮಂತ್ರಿ ನರೇಂದ್ರ ಮೋದಿ**

**60** ಲಕ್ಷ ಅಭ್ಯರ್ಥಿಗಳು ಪ್ರತಿ ವರ್ಷ ವಿವಿಧ ಸಂಸ್ಥೆಗಳ ಪ್ರವೇಶ ಪರೀಕ್ಷೆ ತೆಗೆದುಕೊಳ್ಳುತ್ತಾರೆ



# ಎನ್‌ಟಿಎ ಹೊರೆಯನ್ನು ತಗ್ಗಿಸುತ್ತದೆ; ಯುಜಿಸಿ, ಸಿಬಿಎಸ್‌ಇ ಮತ್ತು ಎಐಸಿಟಿಇ ಶೈಕ್ಷಣಿಕ ಕಾರ್ಯಕ್ರಮಗಳ ಬಗ್ಗೆ ಗಮನ ಕೇಂದ್ರೀಕರಿಸುತ್ತವೆ



ಆದರೆ, ಈಗ, ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ಪರೀಕ್ಷೆಯ ಮಾದರಿಯನ್ನು ಅಂತರರಾಷ್ಟ್ರೀಯ ಮಾನದಂಡಗಳಿಗೆ ಅನುಗುಣವಾಗಿ ಬದಲಾಯಿಸಲಾಗಿದೆ. ಲಾರ್ಡ್ ಮೆಕಾಲೆ ಅವರ ಶಿಕ್ಷಣ ವ್ಯವಸ್ಥೆಯು ಭಾರತೀಯರನ್ನು ಗುಮಾಸ್ತರನ್ನಾಗಿ ಮಾತ್ರ ಮಾಡಲು ಸೀಮಿತವಾಗಿತ್ತು, ಇದರಿಂದ ಅವರು ಇಂಗ್ಲಿಷ್ ಕಲಿತು ಮತ್ತು ಬ್ರಿಟಿಷ್ ಅಧಿಕಾರಿಗಳೊಂದಿಗೆ ಸಂವಹನ ನಡೆಸುತ್ತಿದ್ದರು. ದುರದೃಷ್ಟಕರ ವಿಷಯವೆಂದರೆ, ಶಿಕ್ಷಣ ವ್ಯವಸ್ಥೆಯಲ್ಲಿ ಅಗತ್ಯ ಬದಲಾವಣೆಗಳನ್ನು ತರಲು ಬೇರೆ ಯಾವುದೇ ಸರ್ಕಾರವು ನಿಜವಾದ ಪ್ರಯತ್ನಗಳನ್ನು ಮಾಡಲಿಲ್ಲ. ಉನ್ನತ ಶಿಕ್ಷಣ ವ್ಯವಸ್ಥೆಯನ್ನು ವಿಶ್ವ ದರ್ಜೆಗೆ ಏರಿಸುವ ಪ್ರಧಾನಿ ನರೇಂದ್ರ ಮೋದಿಯವರ ದೂರದೃಷ್ಟಿಯಿಂದ ದೇಶದಲ್ಲಿ ಮೊದಲ ಬಾರಿಗೆ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯಂತಹ ಸಂಸ್ಥೆಯನ್ನು ಕೌಶಲಗಳೊಂದಿಗೆ ಅರ್ಹತೆಗಳನ್ನು ನಿಖರವಾಗಿ ಗುರುತಿಸಲು ಸ್ಥಾಪಿಸಲಾಯಿತು. ಇದೇ ವಿಧಾನವು 34 ವರ್ಷಗಳ ನಂತರ ಬಂದ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಆಧಾರವಾಗಿದೆ.



### ಹೆಚ್ಚುವರಿ ಹೊಣೆಗಾರಿಕೆ

ಸ್ವಾತಂತ್ರ್ಯದ ನಂತರ, ಶಿಕ್ಷಣ ವ್ಯವಸ್ಥೆಯ ಸುಧಾರಣೆಗೆ ಅನೇಕ ಪ್ರಯತ್ನಗಳು ನಡೆದವು ಮತ್ತು ಹಲವಾರು ನಿಯಂತ್ರಕರು ಮತ್ತು ಸಂಸ್ಥೆಗಳನ್ನು ಸ್ಥಾಪಿಸಲಾಯಿತು. ಉನ್ನತ ಶಿಕ್ಷಣದ ಸುಧಾರಣೆಗಾಗಿ ವಿಶ್ವವಿದ್ಯಾಲಯ ಧನಸಹಾಯ ಆಯೋಗವನ್ನು (ಯುಜಿಸಿ) 1956 ರಲ್ಲಿ ಸ್ಥಾಪಿಸಲಾಯಿತು. 1962 ರಲ್ಲಿ ಶಾಲಾ ಶಿಕ್ಷಣಕ್ಕಾಗಿ ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಶನ್ (ಸಿಬಿಎಸ್‌ಇ) ರಚನೆಯಾಯಿತು. ಈ ಎಲ್ಲಾ ಸಂಸ್ಥೆಗಳ ವ್ಯಾಪ್ತಿಯನ್ನು ವಿವರಿಸಲಾಯಿತು. ಆದರೂ, ಈ ಸಂಸ್ಥೆಗಳಿಗೆ ಇನ್ನೂ ಅನೇಕ ಜವಾಬ್ದಾರಿಗಳನ್ನು ನಿಯೋಜಿಸಲಾಯಿತು. ಉದಾಹರಣೆಗೆ, ಸಹಾಯಕ ಪ್ರಾಧ್ಯಾಪಕರಿಗೆ ಅರ್ಹತಾ ಪರೀಕ್ಷೆಯನ್ನು ನಡೆಸುವ ಜವಾಬ್ದಾರಿಯನ್ನು ಯುಜಿಸಿಗೆ ವಹಿಸಲಾಯಿತು. ಕೆಲವು ವರ್ಷಗಳ ನಂತರ ಅದನ್ನು ಸಿಬಿಎಸ್‌ಇಗೆ ಹಸ್ತಾಂತರಿಸಲಾಯಿತು. ವಿಭಿನ್ನ ಅರ್ಹತಾ ಪರೀಕ್ಷೆಗಳನ್ನು ನಡೆಸಲು ಪ್ರತ್ಯೇಕ ಸಂಸ್ಥೆಗಳು ನಡೆಸಿದವು. ಉದಾಹರಣೆಗೆ, ದೇಶದ ತಾಂತ್ರಿಕ ಶಿಕ್ಷಣವನ್ನು ಸುಧಾರಿಸಲು ರೂಪುಗೊಂಡ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ), 2018 ರವರೆಗೆ ನಿರ್ವಹಣಾ ಸಂಸ್ಥೆಗಳಲ್ಲಿ ಪ್ರವೇಶಕ್ಕಾಗಿ ಸಾಮಾನ್ಯ ನಿರ್ವಹಣಾ ಪ್ರವೇಶ ಪರೀಕ್ಷೆಯನ್ನು (ಸಿಎಮ್‌ಇಟಿ) ನಡೆಸುವ ಜವಾಬ್ದಾರಿಯನ್ನು ಹೊಂದಿತ್ತು. ಇದು ಈ ಸಂಸ್ಥೆಗಳ ಕೆಲಸದ ಮೇಲೆ ಪರಿಣಾಮ ಬೀರಿದ್ದು ಮಾತ್ರವಲ್ಲದೇ, ಪ್ರವೇಶ ಪರೀಕ್ಷೆಗಳು ಮೊದಲೇ ನಿರ್ಧರಿಸಿದ ಮಾದರಿಯಲ್ಲಿಯೇ ಮುಂದುವರೆದವು.




### ಪರೀಕ್ಷೆಯಿಂದ ಮೌಲ್ಯಮಾಪನದವರೆಗೆ ದೀರ್ಘಾವಧಿ ...

ಎಲ್ಲಾ ಪ್ರವೇಶ ಪರೀಕ್ಷೆಗಳು ಆಫ್‌ಲೈನ್ ಮಾದರಿಯಲ್ಲಿ ನಡೆದಿದ್ದರಿಂದ, ಮೌಲ್ಯಮಾಪನಕ್ಕಾಗಿ ಅಂತಹ ಪರೀಕ್ಷೆಗಳನ್ನು ನಡೆಸುವ ಸಂಸ್ಥೆಗಳಿಗೆ ಉತ್ತರ ಪತ್ರಿಕೆಗಳನ್ನು ಕಳುಹಿಸುವಲ್ಲಿಯೇ ಸಾಕಷ್ಟು ಸಮಯ ಕಳೆದುಹೋಗುತ್ತಿತ್ತು. ಕೆಲವೊಮ್ಮೆ, ಫಲಿತಾಂಶಗಳನ್ನು ಘೋಷಿಸಲು ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿದ ನಂತರವೂ ಒಂದು ತಿಂಗಳಿಗಿಂತ ಹೆಚ್ಚು ಸಮಯ ತೆಗೆದುಕೊಳ್ಳಲಾಗುತ್ತಿತ್ತು. ಇದರಿಂದಾಗಿ, ಅಂತಹ ಎಲ್ಲಾ ಪರೀಕ್ಷೆಗಳು ವರ್ಷಕ್ಕೊಮ್ಮೆ ಮಾತ್ರ ನಡೆಯುತ್ತಿದ್ದವು.

### ಬೃಹತ್ ಸಂಪನ್ಮೂಲಗಳ ಅವಶ್ಯಕತೆ ...

ಪ್ರವೇಶ ಪರೀಕ್ಷೆಗಳನ್ನು ಆಫ್‌ಲೈನ್ ಮಾದರಿಯಲ್ಲಿ ನಡೆಸುವುದರಿಂದ, ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸುವುದರಿಂದ, ಅಂತಿಮವಾಗಿ ಫಲಿತಾಂಶಗಳನ್ನು ಘೋಷಿಸುವವರೆಗೆ ಇಡೀ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಭಾರೀ ಸಂಪನ್ಮೂಲಗಳು ಬೇಕಾಗುತ್ತವೆ. ಪ್ರವೇಶ ಪರೀಕ್ಷೆಗಳನ್ನು ನಡೆಸುವ ಹೆಚ್ಚುವರಿ ಜವಾಬ್ದಾರಿಯನ್ನು ಪೂರೈಸಲು, ಸಿಬಿಎಸ್‌ಇ ಮತ್ತು ಎಐಸಿಟಿಇಯಂತಹ ಸಂಸ್ಥೆಗಳು ತಮ್ಮ ಸಂಪೂರ್ಣ ಸಂಪನ್ಮೂಲಗಳನ್ನು ಅದರಲ್ಲಿ ವಿನಿಯೋಗಿಸಬೇಕಾಗಿತ್ತು, ಅದು ಅವರ ಸ್ವಂತ ಕೆಲಸದ ಮೇಲೆ ಪರಿಣಾಮ ಬೀರುತ್ತಿತ್ತು.



**ಆದ್ಯತೆಯಿಂದ ಶ್ರೇಯಾಂಕಗಳಿಗೆ:** ಇದು ಶಿಕ್ಷಣ ವ್ಯವಸ್ಥೆಯ ಅತಿದೊಡ್ಡ ನ್ಯೂನತೆಯಾಗಿದೆ. ದೇಶದ ಎಲ್ಲಾ ಭಾಗಗಳ ವಿದ್ಯಾರ್ಥಿಗಳಿಗೆ ಒಂದೇ ರೀತಿಯ ಪ್ರಶ್ನೆ ಪತ್ರಿಕೆ ಸಿಗುತ್ತದೆ. ಮೌಲ್ಯಮಾಪನದ ನಂತರ, ಶ್ರೇಯಾಂಕಗಳ ಪ್ರಕಾರ ಪ್ರವೇಶಾತಿ ನಡೆಯುತ್ತಿತ್ತು ವಿದ್ಯಾರ್ಥಿಗಳು ಪ್ರಶ್ನೆ ಪತ್ರಿಕೆಯನ್ನು ಹೇಗೆ ಪರಿಗಣಿಸುತ್ತಾರೆ ಎಂಬ ಬಗ್ಗೆ ಯಾವುದೇ ಡೇಟಾ ಅಥವಾ ಫೀಡ್ ಬ್ಯಾಕ್ ಇರಲಿಲ್ಲ. ಇದನ್ನು ಅರ್ಥಮಾಡಿಕೊಳ್ಳಲು, ಐಐಟಿ ಜಂಟಿ ಪ್ರವೇಶ ಪರೀಕ್ಷೆಗೆ ಹಾಜರಾಗುವ ಎರಡು ವಿಭಿನ್ನ ಮಂಡಳಿಗಳು ಮತ್ತು ರಾಜ್ಯಗಳ ಇಬ್ಬರು ಅಭ್ಯರ್ಥಿಗಳ ಉದಾಹರಣೆಯನ್ನು ನೋಡೋಣ. ಅವರಿಬ್ಬರೂ ಪ್ರಶ್ನೆಪತ್ರಿಕೆಯನ್ನು ಬಗೆಹರಿಸಿದರು. ಇಬ್ಬರಲ್ಲಿ ಯಾರಿಗೆ ಪ್ರಶ್ನೆ ಪತ್ರಿಕೆ ಸುಲಭವಾಗಿತ್ತು, ಪ್ರಶ್ನೆಪತ್ರಿಕೆ ಪರಿಹರಿಸಲು ಅವರು ಎಷ್ಟು ಸಮಯವನ್ನು ತೆಗೆದುಕೊಂಡರು ಎಂದು ತಿಳಿಯಲು ಯಾವುದೇ ಅಧ್ಯಯನವು ಮೊದಲೇ ಲಭ್ಯವಿರಲಿಲ್ಲ. ಅಂತಹ ಪ್ರವೇಶ ಪರೀಕ್ಷೆಗಳಲ್ಲಿ ಅಂತರರಾಷ್ಟ್ರೀಯ ಮಾನದಂಡಗಳ ಆಧಾರದ ಮೇಲೆ ಗುರುತಿಸಿಕೊಳ್ಳಬಹುದಾದ ಏಕರೂಪತೆಯ ಕೊರತೆಯಿದೆ.

### ಮಾನವ ದೋಷದ ಸಾಧ್ಯತೆ ...

ಈ ತೊಡಕಿನ ಪ್ರಕ್ರಿಯೆಯಿಂದಾಗಿ, ಎಲ್ಲಾ ಹಂತದಲ್ಲೂ ಯಾವಾಗಲೂ ಮಾನವ ದೋಷಕ್ಕೆ ಅವಕಾಶವಿತ್ತು. ಅದು ಅಭ್ಯರ್ಥಿಯು ಉತ್ತರ ಪತ್ರಿಕೆಯಲ್ಲಿ ತಪ್ಪು ರೋಲ್ ನಂಬರ್ ನಮೂದಿಸುವುದು ಅಥವಾ ಸರಿಯಾದ ಆಯ್ಕೆಯನ್ನು ಮಸುಕು ಮಾಡಲು ಅಥವಾ ಗುರುತು ಮಾಡಲು ಅಭ್ಯರ್ಥಿಯು ವಿಫಲವಾಗಿದ್ದರೆ ಅಂತಹ ಒಎಂಆರ್ ಹಾಳೆಯನ್ನು ಮೌಲ್ಯಮಾಪನ ಮಾಡಲಾಗುತ್ತಿರಲಿಲ್ಲ. ಹಾಗೆಯೇ, ಪರೀಕ್ಷೆಯ ನಂತರವೂ ಒಎಂಆರ್ ಹಾಳೆಯಲ್ಲಿ ಉದ್ದೇಶಪೂರ್ವಕವಾದ ತಿದ್ದುಪಡಿಗಳನ್ನು ಮಾಡುವ ಸಾಧ್ಯತೆ ಇತ್ತು.

ವಾಸ್ತವವಾಗಿ, ಭಾರತದಲ್ಲಿ ಶಾಲೆ ಅಥವಾ ಕಾಲೇಜು ಅಧ್ಯಯನವನ್ನು ಪೂರ್ಣಗೊಳಿಸಿದ ಕೂಡಲೇ ವಿದ್ಯಾರ್ಥಿಗಳು ಎದುರಿಸುವ ದೊಡ್ಡ ಸವಾಲೆಂದರೆ, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವುದು. ಅತ್ಯುತ್ತಮ ಸಂಸ್ಥೆಗಳಿಗೆ ಎಂಜಿನಿಯರಿಂಗ್, ವೈದ್ಯಕೀಯ ಅಥವಾ ನಿರ್ವಹಣಾ ಕೋರ್ಸ್‌ಗಳ ಪ್ರವೇಶಕ್ಕಾಗಿ ವಿವಿಧ ಮತ್ತು ವಿಭಿನ್ನ ಪ್ರವೇಶ ಪರೀಕ್ಷೆಗಳು ಸಾಮಾನ್ಯವಾಗಿವೆ. ವಿವಿಧ ಕೋರ್ಸ್‌ಗಳ ಪ್ರವೇಶ ಪರೀಕ್ಷೆಗಳನ್ನು ನಿಯಮಿತವಾಗಿ ನಡೆಸಲಾಗುತ್ತಿತ್ತು. ಅದೇ ಹಳೆಯ-ಶೈಲಿಯ ಮಾದರಿಯು ದೇಶದಲ್ಲಿ ದೀರ್ಘಕಾಲದವರೆಗೆ ಮುಂದುವರೆಯಿತು. ಈ ಪ್ರವೇಶ ಪರೀಕ್ಷೆಗಳಲ್ಲಿ ವೈಜ್ಞಾನಿಕ ವಿಧಾನದ ಕೊರತೆಯಿದೆ.

ಈ ಎಲ್ಲಾ ಕಾರಣಗಳಿಗಾಗಿ, ಭಾರತದಾದ್ಯಂತದ ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳ ಪ್ರವೇಶದ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ಮತ್ತು ಸಂಶೋಧನೆಯ ಆಧಾರದ ಮೇಲೆ ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸಲು ವಿಶ್ವ ದರ್ಜೆಯ ಕಾರ್ಯವಿಧಾನವನ್ನು ರಚಿಸಲು. ಒಂದು ಆಯೋಗದ ಬಗ್ಗೆ 2010 ರಲ್ಲಿ ಕಲ್ಪನೆ ಮೂಡಿತು. ಆದಾಗ್ಯೂ, ಈ ಕಲ್ಪನೆಯು ಹಲವಾರು ವರ್ಷಗಳು ಸ್ಥಗಿತಗೊಂಡಿತು. 2014 ರಲ್ಲಿ ನರೇಂದ್ರ ಮೋದಿಯವರ ಸರ್ಕಾರ ಅಧಿಕಾರಕ್ಕೆ ಬಂದಾಗ ಈ ಕಲ್ಪನೆಗೆ ಒಂದು ರೂಪ ಸಿಕ್ಕಿತು. ಅಂತಿಮವಾಗಿ, ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ಪರೀಕ್ಷೆಗಳನ್ನು ನಡೆಸಲು ಸ್ವಾಯತ್ತ ಮತ್ತು ಸ್ವಾವಲಂಬಿ ಪರೀಕ್ಷಾ ಸಂಸ್ಥೆಯಾಗಿ 1860 ರ ಭಾರತೀಯ ಸಂಘಗಳ ನೋಂದಣಿ ಕಾಯ್ದೆಯಡಿ ನೋಂದಾಯಿತ ಸಂಸ್ಥೆಯಾಗಿ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಯನ್ನು ರಚಿಸಲು ಕೇಂದ್ರ ಸಂಪುಟವು 2017 ರ ನವೆಂಬರ್ 10 ರಂದು ಅನುಮೋದನೆ ನೀಡಿತು.ಇದನ್ನು ಮೇ 2018 ರಲ್ಲಿ ನೋಂದಾಯಿಸಲಾಯಿತು. ಎನ್‌ಟಿಎ ಮೊದಲ ಬಾರಿಗೆ 2018 ರ ಡಿಸೆಂಬರ್‌ನಲ್ಲಿ ಎನ್‌ಇಟಿ ನಡೆಸಿತು. ಈಗ, 14 ವಿಧದ ಪ್ರವೇಶ ಪರೀಕ್ಷೆಗಳು, ಫೆಲೋಶಿಪ್ ಪರೀಕ್ಷೆಗಳು ಮತ್ತು ವಿಶ್ವವಿದ್ಯಾಲಯದ ಅರ್ಹತಾ ಪರೀಕ್ಷೆಗಳನ್ನು ಎನ್‌ಟಿಎ ನಡೆಸುತ್ತಿದೆ. ಎನ್‌ಟಿಎ ನಡೆಸಿದ ಪರೀಕ್ಷೆಗಳಲ್ಲಿ ಈವರೆಗೆ ಸುಮಾರು 1.23 ಕೋಟಿ ಅಭ್ಯರ್ಥಿಗಳು ಭಾಗವಹಿಸಿದ್ದಾರೆ. ಭಾರತದಲ್ಲಿ ಲೇಖನಿ ಮತ್ತು ಕಾಗದರಹಿತ ಪರೀಕ್ಷೆಯನ್ನು ಪರಿಚಯಿಸಿದ ಕೀರ್ತಿ ಎನ್‌ಟಿಎಗೆ ಸಲ್ಲುತ್ತದೆ. ಇದು ಭಾರತದ ಶಿಕ್ಷಣ ವ್ಯವಸ್ಥೆಯಲ್ಲಿ ಸುಧಾರಣೆಗಳ ಆರಂಭವಾಗಿದೆ.

**ಪ್ರವೇಶ ಪರೀಕ್ಷೆಗಳಲ್ಲಿ ವಿಶ್ವ ದರ್ಜೆ ಮಾನದಂಡಗಳು**

"ಪ್ರವೇಶಾತಿಗಾಗಿ ಅಭ್ಯರ್ಥಿಗಳ ಸಾಮರ್ಥ್ಯವನ್ನು ಸರಿಯಾದ ರೀತಿಯಲ್ಲಿ ನಿರ್ಣಯಿಸಬೇಕು. ಇದು ಸಂಶೋಧನೆಯ ಆಧಾರದ ಮೇಲೆ ಇರಬೇಕು. ಇಡೀ ಪ್ರಕ್ರಿಯೆಯು ಪಾರದರ್ಶಕ ಮತ್ತು ದೋಷರಹಿತವಾಗಿರಬೇಕು ಮತ್ತು ಅಂತರರಾಷ್ಟ್ರೀಯ ಮಾನದಂಡಗಳ ಪ್ರಕಾರ ಇರಬೇಕು. ಇದು ನಮಗೆ ಬಹಳ ಹಿಂದಿನಿಂದಲೂ ಸವಾಲಾಗಿದೆ. ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯ ಪ್ರಾರಂಭದೊಂದಿಗೆ ಇವುಗಳನ್ನು ಸಾಧಿಸಲಾಗಿದೆ"ಎಂದು ಎನ್‌ಟಿಎ ಘೋಷಣೆಯ ಸಮಯದಲ್ಲಿ ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವರಾಗಿದ್ದ ಪ್ರಕಾಶ್ ಜಾವಡೇಕರ್ ಹೇಳಿದ್ದರು. ಪ್ರವೇಶ ಪರೀಕ್ಷೆಗಳನ್ನು ಸಿದ್ಧಪಡಿಸುವುದರಿಂದ, ಪರೀಕ್ಷೆಗಳನ್ನು ನಡೆಸುವುದು ಮತ್ತು ಉತ್ತರಪತ್ರಿಕೆಗಳ ಮೌಲ್ಯಮಾಪನದವರೆಗಿನ ಸಂಪೂರ್ಣ ಜವಾಬ್ದಾರಿಯನ್ನು ಎನ್‌ಟಿಎಗೆ ವಹಿಸಲಾಗಿದೆ. 12 ಪ್ರಮುಖ ಪರೀಕ್ಷೆಗಳು ಮತ್ತು ಎರಡು ವಿಶ್ವವಿದ್ಯಾನಿಲಯಗಳಿಗೆ ಪ್ರವೇಶ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ ಮತ್ತು ಅದು ಸಂಪೂರ್ಣವಾಗಿ ಸುರಕ್ಷಿತವಾಗಿದೆ ಎಂಬುದು ಎನ್‌ಟಿಎಯ ಶ್ರೇಯವಾಗಿದೆ.



**ಎನ್‌ಟಿಎಯಂತಹ ಸಂಸ್ಥೆಯನ್ನು ಸ್ಥಾಪಿಸುವ ಬಗ್ಗೆ 1986 ರ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿಯೇ ಚರ್ಚಿಸಲಾಗಿತು. ಕಳೆದ 32 ವರ್ಷಗಳಲ್ಲಿ ಮಾಡಲಾಗದ ಆ ಕೆಲಸವನ್ನು 2018 ರಲ್ಲಿ ಎನ್‌ಟಿಎ ರಚನೆಯ ಮೂಲಕ ಪ್ರಸ್ತುತ ಸರ್ಕಾರ ಪೂರ್ಣಗೊಳಿಸಿದೆ. ಕಳೆದ ಎರಡು ವರ್ಷಗಳಲ್ಲಿ ಎನ್‌ಟಿಎ ಸುಮಾರು 45 ಪರೀಕ್ಷೆಗಳನ್ನು ನಡೆಸಿದ್ದು, ಇದರಲ್ಲಿ 1.23 ಕೋಟಿ ಅಭ್ಯರ್ಥಿಗಳು ನೋಂದಾಯಿಸಿಕೊಂಡಿದ್ದಾರೆ. ಈ ಪರೀಕ್ಷೆಗಳಲ್ಲಿ 33 ಭಾಷೆಗಳು, 13 ಮಾಧ್ಯಮಗಳ ಪರೀಕ್ಷೆಗಳು ಮತ್ತು 450 ವಿಷಯಗಳು ಸೇರಿವೆ. ಈ ಪರೀಕ್ಷೆಗಳಲ್ಲಿ ಅಂತರರಾಷ್ಟ್ರೀಯ ಗುಣಮಟ್ಟದ ಪರೀಕ್ಷೆಗಳಲ್ಲಿ ಬಳಸಲಾಗುವ ಸೈಕೋಮೆಟ್ರಿಕ್ ವಿಶ್ಲೇಷಣೆಯ ಆಧಾರದ ಮೇಲೆ ಪ್ರಶ್ನೆಗಳನ್ನು ರೂಪಿಸಲಾಗಿದೆ.**

— **ಡಾ.ರಮೇಶ್ ಪೋಖ್ರಿಯಾಲ್ ನಿಶಾಂಕ್**
**ಕೇಂದ್ರ ಶಿಕ್ಷಣ ಸಚಿವರು**

ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆಯಲು ಸಾಕ್ಷರತೆಯ ಮಟ್ಟ ಮತ್ತು ಗುಣಮಟ್ಟದ ವರ್ಧನೆಯಂತಹ ಸಮಾಜ ಎದುರಿಸುತ್ತಿರುವ ಶಿಕ್ಷಣದ ಸವಾಲುಗಳ ಬಗ್ಗೆಯೂ ಎನ್‌ಟಿಎ ಗಮನ ಹರಿಸುತ್ತಿದೆ. ಮೊದಲ ಬಾರಿಗೆ, ಪರೀಕ್ಷಾ ಮಾದರಿಗಳ ಆಧಾರದ ಮೇಲೆ ದತ್ತಾಂಶದ ಸೈಕೋಮೆಟ್ರಿಕ್ ವಿಶ್ಲೇಷಣೆಯನ್ನು ಪ್ರತಿ ಪರೀಕ್ಷೆಯ ನಂತರವೂ ಅಂತರರಾಷ್ಟ್ರೀಯ ಪರೀಕ್ಷಾ ಸಂಸ್ಥೆಗಳ ಮಾದರಿಯಲ್ಲಿ ನಡೆಸಲಾಗುತ್ತಿದೆ. ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಯು ಪ್ರಶ್ನೆಗಳನ್ನು ಹೇಗೆ ಪರಿಹರಿಸುತ್ತಾನೆ, ಪ್ರಶ್ನೆಯನ್ನು ಪರಿಹರಿಸಲು ಅವನು ಎಷ್ಟು ಸಮಯವನ್ನು ತೆಗೆದುಕೊಳ್ಳುತ್ತಾನೆ, ಪ್ರಶ್ನೆಗಳ ಅನುವಾದ ಸರಿಯಾಗಿದೆಯೇ, ವಿದ್ಯಾರ್ಥಿಯು ಇಂಗ್ಲಿಷ್‌ಗಿಂತ ಹಿಂದಿಯಲ್ಲಿರುವ ಪ್ರಶ್ನೆಯನ್ನು ಅರ್ಥಮಾಡಿಕೊಳ್ಳಲು ಹೆಚ್ಚು ಸಮಯ ತೆಗೆದುಕೊಳ್ಳುತ್ತಿದ್ದಾನೆಯೇ ಎಂದು ಇದು ಅಧ್ಯಯನ ಮಾಡುತ್ತದೆ. ಎನ್‌ಟಿಎ ತಜ್ಞರು ವಿವಿಧ ಪ್ರದೇಶಗಳಲ್ಲಿ ಅಥವಾ ಮಂಡಳಿಗಳಲ್ಲಿ ಈ ವಿಷಯಗಳ ತುಲನಾತ್ಮಕ ಅಧ್ಯಯನವನ್ನು ನಡೆಸುತ್ತಾರೆ. ಸಂಬಂಧಪಟ್ಟ ಮಂಡಳಿ ಅಥವಾ ಶಿಕ್ಷಣ

ಇಲಾಖೆಯೊಂದಿಗೆ ಹಂಚಿಕೊಂಡ ಡೇಟಾಬೇಸ್ ತಯಾರಿಸಿ. ಇದರ ಆಧಾರದ ಮೇಲೆ, ಶಿಕ್ಷಣ ವ್ಯವಸ್ಥೆಯ ಸುಧಾರಣೆ ಅಥವಾ ಬೋಧನಾ ವಿಧಾನಸ ಬದಲಾಯಂತಹ ಕ್ರಮಗಳ ಬಗ್ಗೆ ಯೋಚಿಸಬಹುದು. ಪಠ್ಯಕ್ರಮ ಮತ್ತು ಬೋಧನಾ ವಿಧಾನ ಬದಲಾವಣೆಯಂತಹ ಕ್ರಮಗಳ ಬಗ್ಗೆ ಸೈಕೋಮೆಟ್ರಿಕ್ ಡೇಟಾವನ್ನು ಬಳಸಲಾಗುತ್ತದೆ. ಪ್ರಶ್ನೆ ಪತ್ರಿಕೆಗಳನ್ನು ಮತ್ತಷ್ಟು ಸುಧಾರಿಸುವಲ್ಲಿ ಇದು ಎನ್‌ಟಿಎ ತಜ್ಞರಿಗೆ ಸಹಾಯ ಮಾಡುತ್ತದೆ. ವಿದ್ಯಾರ್ಥಿಗಳ ದತ್ತಾಂಶದಿಂದ ನಡೆಸಲ್ಪಡುವ ಸೈಕೋಮೆಟ್ರಿಕ್ ವಿಶ್ಲೇಷಣೆಯು ಶಿಕ್ಷಣ ವ್ಯವಸ್ಥೆಯನ್ನು ಆಳವಾಗಿ ಅಧ್ಯಯನ ಮಾಡಲು ಬಹಳ ಉಪಯುಕ್ತವಾಗಿದೆ ಎಂದು ಸಾಬೀತಾಗಿದೆ. ಎನ್‌ಟಿಎ ಕಾರ್ಯಸೂಚಿಯಲ್ಲಿ ಮೂರು ಪ್ರಮುಖ ಅಂಶಗಳಿವೆ:

**ವಿದ್ಯಾರ್ಥಿಗಳಿಗೆ ಪರೀಕ್ಷೆಗಳು ಸುಲಭವಾಗುತ್ತವೆ..**

**ಮೌಲ್ಯಮಾಪನದಲ್ಲಿ ಸುಧಾರಣೆ**

ಹಳೆಯ ಮೌಲ್ಯಮಾಪನ ವಿಧಾನಗಳಿಗೆ ಬದಲಾಗಿ, ಭವಿಷ್ಯದಲ್ಲಿ ಹೊಸ ಆಲೋಚನೆಗಳ ಮೂಲಕ ಮೌಲ್ಯಮಾಪನವನ್ನು ಸುಧಾರಿಸಲು ಹೆಚ್ಚಿನ ಒತ್ತು ನೀಡಲಾಗುತ್ತದೆ. ಎನ್‌ಟಿಎ ಪ್ರಾರಂಭವಾದಾಗಿನಿಂದಲೂ, ಪ್ರವೇಶ ಪರೀಕ್ಷೆಗಳ ಮೌಲ್ಯಮಾಪನದ ಬಗ್ಗೆ ಪಟ್ಟುಬಿಡದೆ ಸಂಶೋಧನೆ ನಡೆಸುತ್ತಿದೆ.

**ಸಂಶೋಧನಾ ನೀತಿಗಳನ್ನು ರೂಪಿಸುವುದು**

ಎನ್‌ಟಿಎ ಜನಸಾಮಾನ್ಯರಿಗೆ ಸಂಬಂಧಿಸಿದ ವಿಷಯಗಳ ಕುರಿತು ಸಂಶೋಧನೆಯೊಂದಿಗೆ ಮೌಲ್ಯಮಾಪನ ಕಾರ್ಯವನ್ನು ಸಹ ನಿರ್ವಹಿಸುತ್ತದೆ. ಪ್ರಪಂಚದಾದ್ಯಂತದ ನೀತಿ ಅಗತ್ಯಗಳನ್ನು ಪೂರೈಸಲು ದೊಡ್ಡ-ಪ್ರಮಾಣದ ಅಂತರರಾಷ್ಟ್ರೀಯ ತುಲನಾತ್ಮಕ ಸಮೀಕ್ಷೆಗಳಿಂದ ಡೇಟಾ ಬಳಕೆಯ ಬಗ್ಗೆ ಎನ್‌ಟಿಎ ಕಾರ್ಯಸೂಚಿಯಲ್ಲಿ ಸೇರಿಸಲಾಗಿದೆ.

**ಒಳಗೊಳ್ಳುವಿಕೆ: ದಿವ್ಯಾಂಗರು ಸೇರಿದಂತೆ ಎಲ್ಲಾ ಪರೀಕ್ಷೆ ಬರೆಯುವ ಎಲ್ಲರಿಗೂ ಪ್ರವೇಶ ಪರೀಕ್ಷೆಗಳು ಅನುಕೂಲಕರ ಮತ್ತು ನ್ಯಾಯಯುತವಾಗಿವೆ ಎಂದು ಖಚಿತಪಡಿಸಿಕೊಳ್ಳಲು ಎನ್‌ಟಿಎ ಸಂಪೂರ್ಣ ಬದ್ಧವಾಗಿದೆ. ಪ್ರತಿ ಪರೀಕ್ಷೆಯಲ್ಲೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಇಂತಹ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ.**

ಎನ್‌ಟಿಎ ದೇಶದ ಶಿಕ್ಷಣ ವ್ಯವಸ್ಥೆಯಲ್ಲಿ ಒಂದು ಕ್ರಾಂತಿಕಾರಿ ಹೆಜ್ಜೆಯಾಗಿದೆ, ಆದರೆ ದೊಡ್ಡ ಪ್ರಶ್ನೆಯೆಂದರೆ, ಪರೀಕ್ಷೆಗಳಿಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಏನು ಬದಲಾಗಿದೆ ಮತ್ತು ಹೊಸ ವ್ಯವಸ್ಥೆಯಿಂದ ಅವರು ಹೇಗೆ ಪ್ರಯೋಜನ ಪಡೆಯುತ್ತಿದ್ದಾರೆ?ಎಂಬುದು. ಪ್ರತಿ ವರ್ಷ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾಗುವ 60 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಎನ್‌ಟಿಎ ಹೊಸ ವ್ಯವಸ್ಥೆಯನ್ನು ಹೇಗೆ ಪರಿಚಯಿಸಿತು. ಇದನ್ನು ಅರ್ಥಮಾಡಿಕೊಳ್ಳೋಣ...

**ಪರೀಕ್ಷೆಯಲ್ಲಿ ಎರಡು ಬಾರಿ ತೆಗೆದುಕೊಳ್ಳುವ ಆಯ್ಕೆ**

ಇದಕ್ಕೂ ಮೊದಲು ದೇಶಾದ್ಯಂತ ಐಐಟಿಗಳು ಮತ್ತು ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶಕ್ಕಾಗಿ ರಾಷ್ಟ್ರೀಯ ಅರ್ಹತಾ ಕಮ್ ಪ್ರವೇಶ ಪರೀಕ್ಷೆ (ನೀಟ್) ವರ್ಷಕ್ಕೊಮ್ಮೆ ಮಾತ್ರ ನಡೆಯುತ್ತಿತ್ತು. ಅಂತಹ ಸಂಸ್ಥೆಗಳಲ್ಲಿ ಪ್ರವೇಶ ಪಡೆಯಲು ಶ್ರಮಪಟ್ಟ ವಿದ್ಯಾರ್ಥಿಗಳಿಗೆ ವರ್ಷಕ್ಕೊಂದೇ ಅವಕಾಶವಿತ್ತು. ಪ್ರವೇಶ ಪಡೆಯಲು ಸಾಧ್ಯವಾಗದ



ವಿದ್ಯಾರ್ಥಿಗಳು ಮುಂದಿನ ವರ್ಷದ ಪ್ರವೇಶ ಪರೀಕ್ಷೆಗೆ ಹಾಜರಾಗಲು ಇಡೀ ವರ್ಷ ತಯಾರಿ ಮಾಡಬೇಕಾಗಿರುವುದರಿಂದ ಅವರು ಒತ್ತಡಕ್ಕೊಳಗಾಗುತ್ತಿದ್ದರು. ಆದರೆ ಎನ್‌ಟಿಎ ಈಗ ವರ್ಷಕ್ಕೆ ಎರಡು ಬಾರಿ ಈ ಪರೀಕ್ಷೆಗಳನ್ನು ಆನ್‌ಲೈನ್‌ನಲ್ಲಿ ನಡೆಸುತ್ತದೆ. ಹೊಸ ಮಾದರಿಯು ವಿದ್ಯಾರ್ಥಿಗಳಿಗೆ ಅವರ ಎರಡು ಸ್ಕೋರ್‌ಗಳ ಆಧಾರದ ಮೇಲೆ ಶ್ರೇಯಾಂಕವನ್ನು ಪಡೆಯಲು ಅನುವು ಮಾಡಿಕೊಡುತ್ತದೆ. ಸ್ಕೋರ್‌ಗಳನ್ನು ಸುಧಾರಿಸಲು ಮತ್ತು ಅಮೂಲ್ಯವಾದ ಒಂದು ವರ್ಷ ವ್ಯರ್ಥವಾಗುವುದನ್ನು ತಪ್ಪಿಸಲು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಈ ನಿರ್ಧಾರ ಮಾಡಲಾಗಿದೆ. ಇದು ವಿದ್ಯಾರ್ಥಿಗಳ ಸಮಯ ಮತ್ತು ಹಣವನ್ನು ಉಳಿಸಿದೆ ಮತ್ತು ಪ್ರಯತ್ನ ವಿಫಲವಾದಾಗ ಮತ್ತೆ ವರ್ಷದುದ್ದಕ್ಕೂ ಸಿದ್ಧತೆ ನಡೆಸಬೇಕಾದ ಒತ್ತಡವನ್ನು ಕಡಿಮೆ ಮಾಡುತ್ತದೆ.

**ಸೋರಿಕೆಯಿಲ್ಲದ ವ್ಯವಸ್ಥೆ- ಪ್ರತಿಭೆಗೆ ಅವಕಾಶ**

ಈ ಮೊದಲು ಎಲ್ಲಾ ಪರೀಕ್ಷೆಗಳು ಆಫ್‌ಲೈನ್‌ನಲ್ಲಿ ನಡೆಯುತ್ತಿದ್ದವು. ವಿದ್ಯಾರ್ಥಿಗಳಿಗೆ ಪ್ರಶ್ನೆ ಪತ್ರಿಕೆ ಮತ್ತು ಒಎಂಆರ್ ಹಾಳೆ ನೀಡಲಾಗುತ್ತಿತ್ತು. ಒಎಂಆರ್ ಹಾಳೆಯಲ್ಲಿ, ಅಭ್ಯರ್ಥಿಗಳು ಸೂಕ್ತ ಆಯ್ಕೆಯನ್ನು ಬಾಲ್ ಪೆನ್ ನಿಂದ ಮಸುಕುಗೊಳಿಸಬೇಕು ಅಥವಾ ಗುರುತು ಮಾಡಬೇಕು. ಪರೀಕ್ಷೆಯ ನಂತರ, ಒಎಂಆರ್ ಹಾಳೆಯನ್ನು ಪರೀಕ್ಷಕರಿಗೆ ನೀಡಬೇಕಾಗಿತ್ತು. ಈ ವ್ಯವಸ್ಥೆಯಲ್ಲಿ ಮೂರು ಪ್ರಮುಖ ನ್ಯೂನತೆಗಳಿವೆ. ಮೊದಲನೆಯದಾಗಿ, ಸರಿಯಾದ ಆಯ್ಕೆಯನ್ನು ಮಸುಕುಗೊಳಿಸುವಾಗ ಅಥವಾ ಗುರುತ ಮಾಡುವಾಗ ತಪ್ಪುಗಳಾಗುವ ಸಾಧ್ಯತೆಯಿತ್ತು, ಅದನ್ನು ನಂತರ ಸರಿಪಡಿಸಲು ಸಾಧ್ಯವಾಗುತ್ತಿರಲಿಲ್ಲ. ಎರಡನೆಯದಾಗಿ, ಪರೀಕ್ಷೆಗಳ ನಂತರ ಒಎಂಆರ್ ಹಾಳೆಯನ್ನು ಅಕ್ರಮವಾಗಿ ತಿದ್ದುವ ಅವಕಾಶವಿತ್ತು. ಮೂರನೆಯದಾಗಿ, ಈ ಮೊದಲು ಪ್ರಶ್ನೆ ಪತ್ರಿಕೆ ಸೋರಿಕೆಯ ದೂರುಗಳು ಇದ್ದವು. ಆದರೆ ಈಗ ಪರೀಕ್ಷೆಗಳು ಆನ್‌ಲೈನ್‌ನಲ್ಲಿ ನಡೆಯುವುದರಿಂದ ಇಡೀ ವ್ಯವಸ್ಥೆಯು ಸೋರಿಕೆಯಿಲ್ಲದೆ ಭದ್ರವಾಗಿದೆ.

# ಸರಿಯಾದ ಪ್ರತಿಭೆಯನ್ನು ಗುರುತಿಸಿ, ಅದಕ್ಕೆ ಸೂಕ್ತ ಸ್ಥಾನ ನೀಡುವುದು ನಮ್ಮ ಕೆಲಸವಾಗಿರಬೇಕು: ವಿನೀತ್ ಜೋಶಿ

**ಭಾರತದಲ್ಲಿ ಪ್ರವೇಶ ಪರೀಕ್ಷೆಗಳ ಬಗ್ಗೆ ಹೆಚ್ಚಾಗಿ ಚಿಂತಿಸಲಾಗಿಲ್ಲ. ಈ ಹಿಂದೆ ಪರೀಕ್ಷೆಗಳನ್ನು ನಿಗದಿತ ಮಾದರಿಯಲ್ಲಿ ನಡೆಸಲಾಗುತ್ತಿತ್ತು. ಪರಿಣಾಮವಾಗಿ, ಅಂತಹ ಪರೀಕ್ಷೆಗಳು ಪ್ರತಿಭೆಗೆ ಸೂಕ್ತ ನ್ಯಾಯ ದೊರಕಿಸಲಿಲ್ಲ ಅಥವಾ ಸಾಕಷ್ಟು ಅವಕಾಶಗಳನ್ನು ಒದಗಿಸಲಿಲ್ಲ. ಈ ವಿಷಯದಲ್ಲಿ ನಾವು ಇತರ ದೇಶಗಳಿಗಿಂತ ಬಹಳ ಹಿಂದಿದ್ದೇವೆ. ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಈಗ ಪ್ರವೇಶ ಪರೀಕ್ಷೆಗಳ ಸಂಪೂರ್ಣ ಮಾದರಿಯನ್ನು ಬದಲಾಯಿಸಿದೆ. ನ್ಯೂ ಇಂಡಿಯಾ ಸಮಾಚಾರ್ ನ ಸಲಹಾ ಸಂಪಾದಕ ಸಂತೋಷ್ ಕುಮಾರ್ ಅವರೊಂದಿಗೆ ಮಾತನಾಡಿದ ಎನ್.ಟಿ.ಎ. ಮಹಾ ನಿರ್ದೇಶಕ ವಿನೀತ್ ಜೋಶಿ ಎನ್.ಟಿ.ಎ.ಯ ಭವಿಷ್ಯದ ಯೋಜನೆಗಳು ಮತ್ತು ಅಗತ್ಯದ ಬಗ್ಗೆ ವಿವರಿಸಿದ್ದಾರೆ. ಸಂದರ್ಶನದ ಮುಖ್ಯಾಂಶಗಳು ಇಲ್ಲಿವೆ:**

**ಎನ್.ಟಿ.ಎ. ಹಿಂದಿರುವ ಸರ್ಕಾರದ ಉದ್ದೇಶ ಏನು?**

ಭಾರತದಲ್ಲಿನ ಪ್ರವೇಶ ಪರೀಕ್ಷೆಗಳಲ್ಲಿ ಅಂತಾರಾಷ್ಟ್ರೀಯ ಮಾನದಂಡಗಳಿಗೆ ಅನುಗುಣವಾಗಿ ಅಳತೆಗೋಲುಗಳನ್ನು ಸರಿಹೊಂದಿಸುವ ಸಂಸ್ಥೆಯನ್ನು ರಚಿಸುವುದು ಇದರ ಉದ್ದೇಶವಾಗಿದೆ. ಪ್ರತಿ ಪರೀಕ್ಷೆಯ ನಂತರವೂ ನಾವು ದತ್ತಾಂಶವನ್ನು ವಿಶ್ಲೇಷಿಸುತ್ತೇವೆ. ವಿದ್ಯಾರ್ಥಿಗಳು ಯಾವ ಪ್ರಶ್ನೆಗೆ ಯಾವ ಸಮಸ್ಯೆ ಎದುರಿಸಿದರು? ಯಾವ ಮಂಡಳಿ ಅಥವಾ ಪ್ರದೇಶದ ವಿದ್ಯಾರ್ಥಿಗಳು ಯಾವ ಪ್ರಶ್ನೆಗಳನ್ನು ಸುಲಭ ಅಥವಾ ಕಷ್ಟಕರವೆಂದು ಪರಿಗಣಿಸಿದ್ದಾರೆ? ಅನುವಾದದಿಂದಾಗಿ ವಿದ್ಯಾರ್ಥಿಗಳು ಯಾವುದೇ ಪ್ರಶ್ನೆಯನ್ನು ಅರ್ಥಮಾಡಿಕೊಳ್ಳುವಲ್ಲಿ ಯಾವುದೇ ರೀತಿಯ ಸಮಸ್ಯೆಯನ್ನು ಎದುರಿಸಿದ್ದಾರೆಯೇ? ಇಂಗ್ಲಿಷ್ ನಲ್ಲಿನ ಪ್ರಶ್ನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಾಗಿದೆಯೆ, ಆದರೆ ಪ್ರಶ್ನೆಯ ಹಿಂದಿ ಅನುವಾದ ಸರಿಯಾಗಿರಲಿಲ್ಲವೇ? ಇತರ ದೇಶಗಳಲ್ಲಿ ಇದು ಹೇಗೆ ಕಾರ್ಯನಿರ್ವಹಿಸುತ್ತದೆ ಎಂದು ನಾವು ಪರಾಮರ್ಶಿಸುತ್ತೇವೆ. ಈಗ ಎನ್.ಟಿ.ಎ. ನೆರವಿನಿಂದ ನಾವು, ಆನ್ ಲೈನ್ ಪರೀಕ್ಷೆಯ ಬಳಿಕ ದತ್ತಾಂಶವನ್ನು ವಿಶ್ಲೇಷಿಸುತ್ತೇವೆ. ಮುಂದಿನ ವರ್ಷದ ಇದೇ ಪರೀಕ್ಷೆಗೆ ಪ್ರಶ್ನೆಪತ್ರಿಕೆ ಸಿದ್ಧಪಡಿಸುವಾಗ ಈ ಎಲ್ಲ ಅಂಶಗಳನ್ನೂ ಪರಿಗಣಿಸಲಾಗುತ್ತದೆ. ಈ ದತ್ತಾಂಶವನ್ನು ಶಿಕ್ಷಣ ಮಂಡಳಿಗಳೊಂದಿಗೆ ಹಂಚಿಕೊಳ್ಳಲಾಗುತ್ತದೆ, ಇದರಿಂದ ಅಧ್ಯಯನದ ವಿನ್ಯಾಸವನ್ನು ಮತ್ತಷ್ಟು ಸುಧಾರಿಸಬಹುದಾಗಿದೆ.

**ಆರಂಭದಲ್ಲಿ ನೀವು ಯಾವ ರೀತಿಯ ಸಮಸ್ಯೆಗಳನ್ನು ಎದುರಿಸಿದಿರಿ?**

ನಾವು 2018ರ ಡಿಸೆಂಬರ್ ನಲ್ಲಿ ಮೊದಲ ಬಾರಿಗೆ ಎನ್.ಇ.ಟಿ. ಆನ್ ಲೈನ್ ಪರೀಕ್ಷೆ ನಡೆಸಿದಾಗ ಹಲವು ಪ್ರಶ್ನೆಗಳು ಉದ್ಭವವಾಗಿದ್ದವು. ಅವುಗಳಲ್ಲಿ ಕೆಲವು ಸರಿಯಾಗಿವೆ ಏಕೆಂದರೆ ನಾವು ಪ್ರಸ್ತುತ ಶಾಲಾ ಹಂತದಿಂದ ಮಕ್ಕಳಿಗೆ ಕಂಪ್ಯೂಟರ್ ಶಿಕ್ಷಣವನ್ನು ನೀಡುತ್ತಿದ್ದೇವೆ, ಆದರೆ ಅದು ಮೊದಲೇ ಇರಲಿಲ್ಲ. ಹಾಗಾದರೆ, ಪದವಿ ಪಡೆದ ಮತ್ತು ಕಂಪ್ಯೂಟರ್ ಬಗ್ಗೆ ಮೂಲಭೂತ ಜ್ಞಾನವಿಲ್ಲದವರು ಪರೀಕ್ಷೆಗಳನ್ನು ಹೇಗೆ ಎದುರಿಸುತ್ತಾರೆ? ಆದ್ದರಿಂದ ನಾವು ಪ್ರತಿ ನಗರದಲ್ಲಿ ಕೆಲವು ಗೊತ್ತುಪಡಿಸಿದ ಕೇಂದ್ರಗಳನ್ನು ರಚಿಸಿದ್ದೇವೆ, ಅಲ್ಲಿ ಅವರು ಪರೀಕ್ಷೆಯ ಮೊದಲು ಹೋಗಿ ಅದನ್ನು ಅಭ್ಯಾಸ ಮಾಡಬಹುದು. ಅಭ್ಯಾಸಕ್ಕಾಗಿ ನೋಂದಣಿ ಮಾಡಬೇಕಾದ ಆಪ್ ಅನ್ನು ಸಹ ನಾವು ಅಭಿವೃದ್ಧಿಪಡಿಸಿದ್ದೇವೆ. ನಾವು ಸರಿಯಾದ ದಿಕ್ಕಿನಲ್ಲಿ ಸಾಗಿದ್ದು, ನಾವು ಯಶಸ್ಸು ಸಾಧಿಸುತ್ತೇವೆ. ಆನ್ ಲೈನ್ ಪರೀಕ್ಷೆಯ ಸಮಯದಲ್ಲಿ ಯಾರಿಗೂ ಅನಾನುಕೂಲವಾಗದಂತೆ ನಾವು ಈಗ ಎನ್.ಟಿ.ಎ. ವೆಬ್ ಸೈಟ್ ನಲ್ಲಿ ಅಣಕು ಪರೀಕ್ಷೆಗಳ ಮೂಲಕ ಪ್ರತಿ ಪರೀಕ್ಷೆಯ ಮತ್ತು ಅಭ್ಯಾಸದ ಹಳೆಯ ಪ್ರಶ್ನೆಪತ್ರಿಕೆಗಳನ್ನು ಪರಿಹರಿಸುವ ಸೌಲಭ್ಯವನ್ನೂ ಒದಗಿಸಿದ್ದೇವೆ.

**ಹಳೆಯ ಪದ್ಧತಿಯಲ್ಲಿನ ದೋಷಗಳು ಯಾವುವು ಮತ್ತು ಎನ್.ಟಿ.ಎ. ಅದನ್ನು ಹೇಗೆ ಸರಿಪಡಿಸಿತು?**

ಈ ಮೊದಲು ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸಿದಾಗ ವಿಶ್ಲೇಷಣೆ ಮಾಡುವ ಯಾವುದೇ ವ್ಯವಸ್ಥೆ ಇರಲಿಲ್ಲ. ಇದೇ ಕಾರಣಕ್ಕಾಗಿಯೇ ಈ ಬಾರಿ ಪರೀಕ್ಷೆಯು ತುಂಬಾ

**ನೂತನ ಶಿಕ್ಷಣ ನೀತಿಯಲ್ಲಿ ಎನ್.ಟಿ.ಎ.ಯ ಪಾತ್ರ ಏನು?**

ಪ್ರವೇಶ ಪರೀಕ್ಷೆಗಳನ್ನು ಸುಧಾರಣೆ ಮಾಡುವಲ್ಲಿ ಎನ್.ಟಿ.ಎ. ಪಾತ್ರಕ್ಕೆ ಸಂಬಂಧಿಸಿದಂತೆ, ನೂತನ ರಾಷ್ಟ್ರೀಯ ಶಿಕ್ಷಣ ನೀತಿಯು ದೇಶದಾದ್ಯಂತ ಉನ್ನತ ಶಿಕ್ಷಣ ಪ್ರವೇಶಕ್ಕೆ ಪರೀಕ್ಷೆಗಳ ಬಗ್ಗೆ ಹೇಳುತ್ತದೆ. ಪರೀಕ್ಷೆಗಳನ್ನು ಎರಡು ಭಾಗವಾಗಿ ನಡೆಸಲಾಗುತ್ತದೆ. ಮೊದಲನೆಯದು ಸಾಮರ್ಥ್ಯ ಪರೀಕ್ಷೆ (ಆಪ್ಟಿಟ್ಯೂಡ್ ಟೆಸ್ಟ್) ಅಂದರೆ, ಆಸಕ್ತಿ ಆಧಾರಿತ ಮತ್ತು ಎರಡನೆಯದು ವಿಷಯ ಆಧಾರಿತ ಪರೀಕ್ಷೆ. ಹೊಸ ಶೈಕ್ಷಣಿಕ ಅವಧಿ (22-2021), ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಅದರಲ್ಲೂ ಕೇಂದ್ರೀಯ ವಿಶ್ವವಿದ್ಯಾಲಯಗಳಿಗೆ ಪ್ರವೇಶ ಪರೀಕ್ಷೆ ಮೂಲಕ ನಡೆಯುತ್ತದೆ. ಪ್ರಸ್ತಾವನೆಯ ಬಗ್ಗೆ ಮಾತ್ರ ಚರ್ಚಿಸಲಾಗಿದ್ದು, ಅಂತಿಮ ತೀರ್ಮಾನವನ್ನು ಇನ್ನೂ ತೆಗೆದುಕೊಳ್ಳಬೇಕಾಗಿದೆ.



ಕಷ್ಟಕರವಾಗಿತ್ತು ಅಥವಾ ಸುಲಭವಾಗಿತ್ತು ಎಂಬ ಮಾತನ್ನು ನಾವು ಆಗಾಗ್ಗೆ ಕೇಳುತ್ತಿರುತ್ತೇವೆ. ಆದರೆ ಈಗ ಆನ್ ಲೈನ್ ಪರೀಕ್ಷೆಯಿಂದಾಗಿ ನಮ್ಮೊಂದಿಗೆ ಸಂಪೂರ್ಣ ದತ್ತಾಂಶ ಲಭ್ಯವಿದೆ. ಆದ್ದರಿಂದ, ಮೊದಲೇ ನಿರ್ಧರಿಸಿದ ಗುರಿಗಳ ಪ್ರಕಾರ ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸಲಾಗುತ್ತದೆ. ಇದಲ್ಲದೆ, ಈ ಮೊದಲು ಪರೀಕ್ಷೆಗಳನ್ನು ನಡೆಸಲು ಹಲವಾರು ಸಂಪನ್ಮೂಲಗಳನ್ನು ಬಳಸಲಾಗುತ್ತಿತ್ತು. ಈ ಇಡೀ ಪ್ರಕ್ರಿಯೆ ಸುದೀರ್ಘವಾಗಿರುತ್ತಿತ್ತು. ಸಿಬಿಎಸ್ಇಯ ಅಧ್ಯಕ್ಷನಾಗಿ ನಾನು ಇದು ತುಂಬಾ ಹತ್ತಿರದಿಂದ ಗಮನಿಸಿದ್ದೇನೆ; ಫಲಿತಾಂಶ ಸಿದ್ಧಪಡಿಸಲು ತಿಂಗಳೇ ಹಿಡಿಯುತ್ತಿತ್ತು. ಇಲ್ಲಿ, ನಾವು ವಾರದೊಳಗೆ ಫಲಿತಾಂಶ ಸಿದ್ಧಪಡಿಸುತ್ತೇವೆ. ಈ ಮುನ್ನ, ಒಂದು ವಿಷಯದ ತಜ್ಞರು ಒಂದೇ ಪ್ರಶ್ನೆಪತ್ರಿಕೆ ಸಿದ್ಧಪಡಿಸಲು ಶ್ರಮಿಸುತ್ತಿದ್ದರು, ಕಾರಣ ಅವರಿಗೆ ಮಾಡಲು ಬಹಳಷ್ಟು ಕೆಲಸ ಇರುತ್ತಿತ್ತು. ಎನ್.ಟಿ.ಎ.ಯಲ್ಲಿ, ನಾವು, ಪ್ರತಿಯೊಂದು ವಿಷಯಕ್ಕೂ ತಜ್ಞರನ್ನು ಹೊಂದಿದ್ದೇವೆ; ನಾವು ಅವರನ್ನು ಹಲವು ಪ್ರವೇಶ ಪರೀಕ್ಷೆಗಳಿಗೆ ಬಳಸಿಕೊಳ್ಳುತ್ತೇವೆ. ಇದರ ಫಲವಾಗಿ ನಾವು ವರ್ಷದಲ್ಲಿ ಎರಡು ಬಾರಿ ಹಲವು ಪರೀಕ್ಷೆಗಳನ್ನು ನಡೆಸುತ್ತಿದ್ದೇವೆ. ನಾವು 14 ಬಗೆಯ ಪರೀಕ್ಷೆಗಳನ್ನು 25 ಬಾರಿ ನಡೆಸಿದ್ದೇವೆ.

**Q&A ಇದರಿಂದ ವಿದ್ಯಾರ್ಥಿಗಳು ಹೇಗೆ ಪ್ರಯೋಜನ ಪಡೆಯುತ್ತಾರೆ?**

ಆನ್ ಲೈನ್ ಆರಂಭವಾದಾಗಿನಿಂದ ನಾವು ಈಗ ವರ್ಷದಲ್ಲಿ ಎರಡು ಬಾರಿ ಪರೀಕ್ಷೆ ನಡೆಸುತ್ತಿದ್ದೇವೆ. ಈ ವರ್ಷ ಜೆಇಇಯನ್ನು ನಾಲ್ಕು ಬಾರಿ ನಡೆಸಿದ್ದೇವೆ. ಈ ಆಯ್ಕೆ ವಿದ್ಯಾರ್ಥಿಗಳ ಒತ್ತಡವನ್ನು ತಗ್ಗಿಸಿದೆ. ಒಬ್ಬ ವಿದ್ಯಾರ್ಥಿ ಒಂದು ಪರೀಕ್ಷೆಯಲ್ಲಿ ಸರಿಯಾಗಿ ಬರೆಯಲು ಆಗದಿದ್ದಲ್ಲಿ, ಅವರು ಮುಂದಿನ ಪರೀಕ್ಷೆಯತ್ತ ಗಮನ ಹರಿಸಬಹುದು. ಪರೀಕ್ಷೆಯ ಬಳಿಕ, ಅವರು ಒಎಂಆರ್ ಹಾಳೆಯಲ್ಲಿ ತಪ್ಪು ಉತ್ತರ ದಾಖಲು ಮಾಡಿದೆನೇ ಅಥವಾ ರೋಲ್ ನಂಬರ್ ಅನ್ನು ಸರಿಯಾಗಿ ನಮೂದಿಸಲಿಲ್ಲವೇ ಎಂಬ ಬಗ್ಗೆ ಚಿಂತಿಸಬೇಕಾಗಿರುವುದಿಲ್ಲ. ಹೆಚ್ಚೂ ಕಡಿಮೆ, ನಾವು ಅವರ ಒತ್ತಡವನ್ನು ಕಡಿಮೆ ಮಾಡಲು ಪ್ರಯತ್ನಿಸಿದ್ದೇವೆ. ಪ್ರಶ್ನೆಪತ್ರಿಕೆ ಸಿದ್ಧಪಡಿಸುವ ಮಾದರಿಯ ಬಗ್ಗೆ ನಾನು ನಿಮಗೆ ಹೇಳಿದಂತೆ, ವಿದ್ಯಾರ್ಥಿಗಳ ಆಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ನಾವು ಅದನ್ನು ತಯಾರಿಸುತ್ತೇವೆ. ಪ್ರತಿಶತವನ್ನು ಗಮನದಲ್ಲಿಟ್ಟುಕೊಂಡು ಶ್ರೇಯಾಂಕವನ್ನು ನಿರ್ಧರಿಸಲಾಗುತ್ತದೆ. ಇದರ ದೊಡ್ಡ ಪ್ರಯೋಜನವೆಂದರೆ ನೀವು ಈಗ ಪ್ರತಿಯೊಬ್ಬ ವಿದ್ಯಾರ್ಥಿಯ ಪ್ರತಿಭೆಯನ್ನು ಗುರುತಿಸಬಹುದು ಮತ್ತು ಅದನ್ನೂ ಸಮಾನ ಅವಕಾಶಗಳೊಂದಿಗೆ ಗುರುತಿಸಬಹುದಾಗಿದೆ.

**Q&A ಎನ್.ಟಿ.ಎ.ಯ ಹೆಚ್ಚಿನ ವಿಸ್ತರಣೆ ಅಥವಾ ಭವಿಷ್ಯದಲ್ಲಿ ಯಾವುದೇ ಹೊಸ ಸಾಧ್ಯತೆ?**

ಚೀನಾದಲ್ಲಿನ ಕಾಲೇಜುಗಳಿಗೆ ಪ್ರವೇಶಪಡೆಯಲು ಸುಮಾರು ಒಂದು ಕೋಟಿ ಅಭ್ಯರ್ಥಿಗಳು ಗವೋಕವೋ (Gaokao) ಪರೀಕ್ಷೆಗೆ ಹಾಜರಾಗುತ್ತಾರೆ. ಇದು ವಿಶ್ವದ ಅತಿ ದೊಡ್ಡ ಪರೀಕ್ಷೆ. ಆದರೆ ಇದು ಕೇವಲ ಕೆಲವು ಭಾಷೆಯಲ್ಲಿ ಮಾತ್ರವೇ ನಡೆಯುತ್ತದೆ. ಆದರೆ, ಎನ್.ಟಿ.ಎ.ಯಿಂದ ನಡೆಸಲಾಗುವ ನೀಟ್ ಪರೀಕ್ಷೆಯಲ್ಲಿ ನಾವು 16 ಲಕ್ಷ ಪರೀಕ್ಷಾರ್ಥಿಗಳಿಗೆ 16 ಭಾಷೆಗಳಲ್ಲಿ ಪ್ರಶ್ನೆಪತ್ರಿಕೆಯನ್ನು ನೀಡುತ್ತೇವೆ. ನಾವು ಇಡೀ ದೇಶದ ಪ್ರತಿಭಾವಂತರಿಗೆ ಜಾಗತಿಕ ಮಾನದಂಡಗಳ ಆಧಾರದಲ್ಲಿ ಸಮಾನ ಅವಕಾಶ ಒದಗಿಸುತ್ತೇವೆ. ಅತಿ ಶೀಘ್ರವೇ ಎನ್.ಟಿ.ಎ. ವಿಶ್ವದ ಅತಿ ದೊಡ್ಡ ಪರೀಕ್ಷೆ ನಡೆಸುವ ಸಂಸ್ಥೆಯಾಗಲಿದೆ. ವಿದ್ಯಾರ್ಥಿಗಳ ಸರಿಯಾದ ಪ್ರತಿಭೆಗಳು ಹೊರಬರಲು ಮತ್ತು ನಮ್ಮ ಶಿಕ್ಷಣ ವ್ಯವಸ್ಥೆಯಿಂದ ಪರೀಕ್ಷೆಯವರೆಗೆ ವೈಜ್ಞಾನಿಕ ಮನೋಭಾವವನ್ನು ಆಧರಿಸಿ ಉತ್ತಮ ವ್ಯವಸ್ಥೆಯನ್ನು ರೂಪಿಸುವ ರೀತಿಯಲ್ಲಿ ನಾವು ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸಲು ನಿರಂತರವಾಗಿ ಪ್ರಯತ್ನಿಸುತ್ತಿದ್ದೇವೆ.

ಎನ್.ಟಿ.ಎ. ತಜ್ಞರು ಸಿದ್ಧಪಡಿಸುವ ಪ್ರಶ್ನೆಪತ್ರಿಕೆಗಳು ಅಭ್ಯರ್ಥಿಯ ಕಂಪ್ಯೂಟರ್ ಪರದೆಯಲ್ಲಿ ನಿಗದಿತ ಸಮಯದಲ್ಲಿ ಎನ್ ಕ್ರಿಪ್ಟ್ ಮಾಡಲಾದ ಸ್ವರೂಪದಲ್ಲಿ ನೇರವಾಗಿ ತೆರೆದುಕೊಳ್ಳುತ್ತದೆ. ಅಭ್ಯರ್ಥಿಯು ಸರಿಯಾದ ಉತ್ತರಕ್ಕೆ ಗುರುತು ಹಾಕುತ್ತಾನೆ ಮತ್ತು ಸಲ್ಲಿಸುವ ಮೊದಲು ಅವನು ಬಯಸಿದರೆ ತನ್ನ ಉತ್ತರವನ್ನು ಸಹ ಬದಲಾಯಿಸಬಹುದು. ಪರೀಕ್ಷೆ ಮುಗಿದ ನಂತರ, ಸಂಪೂರ್ಣ ದತ್ತಾಂಶವು ನೇರವಾಗಿ ಎನ್.ಟಿ.ಎ. ಸರ್ವರ್ ನಲ್ಲಿ ಉಳಿಸಲಾಗುತ್ತದೆ.

**ಪ್ರತಿಯೊಂದು ವಿವರವನ್ನೂ ಗಮನದಲ್ಲಿಟ್ಟುಕೊಂಡು ಪ್ರಶ್ನೆಪತ್ರಿಕೆಯ ಸಿದ್ಧತೆ..**

ಯಾವುದೇ ಪರೀಕ್ಷೆಗೆ ಪ್ರಶ್ನೆಪತ್ರಿಕೆ ಸಿದ್ಧಪಡಿಸಲು ಎನ್.ಟಿ.ಎ. ತಜ್ಞರ ತಂಡವನ್ನು ಹೊಂದಿದೆ. ಹಿಂದಿನ ಪರೀಕ್ಷೆಗಳ ಸೈಕೋಮೆಟ್ರಿಕ್ ವಿಶ್ಲೇಷಣೆಯಿಂದ ದತ್ತಾಂಶ ಮತ್ತು ಮಾದರಿಯನ್ನು ವಿಶ್ಲೇಷಿಸುವ ಮೂಲಕ ತಜ್ಞರು ಹೊಸ ಪ್ರಶ್ನೆ ಪತ್ರಿಕೆಯನ್ನು ಸಿದ್ಧಪಡಿಸುತ್ತಾರೆ. ಪ್ರಶ್ನೆ ಪತ್ರಿಕೆ ಸಿದ್ಧಪಡಿಸುವಾಗ ಪ್ರತಿಯೊಂದು ಸೂಕ್ಷ್ಮ ವ್ಯತ್ಯಾಸಕ್ಕೂ ಗಮನ ನೀಡಲಾಗುತ್ತದೆ. ಅಂದರೆ,

- ಯಾರು ಪರೀಕ್ಷೆ ತೆಗೆದುಕೊಳ್ಳುತ್ತಿದ್ದಾರೆ ಮತ್ತು ಯಾವ ಉದ್ದೇಶಕ್ಕೆ ತೆಗೆದುಕೊಳ್ಳುತ್ತಿದ್ದಾರೆ?
- ಯಾವ ಕೌಶಲ ಮತ್ತು /ಅಥವಾ ಜ್ಞಾನವನ್ನು ಮೌಲ್ಯಮಾಪನ ಮಾಡಬೇಕಾಗಿದೆ?
- ಅಭ್ಯರ್ಥಿಗಳು ಹೇಗೆ ತಮ್ಮ ಜ್ಞಾನವನ್ನು ಬಳಸಲು ದಕ್ಷರಾಗಿದ್ದಾರೆ?
- ಎಷ್ಟು ಸಮಯ ಪರೀಕ್ಷೆ ಇರಬೇಕು?
- ಈ ಪರೀಕ್ಷೆ ಎಷ್ಟು ಕಠಿಣವಾಗಿರಬೇಕು?

ಒಮ್ಮೆ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸಿದ ತರುವಾಯ, ಪರಾಮರ್ಶೆ ನಡೆಸಿ, ಸೂಕ್ತ ತಿದ್ದುಪಡಿಗಳನ್ನು ಮಾಡಲಾಗುತ್ತದೆ. ಆ ಬಳಿಕ ಈ ಪ್ರಶ್ನೆ ಪತ್ರಿಕೆ ವಿದ್ಯಾರ್ಥಿಗಳನ್ನು ತಲುಪುತ್ತದೆ. ಪ್ರತಿಯೊಂದು ಪ್ರಶ್ನೆ ಮತ್ತು ಪೂರ್ವ ನಿರ್ಧರಿತ ಉತ್ತರದ ಆಮೂಲಾಗ್ರ ಪರಾಮರ್ಶೆಯನ್ನೂ ನಡೆಸಲಾಗುತ್ತದೆ. ಈ ಪ್ರಶ್ನೆಪತ್ರಿಕೆಗಳು ಪ್ರತಿಯೊಬ್ಬ ವಿದ್ಯಾರ್ಥಿಯ ಪ್ರತಿಭೆಯ ನಿರ್ದಿಷ್ಟ ಮಟ್ಟವನ್ನು ಸೂಕ್ತ ಮಾದರಿಯಲ್ಲಿ ಮೌಲ್ಯಮಾಪನ ಮಾಡುವುದನ್ನು ಖಾತ್ರಿಪಡಿಸುತ್ತದೆ.

**ಸಮಯದ ಬಳಕೆ**

ಆನ್‌ಲೈನ್ ಪರೀಕ್ಷೆಗಳು ವ್ಯವಸ್ಥೆಯಲ್ಲಿನ ಸೋರಿಕೆಯ ಸಾಧ್ಯತೆಯನ್ನು ನಿರ್ಮೂಲನೆ ಮಾಡುತ್ತದೆ, ಪರೀಕ್ಷಾ ಪ್ರಾಧಿಕಾರ ಮತ್ತು ವಿದ್ಯಾರ್ಥಿಯ ಸಮಯ ಎರಡೂ ಉಳಿಯುತ್ತದೆ. ಮೌಲ್ಯಮಾಪನವು ಬಹುತೇಕ ಲೋಪಮುಕ್ತವಾಗಿರುತ್ತದೆ ಮತ್ತು ವಿದ್ಯಾರ್ಥಿಗಳು ಕೂಡ ಫಲಿತಾಂಶಕ್ಕಾಗಿ ದೀರ್ಘ ಕಾಲ ಕಾಯುವ ಅಗತ್ಯ ಇರುವುದಿಲ್ಲ.

**ಅಂತಾರಾಷ್ಟ್ರೀಯ ಗುಣಮಟ್ಟದ ಸ್ಥಾಪನೆ**

ಎನ್.ಟಿ.ಎ. ನಡೆಸುವ ಪ್ರತಿಯೊಂದು ಪರೀಕ್ಷೆಯೂ ಅಂತಾರಾಷ್ಟ್ರೀಯ ಗುಣಟ್ಟಕ್ಕೆ ಅನುಗುಣವಾಗಿರುತ್ತದೆ. ಪ್ರತಿಯೊಂದು ವಿಷಯದ ತಜ್ಞರೂ ಈ ಪ್ರಕ್ರಿಯೆಯಲ್ಲಿ ತೊಡಗಿಕೊಳ್ಳುತ್ತಾರೆ. ಇದರ ಜೊತೆಗೆ ಇತರ ದೇಶಗಳಲ್ಲಿ ನಡೆಸಲಾಗುವ ಸ್ಪರ್ಧಾತ್ಮಕ ಪರೀಕ್ಷೆಗಳ ಅಧ್ಯಯನದ ಜೊತೆಗೆ, ಅಲ್ಲಿನ ಅಂತಹ ಸಂಸ್ಥೆಗಳ ತಜ್ಞರೊಂದಿಗೆ ನಿಯಮಿತವಾಗಿ ಸಂವಹನ ನಡೆಸಲಾಗುತ್ತದೆ. ಅದರಂತೆ, ಪ್ರಶ್ನೆ ಪತ್ರಿಕೆಗಳ ಮಾದರಿಯನ್ನು ಕಾಲಕಾಲಕ್ಕೆ ಬದಲಾಯಿಸಲಾಗುತ್ತದೆ.

# ಅಭಿವೃದ್ಧಿಯ ಹೊಸ ಚಾಲಕ ಶಕ್ತಿಯಾಗಲಿರುವ ಡಿಎಫ್ಐ

ದೇಶದ ಮೂಲಸೌಕರ್ಯಗಳನ್ನು ಬಲಪಡಿಸಲು ವಿವಿಧ ನಿಧಿಯನ್ನು ರೂಪಿಸುವ ಮೂಲಕ ಅದನ್ನು ಬೆಂಬಲಿಸುವುದು ಸರ್ಕಾರದ ಗಮನವಾಗಿದೆ. ಸರ್ಕಾರ, ಅಭಿವೃದ್ಧಿ ಹಣಕಾಸು ಸಂಸ್ಥೆಯನ್ನು ಸ್ಥಾಪಿಸುವ ಯೋಜನೆಯೊಂದಿಗೆ, ದೇಶವನ್ನು ಸ್ವಾವಲಂಬಿಯನ್ನಾಗಿ ಮಾಡಲು ಆರ್ಥಿಕ ಬೆಳವಣಿಗೆಯು ಹೊಸ ವೇಗ ಪಡೆಯುತ್ತಿದೆ.



**ನಿರ್ಣಯ:** ಅಭಿವೃದ್ಧಿ ಹಣಕಾಸು ಸಂಸ್ಥೆ (ಡಿಎಫ್ಐ) ಸ್ಥಾಪಿಸಲು ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ, ಇದು ದೀರ್ಘಕಾಲೀನ ನಿಧಿಯ ಸಂಗ್ರಹಕ್ಕೆ ಸಹಾಯ ಮಾಡುವ ಸಂಸ್ಥೆ ಮತ್ತು ಸಾಂಸ್ಥಿಕ ವ್ಯವಸ್ಥೆಯನ್ನು ಹೊಂದಿರುತ್ತದೆ.

**ಪ್ರಯೋಜನಗಳು:**

- ಸರ್ಕಾರ ಆರಂಭದಲ್ಲಿ 20,000 ಕೋಟಿ ರೂ.ಗಳನ್ನು ಡಿಎಫ್.ಐ.ನಲ್ಲಿ ಪೂರಣ ಮಾಡಲಿದೆ ಮತ್ತು ಆರಂಭಿಕ ಅನುದಾನವಾಗಿ 5,000 ಕೋಟಿ ರೂ. ಒದಗಿಸಲಿದೆ. ಇದರಿಂದಾಗಿ ಮುಂದಿನ ಕೆಲವು ವರ್ಷಗಳಲ್ಲಿ ಡಿ.ಎಫ್.ಐ. 3 ಲಕ್ಷ ಕೋಟಿ ರೂ.ವರೆಗೆ ಹಣ ಎತ್ತುವಳಿ ಮಾಡುತ್ತದೆ ಎಂದು ಸರ್ಕಾರ ನಿರೀಕ್ಷಿಸಿದೆ.
- ಉದ್ದೇಶಿತ ಶಾಸನವು ಹಣಕಾಸು ಸಚಿವರು ಬಜೆಟ್ ನಲ್ಲಿ ಮಾಡಿದ ಪ್ರಕಟಣೆಯನ್ನು ಜಾರಿಗೆ ತರುತ್ತದೆ.
- ಡಿಎಫ್ಐ ಸ್ಥಾಪಿಸುವುದರಿಂದ ದೀರ್ಘಕಾಲೀನ ಮೂಲಸೌಕರ್ಯ ಯೋಜನೆಗಳಿಗೆ ದೀರ್ಘಕಾಲದ ಸಂಪನ್ಮೂಲಗಳನ್ನು ಒದಗಿಸಲು ಸಹಾಯ ಮಾಡುತ್ತದೆ, ಇದು ಹಲವಾರು ವರ್ಷಗಳ ನಂತರ ಲಾಭವನ್ನು ಗಳಿಸುತ್ತದೆ
- ಮೂಲಸೌಕರ್ಯ ಹಣಕಾಸು ಬಲಪಡಿಸುವಲ್ಲಿ ಡಿಎಫ್ಐ ಸಕ್ರಿಯ, ಪೂರೈಕೆದಾರ ಮತ್ತು ವೇಗವರ್ಧಕವಾಗಿ ಕಾರ್ಯನಿರ್ವಹಿಸುತ್ತದೆ. ಇದು ಬೇಡಿಕೆ ಪುನಶ್ಚೇತನ ಮತ್ತು ಹೊಸ ಉದ್ಯೋಗ ಸೃಷ್ಟಿಯಿಂದ ಆರ್ಥಿಕ ಬೆಳವಣಿಗೆಯನ್ನು ವೇಗಗೊಳಿಸುತ್ತದೆ

**ನಿರ್ಣಯ:** ಅರುಣಾಚಲ ಪ್ರದೇಶ ಮತ್ತು ಸಿಕ್ಕಿಂನಲ್ಲಿ ವಿದ್ಯುತ್ ಪ್ರಸರಣ ಮತ್ತು ವಿದ್ಯುತ್ ವಿತರಣೆಯನ್ನು ಬಲಪಡಿಸುವ ಪರಿಷ್ಕೃತ ವೆಚ್ಚ ಅಂದಾಜುಗಳಿಗೆ ಅನುಮೋದನೆ

**ಪ್ರಯೋಜನಗಳು:**

- ಈ ಯೋಜನೆಯ 9,129.32 ಕೋಟಿ ರೂ. ಅಂದಾಜು ವೆಚ್ಚವನ್ನು ಕೇಂದ್ರ ಸರ್ಕಾರ ಭರಿಸಲಿದೆ
- ಪವರ್ ಗ್ರಿಡ್ ಮೂಲಕ ಜಾರಿಗೊಳಿಸಲಾಗುತ್ತಿರುವ ಯೋಜನೆಯನ್ನು 2021ರ ಡಿಸೆಂಬರ್ ತಿಂಗಳೊಳಗೆ ಹಂತ ಹಂತವಾಗಿ ಕಾರ್ಯರೂಪಕ್ಕೆ ತರಲು ಉದ್ದೇಶಿಸಲಾಗಿದೆ.
- ಈ ಯೋಜನೆಯು ಈ ರಾಜ್ಯಗಳ ತಲಾ ವಿದ್ಯುತ್ ಬಳಕೆಯನ್ನು ಹೆಚ್ಚಿಸುತ್ತದೆ ಮತ್ತು ಒಟ್ಟು ಆರ್ಥಿಕ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ
- ಇದು ನುರಿತ ಮತ್ತು ಕೌಶಲ್ಯರಹಿತ ಸ್ಥಳೀಯ ಮಾನವಶಕ್ತಿಗೆ ಸಾಕಷ್ಟು ಉದ್ಯೋಗವನ್ನು ನೀಡುತ್ತದೆ.

**ನಿರ್ಣಯ:** ಭಾರತೀಯ ಕರಕುಶಲ ಮತ್ತು ಕೈಮಗ್ಗ ರಫ್ತು ನಿಗಮ ನಿಯಮಿತ ಮುಚ್ಚಲು ಅನುಮೋದನೆ

**ಪ್ರಯೋಜನಗಳು:**

- ಈ ಅನುಮೋದನೆಯು ರೋಗಗ್ರಸ್ಥ ಸಿ.ಪಿ.ಎಸ್.ಇ.ಯ ಸಂಬಳ / ವೇತನದ ಮೇಲಿನ ಪುನರಾವರ್ತಿತ ವೆಚ್ಚವನ್ನು ಕಡಿಮೆ ಮಾಡಿ ಸರ್ಕಾರದ ಬೊಕ್ಕಸಕ್ಕೆ ಲಾಭ ತರುತ್ತದೆ. ನಿಗಮವು 16-2015ರ ಆರ್ಥಿಕ ವರ್ಷದಿಂದ ನಿರಂತರವಾಗಿ ನಷ್ಟವನ್ನು ಅನುಭವಿಸುತ್ತಿದೆ ಮತ್ತು ಅದನ್ನು ನಡೆಸಲು ಆಗುತ್ತಿರುವ ವೆಚ್ಚವನ್ನು ಸರಿದೂಗಿಸುವಷ್ಟು ಆದಾಯವನ್ನೂ ಗಳಿಸುತ್ತಿಲ್ಲ. ಅದರ ಪುನಶ್ಚೇತನಕ್ಕೆ ಹೆಚ್ಚಿನ ಅವಕಾಶವೂ ಇಲ್ಲದಿರುವುದರಿಂದ ಕಂಪನಿಯ ಮುಚ್ಚುವಿಕೆ ಅಗತ್ಯವೆನಿಸಿದೆ.
- ನಿಗಮದಲ್ಲಿ 59 ಕಾಯಂ ಉದ್ಯೋಗಿಗಳು ಮತ್ತು ಆರು ಆಡಳಿತ ತರಬೇತಿ ನಿರತರು ಸೇವೆ ಸಲ್ಲಿಸುತ್ತಿದ್ದಾರೆ. ಎಲ್ಲ ಕಾಯಂ ಉದ್ಯೋಗಿಗಳು ಮತ್ತು ಆಡಳಿತ ತರಬೇತಿ ನಿರತರಿಗೆ ಸಾರ್ವಜನಿಕ ಉದ್ದಿಮೆಗಳ ಇಲಾಖೆ ರೂಪಿಸಿರುವ ನಿಯಮದ ರೀತ್ಯ ಸ್ವಯಂ ನಿವೃತ್ತಿ ಯೋಜನೆ (ವಿ.ಆರ್.ಎಸ್.)ಯ ಪ್ರಯೋಜನ ಪಡೆದುಕೊಳ್ಳುವಂತೆ ಒಂದು ಅವಕಾಶ ನೀಡಲಾಗಿದೆ. ■



# ಲಸಿಕೆಯಲ್ಲಿ ವಿಶ್ವದಲ್ಲೇ ಮುಂಚೂಣಿಯಲ್ಲಿ ಭಾರತ

**ಕೊರೊನಾ ವಿರುದ್ಧದ ನಿರ್ಣಾಯಕ ಸಮರದಲ್ಲಿ, ಭಾರತವು ಬಹಳ ಜಾಗರೂಕತೆಯಿಂದ ನಡೆದುಕೊಳ್ಳುತ್ತಿದೆ ಮತ್ತು ಆವೇಗವನ್ನು ಮುಂದುವರಿಸಿಕೊಂಡು ಹೋಗುತ್ತಿದೆ, ಅದೇ ವೇಳೆ ಜನರ ಜೀವನಕ್ಕೂ ತೊಂದರೆ ಆಗದಂತೆ ನೋಡಿಕೊಳ್ಳುತ್ತಿದೆ. ಏತನ್ಮಧ್ಯೆ, ಲಸಿಕೆ ಕಾರ್ಯಕ್ರಮಕ್ಕೆ ಮತ್ತಷ್ಟು ಗಮನ ಹರಿಸಿ, 45 ವರ್ಷಕ್ಕಿಂತ ಮೇಲ್ಪಟ್ಟ ದೇಶದ ಪ್ರತಿಯೊಬ್ಬ ನಾಗರಿಕರಿಗೆ ಲಸಿಕೆ ನೀಡಲು ನಿರ್ಧರಿಸಿದೆ. ಆರೋಗ್ಯ ಸೌಲಭ್ಯಗಳನ್ನು ಹೆಚ್ಚಿಸಲು ಸರ್ಕಾರವು ತೆಗೆದುಕೊಳ್ಳುತ್ತಿರುವ ಉಪಕ್ರಮಗಳನ್ನು ಜಾಗತಿಕವಾಗಿ ಗುರುತಿಸಲಾಗುತ್ತಿದೆ.**

ಭಾರತದಲ್ಲಿ ಪರೀಕ್ಷೆ, ಪತ್ತೆ ಮತ್ತು ಚಿಕಿತ್ಸೆ (ಟಿ - 3) ಅಳವಡಿಕೆಯೊಂದಿಗೆ ಕೊರೊನಾ ವಿರುದ್ಧ ಸಮರವಷ್ಟೇ ನಡೆಯುತ್ತಿಲ್ಲ, ಜೊತೆಗೆ ಲಸಿಕೆ ಹಾಕುವ ಅಭಿಯಾನವೂ ತೀವ್ರಗೊಂಡಿದೆ. ಈಗ ಸರ್ಕಾರ ಮಹತ್ವದ ನಿರ್ಧಾರ ಕೈಗೊಂಡಿದ್ದು, 45 ವರ್ಷ ಮೇಲ್ಪಟ್ಟ ಸಹ ಅಸ್ವಸ್ಥತೆ ಇಲ್ಲದವರನ್ನೂ ಲಸಿಕೆ ಅಭಿಯಾನದ ವ್ಯಾಪ್ತಿಗೆ ಸೇರಿಸಿದೆ. ಈವರೆಗೆ ಸಹ ಅಸ್ವಸ್ಥತೆ ಇರುವ 45 ವರ್ಷ ಮೇಲ್ಪಟ್ಟವರಿಗೆ ಲಸಿಕೆ ಪಡೆಯಲು ಅವಕಾಶ ನೀಡಲಾಗಿತ್ತು. 45 ರಿಂದ 59 ವರ್ಷ ವಯಸ್ಸಿನ ಫಲಾನುಭವಿಗಳು ಲಸಿಕೆ ಪಡೆಯಲು ನೋಂದಾಯಿತ ವೈದ್ಯರಿಂದ ಪಡೆದ ಪ್ರಮಾಣಪತ್ರ ಒದಗಿಸಬೇಕಾಗಿತ್ತು. ಮಿಗಿಲಾಗಿ ಸರ್ಕಾರ ದೇಶದಲ್ಲಿ ಲಸಿಕೆಯ ಕೊರತೆ ಇಲ್ಲ ಎಂದು ಭರವಸೆ ನೀಡಿದೆ - ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್ - ಎರಡೂ ಸಮಾನ ಪರಿಣಾಮಕಾರಿಯಾಗಿವೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಇದನ್ನು ಸಾಬೀತುಪಡಿಸಲು ಸ್ವತಃ ಕೋವ್ಯಾಕ್ಸಿನ್ ಲಸಿಕೆ ಪಡೆದಿದ್ದಾರೆ. ವಿಜ್ಞಾನಿಗಳು ಮತ್ತು ತಜ್ಞರ ಸಲಹೆಯ ಮೇರೆಗೆ ಸರ್ಕಾರ ಕೊರೊನಾ ವಿರುದ್ಧದ ತನ್ನ ಸಮರ ನೀತಿಯಲ್ಲಿ ಕೆಲವು ಮಾರ್ಪಾಡು ಮಾಡಿದೆ. ಈ ನಿಟ್ಟಿನಲ್ಲಿ, ಕೋವಿಶೀಲ್ಡ್ ಲಸಿಕೆಯ ಎರಡನೇ ಡೋಸ್ ಪಡೆಯುವ ಅವಧಿಯನ್ನು ಲಸಿಕೀಕರಣ ಕುರಿತ ರಾಷ್ಟ್ರೀಯ ತಾಂತ್ರಿಕ ಸಲಹಾ ಗುಂಪಿನ (ಎನ್.ಐ.ಟಿ.ಎ.ಜಿ.) ಮತ್ತು ಕೋವಿಡ್ 19- ಲಸಿಕೆ ನೀಡಿಕೆ ಕುರಿತ ರಾಷ್ಟ್ರೀಯ ಗುಂಪಿನ (ಎನ್.ಇ.ಜಿ.ವಿ.ಎ.ಸಿ.) ಸಲಹೆಯಂತೆ 6-4 ವಾರಗಳಿಂದ 8-4 ವಾರಕ್ಕೆ ಬದಲಾಯಿಸಿದೆ. ಸರ್ಕಾರದ

# ಲಸಿಕೆಯ ಹೊಸ ನಿಬಂಧನೆಗಳ ಬಗ್ಗೆ ನೀವು ತಿಳಿಯಲೇ ಬೇಕು

- ಕೋವಿಶೀಲ್ಡ್ ಲಸಿಕೆಯ ಎರಡು ಡೋಸ್ ಗಳ ನಡುವಿನ ಅಂತರವನ್ನು 6-4 ವಾರಗಳಿಂದ 8-4 ವಾರಗಳಿಗೆ ವಿಸ್ತರಿಸಲಾಗಿದೆ. ಆದರಿಂದ 8 ವಾರಗಳ ನಡುವೆ ಲಸಿಕೆಯ ತೆಗೆದುಕೊಂಡರೆ ಸುರಕ್ಷತೆ ಹೆಚ್ಚುತ್ತದೆ. ಆದರೆ ಅದು 8 ವಾರದ ನಂತರ ಅಲ್ಲ.
- ಎರಡನೇ ಡೋಸ್ ಲಸಿಕೆಗೆ ಸಮಯ ನಿಗದಿ ಮಾಡಿಕೊಂಡಿದ್ದಾಗ್ಯೂ, ವಿಸ್ತರಿತ ಅವಧಿಯಲ್ಲಿ ಮತ್ತೆ ದಿನಾಂಕ ಆಯ್ಕೆ ಮಾಡಬಹುದು. www.cowin.gov.in ಗೆ ಭೇಟಿ ನೀಡಿ ಸಮಯ ನಿಗದಿ ಮಾಡಿಕೊಳ್ಳಬಹುದು.
- ಈಗ 45 ವರ್ಷ ಮತ್ತು ಮೇಲ್ಪಟ್ಟ ಎಲ್ಲರೂ ಕೊರೊನಾ ಲಸಿಕೆ ಪಡೆಯಲು ಅರ್ಹರಾಗಿದ್ದಾರೆ.
- 45+ ವರ್ಷದ ಪ್ರವರ್ಗಕ್ಕೆ ನಿಗದಿ ಮಾಡಿರುವ ದಿನಾಂಕ 1ನೇ ಜನವರಿ 1977ಕ್ಕಿಂತ ಹಿಂದೆ ಹುಟ್ಟಿದವರಾಗಿರಬೇಕು.
- ನೋಂದಣಿ ಮತ್ತು ಸಮಯಾವಕಾಶ ನಿಗದಿಗೆ ಕೋ-ವಿನ್ ಆಪ್ ಈಗಾಗಲೇ ಆರಂಭವಾಗಿದೆ. 2021ರ ಏಪ್ರಿಲ್ 1ರಿಂದ ಸ್ಥಳದಲ್ಲೇ ನೋಂದಣಿಯನ್ನು ಅಂಗೀಕರಿಸಲಾಗುತ್ತಿದೆ.
- ಯಾವುದೇ ಆಸ್ಪತ್ರೆ ಲಸಿಕೆ ನಿಬಂಧನೆಗಳನ್ನು ಅನುಸರಿಸದಿದ್ದರೆ, ಪ್ರಮಾಣಪತ್ರವನ್ನು ನಿರಾಕರಿಸಿದರೆ ಮತ್ತು ಮಾರ್ಗಸೂಚಿಗಳನ್ನು ಉಲ್ಲಂಘಿಸಿದರೆ, ಉಚಿತ ಕರೆ ಸಂಖ್ಯೆ 1075 ಕ್ಕೆ ದೂರು ನೀಡಬಹುದು.
- ದೇಶದಲ್ಲಿ ಲಸಿಕೆಯ ಕೊರತೆ ಇಲ್ಲ ಮತ್ತು ಜನರು ಅನಗತ್ಯವಾಗಿ ಆತಂಕಕ್ಕೆ ಈಡಾಗುವ ಅಗತ್ಯವಿಲ್ಲ.

### ಕೊರೊನಾ ಪ್ರಕರಣಗಳು ಮತ್ತೆ ಏರಿಕೆಯಾಗುತ್ತಿರುವ ಕಾರಣ ಮುನ್ನೆಚ್ಚರಿಕೆ ಈಗಲೂ ಅತಿ ಮಹತ್ವದ್ದಾಗಿದೆ.

ಕರೋನಾ ಪ್ರಕರಣಗಳಲ್ಲಿ ಹೆಚ್ಚಳವಾಗುತ್ತಿದೆ. ಅಂತಹ ಪರಿಸ್ಥಿತಿಯಲ್ಲಿ, ಮುನ್ನೆಚ್ಚರಿಕೆ ಬಹಳ ಮುಖ್ಯವಾಗುತ್ತದೆ. ಮಹಾರಾಷ್ಟ್ರದ ಕೆಲವು ಭಾಗಗಳಲ್ಲಿ ಕರೋನಾ ಪ್ರಕರಣಗಳಲ್ಲಿ ತೀವ್ರ ಏರಿಕೆ ಕಂಡುಬಂದಿದೆ. ದೇಶದಲ್ಲಿ ಏಪ್ರಿಲ್ 4 ರಂದು 1,03,794 ಹೊಸ ಪ್ರಕರಣಗಳು ದಾಖಲಾಗಿವೆ ಮತ್ತು ಈ ಪೈಕಿ 54,074 ಪ್ರಕರಣಗಳು ಮಹಾರಾಷ್ಟ್ರವೊಂದರಲ್ಲೇ ದಾಖಲಾಗಿವೆ. ಮಹಾರಾಷ್ಟ್ರದ ಎಲ್ಲಾ ಜಿಲ್ಲೆಗಳಲ್ಲಿ ರಾತ್ರಿ ಕರ್ಫ್ಯೂ ವಿಧಿಸಲಾಗಿದೆ.

**7,41,830**
ಒಟ್ಟು ಸೋಂಕಿತ ಸಕ್ರಿಯ ರೋಗಿಗಳು



| 1,16,82,136 | 1,65,101 | 92.80% |
|---|---|---|
| ಗುಣಮುಖರಾದ ರೋಗಿಗಳು | ಸಾವು | ಚೇತರಿಕೆ ದರ |

**ಮರಣ ದರ: 1.31%**

2021 ಏಪ್ರಿಲ್ 4ರವರೆಗಿನ ಅಂಕಿ-ಅಂಶ

**7,91,05,163**
ಏಪ್ರಿಲ್ 5 ಮಧ್ಯಾಹ್ನ 1ರವರೆಗೆ ಲಸಿಕೆ ಪಡೆದವರು.



**ಲಸಿಕೆ ಮೈತ್ರಿ:** ಭಾರತ ಮಾರ್ಚ್ 29ರವರೆಗೆ 6 ಕೋಟಿ 45 ಲಕ್ಷ 26 ಸಾವಿರ ಡೋಸ್ ಕೊರೊನಾ ಲಸಿಕೆಯನ್ನು 84 ರಾಷ್ಟ್ರಗಳಿಗೆ ಕಳುಹಿಸಿದೆ. ಈ ಪೈಕಿ 981 ಕೋಟಿ 5 ಲಕ್ಷ ಡೋಸ್ ಗಳನ್ನು ಉಡುಗೊರೆಯಾಗಿ ನೀಡಲಾಗಿದೆ. ವಿಶ್ವಸಂಸ್ಥೆಯ ಶಾಂತಿ ಪಾಲನಾ ಪಡೆಗಳಿಗೆ ಎರಡು ಲಕ್ಷ ಡೋಸ್ ಲಸಿಕೆಯ ಕೊಡುಗೆ ನೀಡಲಾಗಿದೆ.

### ಗಡುವಿಗೆ ಮುನ್ನ ಅಣಿಯಾದ ಆರೋಗ್ಯ – ಕ್ಷೇಮ ಕೇಂದ್ರಗಳು

ಇದೇ ಮೊದಲ ಬಾರಿಗೆ ಆರೋಗ್ಯವು ಭಾರತ ಸರ್ಕಾರದ ಆದ್ಯತೆಯಾಗಿದೆ. ಇದರ ಪರಿಣಾಮವಾಗಿ 70,000 ಆಯುಷ್ಮಾನ್ ಭಾರತ ಆರೋಗ್ಯ ಕ್ಷೇಮ ಕೇಂದ್ರಗಳು (ಎ.ಬಿ.ಎಚ್.ಡಬ್ಲ್ಯು.ಸಿ.ಗಳು) 2021ರ ಮಾರ್ಚ್ 31ರ ಗಡುವಿಗೆ 10 ದಿನಗಳ ಮೊದಲೇ ಕಾರ್ಯಾರಂಭ ಮಾಡಿವೆ. ಸುಮಾರು 70,015 ಎ.ಬಿ. ಎಚ್. ಡಬ್ಲ್ಯು.ಸಿ.ಗಳು 2021ರ ಮಾರ್ಚ್ 21ರಿಂದ ಕಾರ್ಯಾಚರಣೆ ಮಾಡಿವೆ. ಅವು 41.35 ಕೋಟಿ ಜನರಿಗೆ ಪ್ರಯೋಜನಕಾರಿಯಾಗಿದೆ.

### ಡಿಜಿಟಲ್ ಆರೋಗ್ಯ ಸೇವೆಯಲ್ಲಿ ದೇಶದಲ್ಲಿ ದೊಡ್ಡ ಸಾಧನೆ

ಕೊರೊನಾ ಸಾಂಕ್ರಾಮಿಕ ದೇಶವನ್ನು ಅಪ್ಪಳಿಸುವ ಕೆಲವೇ ತಿಂಗಳುಗಳ ಮೊದಲು ಯೋಜನೆ ಆರಂಭಿಸಲಾಗಿತ್ತು, ಟೆಲಿ ಮೆಡಿಸಿನ್ ಸೇವೆ ಇ- ಸಂಜೀವಿನಿ 30 ಲಕ್ಷಕ್ಕೂ ಅಧಿಕ ಸಮಾಲೋಚನೆ -ಸಲಹೆ ನೀಡಿದೆ. ಈ ಸೇವೆ 31 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಕಾರ್ಯಾಚರಣೆಯಲ್ಲಿದ್ದು, ಸುಮಾರು 35,000 ರೋಗಿಗಳು ಇ-ಸಂಜೀವಿನಿಯ ಸೇವೆಯನ್ನು ನಿತ್ಯ ಪಡೆಯುತ್ತಿದ್ದಾರೆ. 21 ಲಕ್ಷ ರೋಗಿಗಳಿಗೆ ಇ ಸಂಜೀವಿನಿ ಓಪಿಡಿಯಡಿ ಸೇವೆ ಒದಗಿಸಲಾಗಿದೆ.

ಉಪಕ್ರಮದಿಂದಾಗಿ, ಸಾಂಕ್ರಾಮಿಕವಲ್ಲದ ಕಾಯಿಲೆಗಳಲ್ಲಿ ಅವಧಿ ಪೂರ್ವ ಸಾವಿನ ಪ್ರಮಾಣವನ್ನು ಗಣನೀಯವಾಗಿ ಕಡಿಮೆ ಮಾಡಲು ದೇಶಕ್ಕೆ ಸಾಧ್ಯವಾಗಿದೆ. ಸಾಂಕ್ರಾಮಿಕವಲ್ಲದ ಕಾಯಿಲೆಗಳನ್ನು ತಡೆಗಟ್ಟುವಲ್ಲಿ ಮತ್ತು ಆರೋಗ್ಯ ವ್ಯವಸ್ಥೆಯನ್ನು ವೃದ್ಧಿಸುವಲ್ಲಿ ಕೈಗೊಂಡ ಉಪಕ್ರಮದಲ್ಲಿ ದೇಶವು ಜಗತ್ತನ್ನು ಮುನ್ನಡೆಯಲ್ಲಿದ್ದು, ಈ ಸಾಧನೆಗಾಗಿ ವಿಶ್ವಸಂಸ್ಥೆಯ ತರಬೇತಿ ಮತ್ತು ಸಂಶೋಧನಾ ಸಂಸ್ಥೆ (ಯು.ಎನ್.ಐ.ಟಿ.ಎ.ಆರ್) ಭಾರತವನ್ನು ಶ್ಲಾಘಿಸಿದೆ. ■

# ಅಂಚೆ ಬ್ಯಾಂಕ್

## ನಿಮ್ಮ ಬ್ಯಾಂಕ್, ನಿಮ್ಮ ಮನೆ ಬಾಗಿಲಲ್ಲೇ...



**ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಆರ್ಥಿಕತೆಗೆ ಚೈತನ್ಯ ನೀಡುವ ಜಿಎಸ್‌ಟಿ, ಆಧಾರ್ ಮತ್ತು ಜನ್ ಧನ್ ಖಾತೆಯಂತಹ ಸರಣಿ ಕ್ರಮಗಳ ಬಳಿಕ ಭಾರತೀಯ ಅಂಚೆ ಪಾವತಿ ಬ್ಯಾಂಕ್ (ಐಪಿಪಿಬಿ)ಗೆ 2018ರ ಸೆಪ್ಟೆಂಬರ್ 1ರಂದು ತಮ್ಮ ಒಂದು ಖಾತೆ ತೆರೆಯುವ ಮೂಲಕ ಚಾಲನೆ ನೀಡಿದರು. 1.55 ಲಕ್ಷ ಅಂಚೆ ಕಚೇರಿಗಳು ಮತ್ತು 3 ಲಕ್ಷ ಅಂಚೆಯವರ (ಪೋಸ್ಟ್ ಮ್ಯಾನ್) ವ್ಯಾಪಕ ಜಾಲವನ್ನು ಬಳಸಿಕೊಂಡು ಗ್ರಾಮೀಣ ಭಾಗದ ಜನರಿಗೆ ಬ್ಯಾಂಕಿಂಗ್ ಮತ್ತು ಹಣಕಾಸು ಸೇವೆಗಳನ್ನು ಒದಗಿಸುವುದು ಇದರ ಉದ್ದೇಶವಾಗಿದೆ.**

ತಮಿಳುನಾಡಿನ ಮುಗಯೂರ್ (ಥೋಪು) ಗ್ರಾಮದಲ್ಲಿ ವಾಸಿಸುವ ಹಿರಿಯ ನಾಗರಿಕ ಸುಂದರಮ್, ಅವರು ದೈಹಿಕವಾಗಿ ಸದೃಢರಾಗಿಲ್ಲ. ಅವರ ಗ್ರಾಮಕ್ಕೆ ಹತ್ತಿರದಲ್ಲಿ ಸರ್ಕಾರಿ ಬ್ಯಾಂಕ್ ಶಾಖೆ ಇರುವುದು 10 ಕಿ.ಮೀ. ದೂರದಲ್ಲಿ. ಹೀಗಾಗಿ ಅವರಿಗೆ ತಮ್ಮ ಬ್ಯಾಂಕ್ ಗೆ ಭೇಟಿ ನೀಡಿ ಹಣ ಪಡೆಯುವುದು ಸವಾಲಾಗಿತ್ತು. ಅವರ ಸಮಸ್ಯೆಯನ್ನು ತಿಳಿದ ಪೋಸ್ಟ್ ಮಾಸ್ಟರ್ ಅರುಣ್ ಸೆಲ್ವ ಕುಮಾರ್ ಅವರು ಅಂಚೆ ಕಚೇರಿಯಲ್ಲಿರುವ ಆಧಾರ್ ಸಂಪರ್ಕಿತ ಪಾವತಿ ವ್ಯವಸ್ಥೆ (ಎ.ಇ.ಪಿ.ಎಸ್.) ಸೇವೆಯ ಬಗ್ಗೆ ತಿಳಿಸಿದರು. ಈಗ ಸುಂದರಮ್ ತಮ್ಮ ಖಾತೆಯಿಂದ ಹಣ ಹಿಂಪಡೆಯಲು ದೂರದವರೆಗೆ ಪ್ರಯಾಣ ಮಾಡುವ ಅಥವಾ ಬ್ಯಾಂಕ್ ಸಿಬ್ಬಂದಿಗೆ ಹಣ ಹಿಂಪಡೆಯುವ ಚೀಟಿ ಭರ್ತಿ ಮಾಡಿಕೊಡುವಂತೆ ಕೋರುವ ಅಗತ್ಯವಿಲ್ಲ. ಈಗ ಅವರು ತಮ್ಮ ಮನೆ ಬಳಿಯೇ ಬರುವ ಅಂಚೆಯವರ ಬಳಿ ಲಭ್ಯವಿರುವ ಬಯೋಮೆಟ್ರಿಕ್ ಸಾಧನದಲ್ಲಿ ತಮ್ಮ ಹೆಬ್ಬೆಟ್ಟಿನ ಗುರುತು ಒತ್ತಿ ಸುಲಭವಾಗಿ ಹಣವನ್ನು ಪಡೆಯಬಹುದಾಗಿದೆ. ಇಂದು, ದೇಶದ ಕೋಟಿ ಜನರು ತಮ್ಮ ಹೆಬ್ಬೆಟ್ಟಿನ ಗುರುತುಗಳನ್ನು ಬಳಸುವುದರ ಮೂಲಕ ತಮ್ಮ ಹಣವನ್ನು ಸುಲಭವಾಗಿ ಹಿಂಪಡೆಯಲು ಸಾಧ್ಯವಾಗಿದ್ದರೆ, ಅದಕ್ಕೆ ಕಾರಣ ಭಾರತೀಯ ಅಂಚೆ ಪಾವತಿ ಬ್ಯಾಂಕ್ ಸೇವೆ. ಸಂವಹನ ಸಚಿವಾಲಯದ ಅಡಿಯಲ್ಲಿ ಪ್ರಾಯೋಗಿಕ ಯೋಜನೆಯಾಗಿ ರಾಂಚಿ ಮತ್ತು ರಾಯ್ಪುರದಲ್ಲಿ ಏಕಕಾಲದಲ್ಲಿ ಪ್ರಾರಂಭಿಸಲಾದ ಈ ಸೇವೆ ಈಗ ಪ್ರತಿಯೊಂದು ಜಿಲ್ಲೆಯಲ್ಲೂ ಲಭ್ಯವಿದೆ.

### ಮನೆ ಬಾಗಿಲಲ್ಲೇ ಬ್ಯಾಂಕ್

ನೀವು ಖಾತೆ ತೆರೆಯುವುದಿದ್ದರೆ ಅಥವಾ ಯಾವುದೇ ಬ್ಯಾಂಕಿಂಗ್ ಸೌಲಭ್ಯ ಪಡೆಯಬೇಕಿದ್ದರೆ, ಅಂಚೆಯಾತ ನಿಮಗೆ ಕೇವಲ ಒಂದು ಎಸ್.ಎಂ.ಎಸ್. ದೂರದಲ್ಲಿರುತ್ತಾರೆ. ನೀವು ಅವರಿಗೆ ಒಂದು ಸಂದೇಶ ಕಳುಹಿಸಬೇಕು. ಅಷ್ಟೇ. ತಮ್ಮ ಬ್ಯಾಂಕ್ ಗಳಿಗೆ ನಾನಾ ಕಾರಣಗಳಿಂದ ಹೋಗಲು ಆಗದವರಿಗೆ ಭಾರತೀಯ ಅಂಚೆಯ ಪೇಮೆಂಟ್ ಬ್ಯಾಂಕ್ (ಐಪಿಪಿಬಿ) ಅತ್ಯಂತ ಉಪಯುಕ್ತ ಎಂಬುದು ಸಾಬೀತಾಗಿದೆ. ಶ್ರೀಸಾಮಾನ್ಯರಿಗೆ, ಐಪಿಪಿಬಿ ಸುಲಭವಾಗಿ ದೊರಕುವ, ದುಬಾರಿಯಲ್ಲದ ಮತ್ತು ವಿಶ್ವಾಸಾರ್ಹ ಬ್ಯಾಂಕ್ ಆಗಿ ಹೊರಹೊಮ್ಮಿದೆ. ಪ್ರಸ್ತುತ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 1,36,078 ಅಂಚೆ ಕೇಂದ್ರಗಳು ಕಾರ್ಯಾಚರಣೆಯಲ್ಲಿವೆ ಮತ್ತು 25,259 ಕೌಂಟರ್ ಗಳನ್ನು ಬ್ಯಾಂಕಿಂಗ್ ಸೇವೆಗೆ ತೆರೆಯಲಾಗಿದೆ. ಮಿಗಿಲಾಗಿ, 2.90 ಲಕ್ಷ ಅಂಚೆಯವರು ಮೊಬೈಲ್ ಫೋನ್ ಮತ್ತು ಬಯೋ ಮೆಟ್ರಿಕ್ ಸಾಧನಗಳ ಮೂಲಕ, ದೇಶಾದ್ಯಂತ ಬ್ಯಾಂಕಿಂಗ್ ಸೇವೆಯನ್ನು ಜನರ ಮನೆಯ ಬಾಗಿಲಲ್ಲೇ ಕಲ್ಪಿಸುತ್ತಿದ್ದಾರೆ.

### ಕೊರೊನಾ ಸಾಂಕ್ರಾಮಿಕದ ವೇಳೆ ಅಂಚೆ ಬ್ಯಾಂಕಿಂಗ್ ಸೇವೆಯ ಪಾತ್ರ..

- ಲಾಕ್ ಡೌನ್ ಮತ್ತು ಮೊದಲ ಹಂತದ (ಅನ್ ಲಾಕ್) ತೆರವು ಸಮಯದಲ್ಲಿ ಪ್ರಮುಖ ಬ್ಯಾಂಕಿಂಗ್ ಸೇವೆಗಳು (ಸಿಬಿಎಸ್): ಕೌಂಟರ್ ಗಳಲ್ಲಿ 48.82 ಕೋಟಿ ರೂ. ವಹಿವಾಟು, ಅಂಚೆ ಕಚೇರಿ ಉಳಿತಾಯ ಬ್ಯಾಂಕ್ (ಪಿಒಎಸ್.ಬಿ.) ಯಲ್ಲಿ ಒಟ್ಟು 9.86 ಲಕ್ಷ ಕೋಟಿ ರೂ. ವಹಿವಾಟು.
- ಸುಮಾರು 1.06 ಕೋಟಿ ವಹಿವಾಟಿನ ಮೂಲಕ 3,550 ಕೋಟಿ ರೂ. ಹಣವನ್ನು ಪಿಒಎಸ್.ಬಿ. ಎಟಿಎಂಗಳಿಂದ ಹಿಂಪಡೆಯಲಾಗಿದೆ
- 2019ರ ಸೆಪ್ಟೆಂಬರ್ 1ರಿಂದ 2020ರ ಮಾರ್ಚ್ 24ರವರೆಗೆ ಕರೋನಾ ದೇಶವನ್ನು ಕಾಡಿದ ಸಮಯದಲ್ಲಿ, ಐಪಿಪಿಬಿ 25.7 ಲಕ್ಷ ಎಇಪಿಎಸ್ ಅಡಿಯಲ್ಲಿ 848 ಕೋಟಿ ರೂ.ಗೂ ಹೆಚ್ಚು ಹಣ ವಿತರಿಸಿದೆ.

### ಇದೇ ಮೊದಲ ಬಾರಿಗೆ ಎರಡು ಸೇವೆಗಳ ಆರಂಭ...

- ಪೋಸ್ಟ್ ಮ್ಯಾನ್ ಮತ್ತು ಗ್ರಾಮೀಣ ಅಂಚೆ ಕಚೇರಿಗಳ ಮೂಲಕ ಪ್ರತಿಯೊಬ್ಬರ ಮನೆಯ ಬಾಗಿಲಲ್ಲೇ ಬ್ಯಾಂಕಿಂಗ್ ಸೇವೆ ಒದಗಿಸಲಾಗುತ್ತಿದೆ.
- ನಗದು ಮತ್ತು ಡಿಜಿಟಲ್ ಬ್ಯಾಂಕಿಂಗ್ ಗೆ ಸಂಬಂಧಿಸಿದ ಹೊಸ ಬದಲಾವಣೆಗಳ ಬಗ್ಗೆ ಅರಿವಿಲ್ಲದವರಿಗೆ ಪೂರಕ ಸೇವೆಗಳನ್ನು ಒದಗಿಸಲಾಗುತ್ತಿದೆ

*ಭಾರತೀಯ ಅಂಚೆ ಪಾವತಿ ಬ್ಯಾಂಕ್ ದೇಶದಾದ್ಯಂತ ಬಡವರಿಗೆ ಮತ್ತು ದೂರದ ಪ್ರದೇಶದಲ್ಲಿರುವವರಿಗೆ ಮನೆಯ ಬಾಗಿಲಲ್ಲೇ ಬ್ಯಾಂಕಿಂಗ್ ಸೇವೆ ಲಭ್ಯವಾಗುವಂತೆ ಅನುಕೂಲ ಕಲ್ಪಿಸಿದೆ. ಈಗ, ನಾವು ಹಳ್ಳಿಯ ಬಡವರಿಗೆ ಮತ್ತು ಮನೆ ಬಾಗಿಲಲ್ಲೇ ಬ್ಯಾಂಕುಗಳ ಸಂಪರ್ಕವನ್ನು ಖಾತ್ರಿಪಡಿಸುತ್ತಿದ್ದೇವೆ. "ನಿಮ್ಮ ಮನೆ ಬಾಗಿಲಲ್ಲೇ ನಿಮ್ಮ ಬ್ಯಾಂಕ್" ನಮ್ಮ ಬದ್ಧತೆಯಾಗಿದೆ.*

**ಪ್ರಧಾನ ಮಂತ್ರಿ ನರೇಂದ್ರ ಮೋದಿ**



**ಅಂಚೆ ಬ್ಯಾಂಕ್ ಇತಿಹಾಸ**

ದೇಶದ ಮೊದಲ ಸರ್ಕಾರಿ ಉಳಿತಾಯ ಬ್ಯಾಂಕ್ ಕೊಲ್ಕತ್ತಾದಲ್ಲಿ ಅಸ್ತಿತ್ವಕ್ಕೆ ಬಂದಿದ್ದು 1833ರಲ್ಲಿ. ತದನಂತರ ಹಲವು ಸರ್ಕಾರಿ ಬ್ಯಾಂಕ್ ಗಳು ಅಂದರೆ ಜಿಲ್ಲಾ ಬ್ಯಾಂಕ್, ಪ್ರೆಸಿಡೆನ್ಸಿ ಬ್ಯಾಂಕ್, ರೈಲ್ವೆ ಬ್ಯಾಂಕ್ ಮತ್ತು ರೆಜಿಮೆಂಟಲ್ ಬ್ಯಾಂಕ್ ತೆರೆಯಲಾಯಿತು. ಬಳಿಕ, ಸರ್ಕಾರಿ ಉಳಿತಾಯ ಬ್ಯಾಂಕ್ ಕಾಯ್ದೆಯನ್ನು 1873 ರಲ್ಲಿ ಜಾರಿಗೆ ತಂದು, ಈ ಬ್ಯಾಂಕುಗಳಿಗೆ ಕಾನೂನು ಚೌಕಟ್ಟನ್ನು ರೂಪಿಸಲಾಯಿತು. 1947ರಲ್ಲಿ ಸ್ವಾತಂತ್ರ್ಯಾನಂತರ, ಜನರ ಉಳಿತಾಯವನ್ನು ಉತ್ತಮ ಬಳಕೆಗೆ ತರಬೇಕೆಂದು ಅಭಿಪ್ರಾಯಪಡಲಾಯಿತು ಹೀಗಾಗಿ 1948 ರಲ್ಲಿ ಎನ್.ಎಸ್,ಐ, ಎಂದು ಕರೆಯಲಾದ ರಾಷ್ಟ್ರೀಯ ಉಳಿತಾಯ ಸಂಸ್ಥೆ (ಎನ್.ಎಸ್.ಒ) ಜನ್ಮ ತಳೆಯಿತು. ಮೂರು ದಶಕಗಳ ಬಳಿಕ, ಅಂಚೆ ಬ್ಯಾಂಕ್ ಗಳ ಕಲ್ಪನೆ ಮೂಡಿತು, ಇದರಿಂದ ಬ್ಯಾಂಕಿಂಗ್ ಸೌಲಭ್ಯ ಲಭ್ಯವಿಲ್ಲದ ಗ್ರಾಮಗಳಲ್ಲಿ ಮತ್ತು ದೂರದ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಬ್ಯಾಂಕಿಂಗ್ ಸೇವೆ ಒದಗಿಸಬಹುದು ಎಂಬುದಾಗಿತ್ತು. 1982ರ ಏಪ್ರಿಲ್ 1ರಿಂದ ಅಂಚೆ ಕಚೇರಿ ಉಳಿತಾಯ ಬ್ಯಾಂಕ್ ಕಾರ್ಯಾರಂಭ ಮಾಡಿತು, ತರುವಾಯ ಮೇಲಿನ ಎಲ್ಲ ಬ್ಯಾಂಕ್ ಗಳನ್ನು ಅಂಚೆ ಕಚೇರಿ ಉಳಿತಾಯ ಬ್ಯಾಂಕ್ ನಲ್ಲಿ ಹಂತಹಂತವಾಗಿ ವಿಲೀನ ಮಾಡಲಾಯಿತು. ಇದು ಭಾರತದಲ್ಲಿ ಹಂತ ಹಂತವಾಗಿ ಅಂಚೆ ಕಚೇರಿ ಬ್ಯಾಂಕಿಂಗ್ ನ ಆರಂಭವಾಗಿತ್ತು ಮತ್ತು ಭಾರತದ ಅಂಚೆ ಪಾವತಿ ಬ್ಯಾಂಕ್ ಅನ್ನು ಮತ್ತೆ ಹೊಸ ಎತ್ತರಕ್ಕೆ ತೆಗೆದುಕೊಂಡು ಹೋಗಲಾಯಿತು.

**ನೀವು ಪಡೆಯಬಹುದಾದ ಸೌಲಭ್ಯಗಳು**

ನೀವು ಕೂಡ ಭಾರತೀ ಅಂಚೆ ಕಚೇರಿ ಪಾವತಿ ಬ್ಯಾಂಕ್ ಮೊಬೈಲ್ ಆಪ್ ಮೂಲಕ ಖಾತೆ ತೆರೆಯಬಹುದು, ಇದರ ಜೊತೆಗೆ ಹತ್ತಿರದ ಅಂಚೆ ಕಚೇರಿಗೆ ತೆರಳಿ ಆತ/ಆಕೆ ಖಾತೆ ತೆರೆಯಬಹುದು. ■

## ಪ್ರಗತಿಯಲ್ಲಿರುವ ಯೋಜನೆಗಳು

- **ಅಂಚೆ ಕಚೇರಿ ಉಳಿತಾಯ ಖಾತೆ:** ನೀವು ಅಂಚೆ ಕಚೇರಿಯಲ್ಲಿ ಕೇವಲ 500 ರೂ. ಗಳಲ್ಲಿ ಖಾತೆ ತೆರೆಯಬಹುದು.
- **5 - ವರ್ಷಗಳ ಅಂಚೆ ಕಚೇರಿ ಸಂಚಿತ ಠೇವಣಿ (ಆರ್.ಡಿ.) ಯೋಜನೆ:** ಅಂಚೆ ಕಚೇರಿಯು 5 ವರ್ಷಗಳ ಮೆಚ್ಯೂರಿಟಿ ಅವಧಿಯ ಕನಿಷ್ಠ 100 ರೂ.ಗಳ ಆರ್.ಡಿ. ಸೌಲಭ್ಯ ಒದಗಿಸುತ್ತದೆ.
- **ಅಂಚೆ ಕಚೇರಿ ಅವಧಿ ಠೇವಣಿ (ಟಿಡಿ) ಯೋಜನೆ:** ಅವಧಿ ಠೇವಣಿ ಖಾತೆಯನ್ನು ಅಂಚೆ ಕಚೇರಿಯಲ್ಲಿ ಕನಿಷ್ಠ 1000 ರೂ. ನೊಂದಿಗೆ ತೆರೆಯಬಹುದು. 80 ಸಿ ಅಡಿಯಲ್ಲಿ 5 ವರ್ಷ ಅವಧಿಗೆ ಮಾಡಿದ ಹೂಡಿಕೆಗೆ ತೆರಿಗೆ ವಿನಾಯತಿಯನ್ನೂ ಪಡೆಯಬಹುದು.
- **ರಾಷ್ಟ್ರೀಯ ಉಳಿತಾಯ ಮಾಸಿಕ ಆದಾಯ ಯೋಜನೆ (ಎಂ.ಐ.ಎಸ್.):** ಪ್ರತಿ ತಿಂಗಳೂ 1,000 ರೂ. ಅಥವಾ ಅದರ ಗುಣಕವನ್ನು ಠೇವಣಿ ಇಡಬಹುದು. ಅಂಚೆ ಕಚೇರಿಯಲ್ಲಿ ಮಾಸಿಕ ಆದಾಯ ಯೋಜನೆ ಅಡಿಯಲ್ಲಿ ನೀಡಲಾಗುವ ಬಡ್ಡಿ ದರ ವಾರ್ಷಿಕ ಶೇ.6.6.
- **ಹಿರಿಯ ನಾಗರಿಕರ ಉಳಿತಾಯ ಯೋಜನೆ:** 60 ವರ್ಷ ಮೇಲ್ಪಟ್ಟ ಯಾವುದೇ ವ್ಯಕ್ತಿ ಅಥವಾ 55 ರಿಂದ 60 ವರ್ಷದೊಳಗಿನ ನಿವೃತ್ತ ಸರ್ಕಾರಿ ನೌಕರರು ಖಾತೆ ತೆರೆಯಬಹುದು. ಇವರಿಗೆ ನೀಡಲಾಗುವ ಬಡ್ಡಿ ದರ ಶೇ.7.4.
- **ಸಾರ್ವಜನಿಕ ಭವಿಷ್ಯ ನಿಧಿ:** ಯಾರೇ ಆದರೂ ಕನಿಷ್ಠ 500 ರೂ. ನಿಂದ 1,50,000ರೂ.ವರೆಗೆ ಒಂದು ಹಣಕಾಸು ವರ್ಷದಲ್ಲಿ ಠೇವಣಿ ಇಡಬಹುದು. ಸೆಕ್ಷನ್ 80 ಸಿ ಅಡಿಯಲ್ಲಿ ತೆರಿಗೆ ವಿನಾಯಿತಿ ಇರುತ್ತದೆ.
- **ಸುಕನ್ಯಾ ಸಮೃದ್ಧಿ ಯೋಜನೆ:** ಯಾರೇ ಆದರೂ ಕನಿಷ್ಠ 250 ರೂ. ನಿಂದ 1,50,000 ರೂ. ವರೆಗೆ ಒಂದು ಹಣಕಾಸು ವರ್ಷದಲ್ಲಿ ಠೇವಣಿ ಇಡಬಹುದು. ಆದಾಯ ತೆರಿಗೆ ವಿನಾಯಿತಿಯನ್ನೂ ಪಡೆಯಬಹುದು.
- **ರಾಷ್ಟ್ರೀಯ ಉಳಿತಾಯ ಪ್ರಮಾಣಪತ್ರ:** ಗರಿಷ್ಠ ಹೂಡಿಕೆ ಮಿತಿ ಇಲ್ಲ. ಮೆಚ್ಯೂರಿಟಿ ಅವಧಿ 5 ವರ್ಷಗಳು.
- **ಕಿಸಾನ್ ವಿಕಾಸ್ ಪತ್ರ:** ಯಾರೇ ಆದರೂ ಕನಿಷ್ಠ 1000 ರೂ. ಠೇವಣಿ ಇಡಬಹುದು. ಶೇ.6.9 ಬಡ್ಡಿ ದರದೊಂದಿಗೆ ಹೂಡಿಕೆಯ ಮೊತ್ತ 124 ತಿಂಗಳುಗಳಲ್ಲಿ ದುಪ್ಪಟ್ಟಾಗುತ್ತದೆ.
- **ವೆಸ್ಟರ್ನ್ ಯೂನಿಯನ್ ಹಣ ವರ್ಗಾವಣೆ:** ಹಣ ಪಡೆಯಲು ಅಥವಾ ವರ್ಗಾಯಿಸಲು ಆನ್ ಲೈನ್ ಸೌಲಭ್ಯ.

ಇದರ ಜೊತೆಗೆ ಯಾರೇ ಆದರೂ ರಾಷ್ಟ್ರೀಯ ಪಿಂಚಣಿ ಯೋಜನೆ ಮತ್ತು ಅಪಘಾತ ವಿಮೆ ಸೌಲಭ್ಯ ಪಡೆಯಬಹುದು.




# ರಸ್ತೆ ಬದಿಯ ಸೌಲಭ್ಯಗಳ ಹೊಸ ಆರಂಭ




**ಅದು ರಸ್ತೆ ನಿರ್ಮಾಣಕ್ಕೆ ಉತ್ತೇಜನ ನೀಡುವುದೇ ಇರಲಿ ಅಥವಾ ಪ್ರಯಾಣಿಕರಿಗೆ ಮತ್ತು ಟ್ರಕ್ ಚಾಲಕರಿಗೆ ರಸ್ತೆ ಬದಿ ಸೌಲಭ್ಯ ಅಭಿವೃದ್ಧಿಯೇ ಇರಲಿ ಅಥವಾ ಮೂಲಸೌಕರ್ಯಕ್ಕೆ ಹೊಸ ಆಯಾಮ ನೀಡುವುದೇ ಇರಲಿ ಅಥವಾ ಪ್ರವಾಸಿ ವಾಹನಗಳ ತಡೆರಹಿತ ಸಂಚಾರಕ್ಕೆ 'ಒಂದು ದೇಶ ಒಂದು ತೆರಿಗೆ' ನೀತಿಯಾಗಿರಲಿ ಕೇಂದ್ರ ಸರ್ಕಾರ ಆರ್ಥಿಕ ಅಭಿವೃದ್ಧಿಯನ್ನು ಉತ್ತೇಜಿಸಲು ಬದ್ಧವಾಗಿದೆ, ಹೀಗಾಗಿ ಹೊಸ ಉದ್ಯೋಗಾವಕಾಶಗಳು ಸೃಷ್ಟಿಯಾಗುವುದರ ಜೊತೆಗೆ ಶ್ರೀಸಾಮಾನ್ಯರ ಜೀವನವು ಸುಗಮವಾಗುತ್ತದೆ.**

"ಕೆಲ ದೂರದ ಅಂತರದಲ್ಲಿ ಶೌಚಾಲಯದ ಅಗತ್ಯ ಇರುತ್ತದೆ", ಎಂದು ಹೆದ್ದಾರಿಗಳಲ್ಲಿ ಹೆಚ್ಚಾಗಿ ಪ್ರಯಾಣ ಮಾಡುವ ಇಂದು ಹೇಳಿದರೆ, ಉತ್ತಮ ಲಾಡ್ಜ್ ಗಳ ಅಗತ್ಯವಿದೆ ಎಂದು ಯದುವೀರ್ ಸಿಂಗ್ ಹೇಳುತ್ತಾರೆ. ಹುಸೇನ್ ಅಬ್ಬಾಸ್ ಅವರು ಅಚ್ಚುಕಟ್ಟಾದ ಹೋಟೆಲ್ ಮತ್ತು ತಿನಿಸುಗಳು ಇರಬೇಕು ಎಂದು ಬಯಸುತ್ತಾರೆ. ಮತ್ತೊಂದೆಡೆ, ಟ್ರಕ್ ಚಾಲಕ ಹರಿ ರಾಮ್, ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಸರಕುಗಳನ್ನು ಸಾಗಿಸುವಾಗ ಮನೆಯಿಂದ ಹೊರಗೆ ಹಲವಾರು ರಾತ್ರಿಗಳನ್ನು ಕಳೆಯಬೇಕಾಗುತ್ತದೆ. ತನ್ನಂತಹ ಜನರು 5-4 ಗಂಟೆಗಳ ಕಾಲ ನೆಮ್ಮದಿಯಿಂದ ನಿದ್ರೆಯನ್ನು ಮಾಡಲು ಸ್ಥಳದ ಜೊತೆಗೆ ಉತ್ತಮ ಆಹಾರ ತಾಣಗಳು, ಸ್ನಾನ ಮತ್ತು ಪಾರ್ಕಿಂಗ್ ಸೌಲಭ್ಯಗಳಿರಬೇಕು ಎಂದು ಬಯಸುತ್ತಾರೆ. ಪ್ರತಿ 60-40 ಕಿ.ಮೀ.ಗಳ ನಂತರ ಇಂತಹ ವ್ಯವಸ್ಥೆಗಳನ್ನು ಮಾಡುವುದು ಒಳ್ಳೆಯದು ಎಂದು ಮತ್ತೊಬ್ಬ ಟ್ರಕ್ ಚಾಲಕ ಜಿತೇಂದ್ರ ಚೌಹಾನ್ ಅಭಿಪ್ರಾಯಪಡುತ್ತಾರೆ.

ಈಗ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್.ಎಚ್.ಎ.ಐ.) ವೈಯಕ್ತಿಕ ಚಾಲಕರುಗಳಿಗೆ, ಟ್ರಕ್ ಡ್ರೈವರ್ ಗಳಿಗೆ ಮತ್ತು ಸಹಾಯಕ ಚಾಲಕರಿಗೆ ಮುಂದಿನ ಹಂತದಲ್ಲಿ ವಿಶ್ವದರ್ಜೆಯ ಸೌಲಭ್ಯಗಳನ್ನು ಕಲ್ಪಿಸುತ್ತಿದ್ದು, ಪ್ರಯಾಣಿಕರಾದ ಇಂದು ಮತ್ತು ಯಧುವೀರ್ ಮತ್ತು ಟ್ರಕ್ ಚಾಲಕರಾದ ಹರಿರಾಮ್ ಮತ್ತು ಜಿತೇಂದ್ರ ಅವರ ಕನಸುಗಳು ಕೈಗೂಡುತ್ತಿವೆ. ಈ ಯೋಜನೆಯನ್ನು ನೂತನ ವಿಶ್ವದರ್ಜೆಯ ಮಾರ್ಗಸೂಚಿಯನ್ವಯ ಆಖೈರುಗೊಳಿಸಲಾಗಿದೆ. ಯೋಜನೆಯ ಪ್ರಕಾರ, ಪ್ರಸಕ್ತ ಮತ್ತು ಮುಂಬರುವ ಹೆದ್ದಾರಿಗಳು ಮತ್ತು ಎಕ್ಸ್ ಪ್ರೆಸ್ ಹೆದ್ದಾರಿಗಳ ಪ್ರತಿ 60-40 ಕಿ.ಮೀ.ಗಳ ನಂತರ ರಸ್ತೆ ಬದಿ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಟ್ರಕ್ಕಿಂಗ್ ಕಾರಿಡಾರ್‌ಗಳು ಮತ್ತು ಹಸಿರು ವಲಯ ಎಕ್ಸ್ ಪ್ರೆಸ್ ದಾರಿಗಳ ಜೊತೆಗೆ ವಿಶ್ವ ದರ್ಜೆಯ ಮಾರ್ಗಗಳ ಸೌಲಭ್ಯಗಳ ಗ್ರಿಡ್ ಅನ್ನು ಅಭಿವೃದ್ಧಿಪಡಿಸಲು ಎನ್.ಎಚ್.ಎ.ಐ. ಯೋಜಿಸುತ್ತಿದೆ. ಈ ಸೌಲಭ್ಯಗಳಲ್ಲಿ ಪೆಟ್ರೋಲ್ ಪಂಪ್ ಗಳು, ಆಹಾರ ತಾಣಗಳು, ರೆಸ್ಟೋರೆಂಟ್‌ಗಳು, ಡಾಬಾಗಳು, ಅಂಗಡಿಗಳು, ವೈದ್ಯಕೀಯ ಸೌಲಭ್ಯಗಳು, ಸ್ಥಳೀಯ ಕಲೆ ಮತ್ತು ಕರಕುಶಲ ವಸ್ತುಗಳ ಮಾರುಕಟ್ಟೆಗಳು ಮತ್ತು ನಿರ್ಮಲ ಶೌಚಾಲಯಗಳೂ ಸೇರಿವೆ. ಮುಂದಿನ ಐದು ವರ್ಷಗಳಲ್ಲಿ ಇಂತಹ ಸೌಲಭ್ಯಗಳನ್ನು 600 ಕ್ಕೂ ಹೆಚ್ಚು ಸ್ಥಳಗಳಲ್ಲಿ ಅಭಿವೃದ್ಧಿಪಡಿಸಲಾಗುವುದು.

ದೇಶದ ಅತಿದೊಡ್ಡ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ

## ಮೂರು ಪಟ್ಟು ಹೆಚ್ಚಿನ ಹೆದ್ದಾರಿಗಳ ನಿರ್ಮಾಣ



ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣದ ವೇಗವು ದಿನಕ್ಕೆ ದಾಖಲೆಯ 34 ಕಿ.ಮೀ ತಲುಪಿರುವುದು ದೇಶದ ಒಂದು ದೊಡ್ಡ ಸಾಧನೆಯಾಗಿದೆ, ಆದರೆ, ನರೇಂದ್ರ ಮೋದಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬರುವ ಮೊದಲು 2014ರಲ್ಲಿ ಇದು ಕೇವಲ 12 ಕಿ.ಮೀ. ಆಗಿತ್ತು, ಸಂಕ್ಷಿಪ್ತವಾಗಿ ಹೇಳುವುದಾದರೆ, ಕಳೆದ ಆರು ವರ್ಷಗಳಲ್ಲಿ ಹೆದ್ದಾರಿ ನಿರ್ಮಾಣದ ವೇಗ ಮೂರು ಪಟ್ಟು ಹೆಚ್ಚಾಗಿದೆ. ಅಷ್ಟೇ ಅಲ್ಲ, 21-2020ರ ಆರ್ಥಿಕ ವರ್ಷದಲ್ಲಿ 12,205 ಕಿ.ಮೀ.ಗೂ ಅಧಿಕ ಹೆದ್ದಾರಿಗಳನ್ನು ನಿರ್ಮಿಸುವ ಮೂಲಕ ದೇಶವು ಮತ್ತೊಂದು ಮೈಲಿಗಲ್ಲು ಸಾಧಿಸಿದೆ.

## 18 ಗಂಟೆಗಳ ಅವಧಿಯಲ್ಲಿ 25 ಕಿ.ಮೀ. ಹೆದ್ದಾರಿ, ಲಿಮ್ಕಾ ಪುಸ್ತಕದಲ್ಲಿ ದಾಖಲು



ಎನ್.ಎಚ್.ಎ.ಐ. ಪ್ರಸಕ್ತ ನಡೆಯುತ್ತಿರುವ ಮೂಲಸೌಕರ್ಯ ಕಾಮಗಾರಿಯಲ್ಲಿ ಮತ್ತೊಂದು ಅಪರೂಪದ ಮೈಲಿಗಲ್ಲು ಸಾಧಿಸಿದೆ. ಇದು ವಿಜಯಪುರ-ಸೋಲ್ಲಾಪುರ (ಎನ್.ಎಚ್. 52) ನಡುವೆ 25.54 ಕಿ.ಮೀ ವಿಸ್ತೀರ್ಣದ ಚತುಷ್ಪಥದ ಒಂದು ರಸ್ತೆವನ್ನು 18 ಗಂಟೆಗಳ ದಾಖಲೆಯ ಸಮಯದಲ್ಲಿ ಪೂರ್ಣಗೊಳಿಸಿದೆ. ಎನ್.ಎಚ್.ಎ.ಐ.ನ ಈ ಸಾಧನೆಯು ಲಿಮ್ಕಾ ದಾಖಲೆಯ ಪುಸ್ತಕ ಸೇರಿದೆ. 110 ಕಿ.ಮೀ ಉದ್ದದ ಸೋಲ್ಲಾಪುರ-ವಿಜಯಪುರ ರಾಷ್ಟ್ರೀಯ ಹೆದ್ದಾರಿಯನ್ನು ಕಳೆದ ವರ್ಷವಷ್ಟೇ ಉದ್ಘಾಟಿಸಲಾಗಿದ್ದು, ಈ ವರ್ಷದ ಅಕ್ಟೋಬರ್ ವೇಳೆಗೆ ಪೂರ್ಣಗೊಳ್ಳುವ ಸಾಧ್ಯತೆ ಇದೆ.

## ಪ್ರಯಾಣ ಮತ್ತು ಪ್ರವಾಸೋದ್ಯಮಕ್ಕೆ ಪ್ರೋತ್ಸಾಹ



ಪ್ರವಾಸಿ ವಾಹನಗಳು ರಾಜ್ಯ ಪ್ರವೇಶಿಸುವಾಗ ರಸ್ತೆ ತೆರಿಗೆ ಪಾವತಿಸುವಲ್ಲಿ ಅನಗತ್ಯ ವಿಳಂಬವಾಗುತ್ತಿತ್ತು. ಏಕರೂಪದ ರಸ್ತೆ ತೆರಿಗೆಯನ್ನು ಪ್ರಸ್ತಾಪಿಸುವ ಮೂಲಕ ಸರ್ಕಾರ ಈ ನಿಟ್ಟಿನಲ್ಲಿ ಪ್ರಮುಖ ಉಪಕ್ರಮ ಕೈಗೊಂಡಿದೆ. ಸರ್ಕಾರದ ಹೊಚ್ಚ ಹೊಸ ಯೋಜನೆ "ಅಖಿಲ ಭಾರತ ಪ್ರವಾಸಿ ವಾಹನಗಳ ಅಧಿಕಾರ ಮತ್ತು ಪರವಾನಗಿ ನಿಯಮಗಳು, 2021", ಇದು ಏಪ್ರಿಲ್ 01 ರಿಂದ ಜಾರಿಗೆ ಬಂದಿದೆ, ಇದು ಭಾರತದಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸುವಲ್ಲಿ ಬಹಳ ದೂರ ಸಾಗಲಿದೆ. ಈ ಯೋಜನೆಯಡಿ ಪ್ರವಾಸಿ ವಾಹನ ನಿರ್ವಾಹಕರು ಈಗ ಆನ್ ಲೈನ್ ನಲ್ಲಿ ಪರವಾನಗಿಗಾಗಿ ಅರ್ಜಿ ಸಲ್ಲಿಸಲು ಅವಕಾಶವಾಗುತ್ತದೆ.



**"ಎನ್.ಎಚ್.ಎ.ಐ. ಮುಂದಿನ ಐದು ವರ್ಷಗಳಲ್ಲಿ ದೇಶದ ಹೆದ್ದಾರಿಗಳ ಬದಿಯ ಸುಮಾರು 600ಕ್ಕೂ ಹೆಚ್ಚು ಕಡೆಗಳಲ್ಲಿ ಪ್ರಯಾಣಿಕರ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುತ್ತಿದೆ. ಇದು ಲಕ್ಷಾಂತರ ಜನರಿಗೆ ಹೊಸ ಅವಕಾಶಗಳನ್ನು ತೆರೆಯಲಿದ್ದು, ಸಂಚರಿಸುವ ಪ್ರಯಾಣಿಕರಿಗೆ ಅನುಕೂಲ ಕಲ್ಪಿಸುವುದಲ್ಲದೆ, ಟ್ರಕ್ ಚಾಲಕರ ಜೀವನ ಸುಧಾರಣೆ ಮಾಡಲಿದೆ.**

**-ನಿತಿನ್ ಗಡ್ಕರಿ, ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಖಾತೆ ಸಚಿವರು**

ಒಂದಾದ ಭಾರತ್ ಮಾಲಾ ಪರಿಯೋಜನೆಯನ್ನು ಎನ್.ಎಚ್.ಎ.ಐ ನಿರ್ವಹಿಸುತ್ತಿದ್ದು, ಇದರಡಿ ಹಲವು ಹೆದ್ದಾರಿಗಳು ಮತ್ತು ಎಕ್ಸ್ ಪ್ರೆಸ್ ದಾರಿಗಳನ್ನು ದೇಶದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ಸರ್ಕಾರ ಈ ಸೌಲಭ್ಯಗಳನ್ನು ಭಾರತಮಾಲಾ ಪರಿಯೋಜನೆ ಅಡಿಯಲ್ಲಿ 5.35 ಲಕ್ಷ ಕೋಟಿ ರೂಪಾಯಿ ವೆಚ್ಚದಲ್ಲಿ ಅಭಿವೃದ್ಧಿಪಡಿಸುತ್ತಿದೆ

### ಸೌಲಭ್ಯಗಳ ಸರ್ವಾಂಗೀಣ ಅಭಿವೃದ್ಧಿ

ರಸ್ತೆ ಬದಿಯ ಸೌಲಭ್ಯಗಳನ್ನು 3000 ಹೆಕ್ಟೇರ್ ಗೂ ಅಧಿಕ ಭೂಮಿಯಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ಇದರಡಿಯಲ್ಲಿ ಉತ್ತರದಲ್ಲಿ 67, ಪೂರ್ವದಲ್ಲಿ 40, ಪಶ್ಚಿಮದಲ್ಲಿ 29, ದಕ್ಷಿಣದಲ್ಲಿ 45, ದೆಹಲಿ - ಮುಂಬೈ ಎಕ್ಸ್ ಪ್ರೆಸ್ ಹೆದ್ದಾರಿಯಲ್ಲಿ 94 ಮತ್ತು ಹಸಿರು ವಲಯದ ಎಕ್ಸ್ ಪ್ರೆಸ್ ಹೆದ್ದಾರಿಗಳಲ್ಲಿ 376 ತಾಣಗಳನ್ನು ಗುರುತಿಸಲಾಗಿದೆ.

### ಟ್ರಕ್ ಡ್ರೈವರ್‌ಗಳಿಗೆ ತಂಗುದಾಣ

ಟ್ರಕ್ ಚಾಲಕರಿಗೆ ತಂಗುದಾಣಗಳು ದೊಡ್ಡ ಪರಿಹಾರವನ್ನು ನೀಡುತ್ತವೆ, ನಂತರ ಅವರು ತಮ್ಮ ಟ್ರಕ್ ಗಳಲ್ಲಿನ ಸರಕುಗಳ ಸುರಕ್ಷತೆಯ ಬಗ್ಗೆ ಚಿಂತಿಸದೆ ನೆಮ್ಮದಿಯಿಂದ ವಿಶ್ರಾಂತಿ ಪಡೆಯಲು ಸಾಧ್ಯವಾಗುತ್ತದೆ. ಇದು ನಿದ್ರಾಹೀನತೆಯಿಂದ ಉಂಟಾಗುವ ಹೆದ್ದಾರಿ ಅಪಘಾತಗಳನ್ನು ಸಹ ತಗ್ಗಿಸುತ್ತದೆ. ತಂಗುದಾಣ ಮತ್ತು ಶೌಚಾಲಯಗಳಲ್ಲದೆ, ತುರ್ತು ಸಂದರ್ಭಗಳಿಗಾಗಿ ಈ ಕೆಲವು ಪ್ರಮುಖ ಸ್ಥಳಗಳಲ್ಲಿ ಹೆಲಿಪ್ಯಾಡ್ ಗಳನ್ನು ಸಹ ನಿರ್ಮಿಸಲಾಗುವುದು.

### ಸ್ಥಳೀಯ ಕಲೆಗೆ ಪ್ರೋತ್ಸಾಹ

ಹಾತ್ ಬಜಾರ್ ಗಳ ಅಭಿವೃದ್ಧಿಯು ಸ್ಥಳೀಯ ವ್ಯಾಪಾರಿಗಳಿಗೆ ಸ್ಥಳೀಯ ಕಲಾಕೃತಿಗಳನ್ನು ಪ್ರದರ್ಶಿಸಿ ಮಾರಾಟ ಮಾಡುವ ಅವಕಾಶ ಒದಗಿಸುತ್ತದೆ.

### ವ್ಯಾಪಾರಸ್ಥರಿಗೆ ರಿಯಾಯಿತಿ

ಡಾಬಾಗಳು, ರೆಸ್ಟೋರೆಂಟ್ ಗಳು, ಇಂಧನ ಕೇಂದ್ರಗಳು, ಹೋಟೆಲ್ ಗಳು ಮತ್ತು ಮೋಟೆಲ್ ಗಳನ್ನು ಸ್ಥಾಪಿಸಲು ಎಲ್ಲ ಮಾನದಂಡಗಳನ್ನು ಪೂರೈಸುವ ವ್ಯಾಪಾರಸ್ಥರಿಗೆ ಉತ್ತೇಜನ ನೀಡಲು ಸೂಕ್ತ ರಿಯಾಯಿತಿಗಳನ್ನು ನೀಡಲಾಗುತ್ತಿದೆ.

ಉತ್ತಮ ಮೂಲಸೌಕರ್ಯಗಳನ್ನು ರಚಿಸಲು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಮಾಡುತ್ತಿರುವ ನಿರಂತರ ಪ್ರಯತ್ನಗಳು, ರಸ್ತೆ ಬಳಕೆದಾರರಿಗೆ ನೆಮ್ಮದಿ ನೀಡುತ್ತಿವೆ. ಇದು ಹೆದ್ದಾರಿಗಳಿಗೆ ನಿಜವಾದ ಆಕರ್ಷಕ ಹೂಡಿಕೆ ಅವಕಾಶವನ್ನು ಸಹ ಸೃಷ್ಟಿಸಿದೆ, ಇದು ಆತ್ಮನಿರ್ಭರ ಭಾರತದ ಕನಸನ್ನು ನನಸಾಗಿಸುವಲ್ಲಿ ಬಹಳ ದೂರ ಸಾಗಲಿದೆ. ■




# ಭಾರತ - ಬಾಂಗ್ಲಾದೇಶದ ಬಾಂಧವ್ಯದ ನಿರಂತರ ರಕ್ಷಣೆ

ಸಾಮಾನ್ಯ ಸಂಪ್ರದಾಯಗಳು, ಭಾಷಾ-ಸಾಂಸ್ಕೃತಿಕ ಸಂಬಂಧಗಳು, ಸಾಹಿತ್ಯ ಮತ್ತು ಕಲೆಗಳ ಮೇಲಿನ ಪ್ರೀತ್ಯಾದರ ಭಾರತ ಮತ್ತು ಬಾಂಗ್ಲಾದೇಶದ ನಡುವಿನ ದ್ವಿಪಕ್ಷೀಯ ಬಾಂಧವ್ಯದ ಪ್ರಮುಖ ಅಡಿಪಾಯಗಳಾಗಿವೆ. ಬಾಂಗ್ಲಾದೇಶದ ರಾಷ್ಟ್ರಪಿತ ಶೇಖ್ ಮುಜಿಬುರ್ ರೆಹಮಾನ್ ಅವರ ಜನ್ಮ ಶತಾಬ್ದಿ, ಬಾಂಗ್ಲಾದೇಶದ ಸ್ವಾತಂತ್ರ್ಯದ 50ನೇ ವರ್ಷಾಚರಣೆ ಹಾಗೂ ಭಾರತ ಮತ್ತು ಬಾಂಗ್ಲಾ ದೇಶದ ನಡುವಿನ ಬಾಂಧವ್ಯದ ಹೊಸ ಮನ್ವಂತರದ ವೇಳೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮಾರ್ಚ್ 26 ರಿಂದ 27 ರವರೆಗೆ ಢಾಕಾಗೆ ಎರಡು ದಿನಗಳ ಭೇಟಿ ನೀಡಿದ ಸಂದರ್ಭದಲ್ಲಿ ಭರೋತ್- ಬಾಂಗ್ಲಾದೇಶ್ ಮೊಯ್‌ತ್ರಿ ಚಿರೋಂಜಿವಿ ಹೋಕ್ (ಭಾರತ -ಬಾಂಗ್ಲಾದೇಶ ಬಾಂಧವ್ಯ ಚಿರವಾಗಿರಲಿ) ಎಂಬ ಸಂದೇಶವನ್ನು ನೀಡಿದರು.

1971ರಲ್ಲಿ ಬಾಂಗ್ಲಾದೇಶವನ್ನು ಸ್ವತಂತ್ರ ರಾಷ್ಟ್ರ ಎಂದು ಪರಿಗಣಿಸಿದ ಪ್ರಥಮ ರಾಷ್ಟ್ರ ಭಾರತ. ನೆರೆ ರಾಷ್ಟ್ರವಾಗಿ ಭಾರತ ಬಾಂಗ್ಲಾದೇಶದ ಅಭಿವೃದ್ಧಿಯ ಪಯಣಕ್ಕೆ ನೆರವಾಗುತ್ತಿದೆ. ಆದರೆ, ಕೊರೊನಾ ಸಾಂಕ್ರಾಮಿಕದ ಬಳಿಕ ಬದಲಾಗುತ್ತಿರುವ ಜಾಗತಿಕ ಸನ್ನಿವೇಶದಲ್ಲಿ, ಭಾರತ ಮತ್ತು ಬಾಂಗ್ಲಾದೇಶ ಎರಡೂ ತಮ್ಮ ಬಾಂಧವ್ಯವನ್ನು ಮುಂದಿನ ಹಂತಕ್ಕೆ ತೆಗೆದುಕೊಂಡು ಹೋಗುವ ಅಗತ್ಯವಿದೆ. ಹೀಗಾಗಿ, ನೆರೆಯ ರಾಷ್ಟ್ರ ಸ್ವಾತಂತ್ರ್ಯದ 50ನೇ ವರ್ಷ ಮತ್ತು ಆ ದೇಶದ ನಿರ್ಮಾತೃವಿನ ಜನ್ಮ ಶತಾಬ್ದಿ ಆಚರಿಸುತ್ತಿರುವಾಗ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಬಾಂಗ್ಲಾದೇಶದ ಭೇಟಿ "ನೆರೆ ಮೊದಲು' ನೀತಿಯ ಬದ್ಧತೆ ಪುನರುಚ್ಚರಿಸುತ್ತದೆ. ಪ್ರಧಾನಮಂತ್ರಿಯವರು ಮಾರ್ಚ್ 26 ಮತ್ತು 27 ರವರೆಗೆ 2 ದಿನ ಢಾಕಾಗೆ ಭೇಟಿ ನೀಡುವ ಮೂಲಕ ಸಾಂಸ್ಕೃತಿಕವಾಗಿ ಮತ್ತು ನಾಗರಿಕವಾಗಿ ಸಮಾನವಾದ ದೇಶದೊಂದಿಗೆ ಸಾಮಾಜಿಕ-ಆರ್ಥಿಕ ಸಂಬಂಧಗಳಿಗೆ ಹೊಸ ಆಯಾಮವನ್ನು ನೀಡಿದರು. ಬಾಂಗ್ಲಾದೇಶದ ರಾಷ್ಟ್ರೀಯ ದಿನದ ಕಾರ್ಯಕ್ರಮವನ್ನುದ್ದೇಶಿಸಿ ಅವರು ಓರಾಕಾಂಡಿಯಲ್ಲಿ ಮಾತನಾಡಿದರು ಮತ್ತು ತಾಕೂರ್ಬಾರಿ ದೇವಸ್ಥಾನದಲ್ಲಿ ತಮ್ಮ ಪ್ರಾರ್ಥನೆ ಸಲ್ಲಿಸಿದರು.ಜೊತೆಗೆ ಮಾತುವಾ ಸಮುದಾಯ ಉದ್ದೇಶಿಸಿ ಮಾತನಾಡಿದರು.

ಈ ಭೇಟಿ ವೇಳೆ ಜಂಟಿ ಹೇಳಿಕೆಯನ್ನು ಬಿಡುಗಡೆ ಮಾಡಲಾಯಿತು, ಇದರಲ್ಲಿ ಬಾಂಗ್ಲಾದೇಶವು, ಭಾರತ ನೀಡುತ್ತಿರುವ ನಿರಂತರ ಸಹಕಾರಕ್ಕಾಗಿ ಕೃತಜ್ಞತೆ ಸಲ್ಲಿಸಿತು ಮತ್ತು ಬಾಂಗ್ಲಾದೇಶದ ಅಭಿವೃದ್ಧಿಯ ಬಗ್ಗೆ ಭಾರತ ಮೆಚ್ಚುಗೆ ಸೂಚಿಸಿತು. ವಲಯದಲ್ಲಿ ಮತ್ತು ವಿಶ್ವದಲ್ಲಿ ಭಾಗವಹಿಸುವಿಕೆಯನ್ನು ಹೆಚ್ಚಿಸಲು ಪರಸ್ಪರ

ಸಹಕಾರಕ್ಕಾಗಿ ಎರಡೂ ದೇಶಗಳು ಪರಸ್ಪರ ಧನ್ಯವಾದ ಅರ್ಪಿಸಿದವು. ಉಭಯ ದೇಶಗಳು ದ್ವಿಪಕ್ಷೀಯ ಸಹಕಾರ ಕುರಿತು ಹಲವಾರು ಒಪ್ಪಂದಗಳನ್ನು ಮಾಡಿಕೊಂಡವು. ತನ್ನ ನೆರೆ ರಾಷ್ಟ್ರದ ಅಭಿವೃದ್ಧಿಗೆ ಬಲವಾದ ಪಾಲುದಾರನಾಗಿ ಉಳಿಯುವುದಾಗಿ ಭಾರತ ಬಾಂಗ್ಲಾದೇಶಕ್ಕೆ ಭರವಸೆ ನೀಡಿತು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಬಾಂಗ್ಲಾ ದೇಶ ಭೇಟಿಗೂ ಮುನ್ನ ನೀಡಿದ "ಕೋವಿಡ್- 19 ಸಾಂಕ್ರಾಮಿಕ ರೋಗ ಬಾಧಿಸಿದ ಬಳಿಕ ನನ್ನ ಮೊದಲ ವಿದೇಶಿ ಭೇಟಿ ನಮ್ಮ ಸ್ನೇಹಪರ ನೆರೆಯ ರಾಷ್ಟ್ರವಾಗಿದೆ ಎಂಬುದು ನನಗೆ ಸಂತೋಷವಾಗಿದೆ, ಈ ದೇಶದೊಂದಿಗೆ, ಭಾರತವು ಆಳವಾದ ಸಾಂಸ್ಕೃತಿಕ, ಭಾಷಾ ಮತ್ತು ಜನರ ನಡುವಿನ ಸಂಬಂಧಗಳನ್ನು ಹಂಚಿಕೊಳ್ಳುತ್ತದೆ." ಎಂಬ ಸಂದೇಶದಿಂದ ಅವರ ಬಾಂಗ್ಲಾದೇಶದ ಭೇಟಿಯ ಮಹತ್ವವನ್ನು ಯಾರು ಬೇಕಾದರೂ ಅರ್ಥಮಾಡಿಕೊಳ್ಳಬಹುದು. ಇದರ ಜೊತೆಗೆ, ಅವರು ಬಾಂಗ್ಲಾದೇಶದ ವೃತ್ತಪತ್ರಿಕೆ ದಿ ಡೈಲಿ ಸ್ಟಾರ್ ಗೆ "ಬಂಗಬಂಧುವಿನೊಂದಿಗೆ ವಿಭಿನ್ನ ದಕ್ಷಿಣ ಏಷ್ಯಾವನ್ನು ಕಲ್ಪಿಸಿಕೊಳ್ಳುವುದು" ಎಂಬ ಲೇಖನವನ್ನೂ ಬರೆದಿದ್ದು,, ಇದರಲ್ಲಿ ಭಾರತವು ಸದಾ ಬಾಂಗ್ಲಾದೇಶದ ಪಾಲುದಾರನಾಗಿ ಉಳಿಯುತ್ತದೆ ಎಂದು ಪ್ರಧಾನಮಂತ್ರಿ ಭರವಸೆ ನೀಡಿದ್ದಾರೆ, ಏಕೆಂದರೆ ಬಂಗಬಂಧು, ಲಕ್ಷಾಂತರ ದೇಶಭಕ್ತ ಬಾಂಗ್ಲಾದೇಶೀಯರು ಮತ್ತು ಸಾವಿರಾರು ಭಾರತೀಯರು ಮಾಡಿದ ತಮ್ಮ ಅತ್ಯುತ್ತಮ ಪ್ರಯತ್ನದಿಂದ ಉಭಯ ದೇಶಗಳು ಉಜ್ವಲ ಭವಿಷ್ಯದತ್ತ ಸಾಗುತ್ತಿವೆ.



**ಜೋಶೋರೇಶ್ವರಿ ದೇವಾಲಯದಲ್ಲಿ ಪ್ರಾರ್ಥನೆ**

ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಎರಡು ದಿನಗಳ ಭೇಟಿಯ ಸ್ವಲ್ಪ ಮೊದಲು ಸತ್ಖಿರಾದಲ್ಲಿನ ಜೆಶೋರೇಶ್ವರಿ ದೇವಾಲಯದ ಜೀರ್ಣೋದ್ಧಾರ ಮಾಡಲಾಯಿತು. ದೇವಾಲಯವನ್ನು ಸುಂದರವಾಗಿ ಸಿಂಗರಿಸಲಾಗಿತ್ತು. ಪೌರಾಣಿಕ ಸಂಪ್ರದಾಯದ ರೀತ್ಯ 51 ಶಕ್ತಿಪೀಠಗಳಲ್ಲಿ ಈ ದೇವಾಲಯವೂ ಒಂದಾಗಿದೆ. ಈ ದೇವಸ್ಥಾನದಲ್ಲಿ ಪ್ರಧಾನಮಂತ್ರಿಯವರು ಕಾಳಿ ದೇವಿಯನ್ನು ಆರಾಧಿಸಿದರು. ಓರಾಕಾಂಡಿಯ ಮತುವಾ ಸಮುದಾಯವನ್ನು ಉದ್ದೇಶಿಸಿ ಪ್ರಧಾನಮಂತ್ರಿ ಮಾತನಾಡಿದರು. ಶ್ರೀ ಶ್ರೀ ಹರಿಚಂದ್ ಠಾಕೂರ್ ತಮ್ಮ ಸಾಮಾಜಿಕ ಸುಧಾರಣೆಗಳನ್ನು ಪ್ರಾರಂಭಿಸಿ ಶಾಂತಿ ಮತ್ತು ಸಾಮರಸ್ಯದ ಸಂದೇಶವನ್ನು ಹರಡಿದ ಸ್ಥಳ ಇದಾಗಿದೆ.

**ಹಂಚಿಕೆಯ ಸಂಪ್ರದಾಯ, ಸಮಾನ ಸವಾಲುಗಳು**

ಬಾಂಗ್ಲಾದೇಶದ 50ನೇ ರಾಷ್ಟ್ರೀಯ ದಿನ ಆಚರಿಸಲು ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಪ್ರಧಾನಮಂತ್ರಿಯವರು ಭಾರತ-ಬಾಂಗ್ಲಾದೇಶದ ಬಾಂಧವ್ಯ, ಹಂಚಿಕೆಯ ಸಂಪ್ರದಾಯಗಳು ಮತ್ತು ಉಭಯ ದೇಶಗಳ ಸಾಮಾನ್ಯ ಗುರಿಗಳ ಬಗ್ಗೆ ವಿವರವಾಗಿ ಚರ್ಚಿಸಿದರು. ಎರಡೂ ದೇಶಗಳು ಪ್ರಜಾಪ್ರಭುತ್ವ ರಾಷ್ಟ್ರಗಳಾಗಿವೆ ಎಂದು ಪ್ರಧಾನಮಂತ್ರಿ ಹೇಳಿದರು. ಉಭಯ ದೇಶಗಳು ಹಂಚಿಕೆಯ ಸಂಪ್ರದಾಯ, ಹಂಚಿಕೆಯ ಅಭಿವೃದ್ಧಿ, ಹಂಚಿಕೆಯ ಗುರಿಗಳು ಮತ್ತು ಹಂಚಿಕೆಯ ಸವಾಲುಗಳನ್ನು ಹೊಂದಿವೆ ಎಂದು ಅವರು ಹೇಳಿದರು. 1971ರಲ್ಲಿ ಬಾಂಗ್ಲಾದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾರತೀಯ ಸೇನೆಯ ಪಾತ್ರವನ್ನು ಪ್ರಧಾನಮಂತ್ರಿ ಶ್ಲಾಘಿಸಿದರು ಮತ್ತು ಬಾಂಗ್ಲಾದೇಶದ ಸ್ವಾತಂತ್ರ್ಯಕ್ಕಾಗಿ ಆಯೋಜಿಸಲಾಗಿದ್ದ ಸತ್ಯಾಗ್ರಹದಲ್ಲಿ ಸ್ವತಃ ತಾವು ಭಾಗವಹಿಸಿದ್ದ ತಮ್ಮ ಜೀವನದ ಆ ಕ್ಷಣಗಳನ್ನು ಹಂಚಿಕೊಂಡರು. "ಬಾಂಗ್ಲಾದೇಶದ ವಿಮೋಚನೆಗಾಗಿ ನಡೆದ ಹೋರಾಟದಲ್ಲಿ ತಮ್ಮ ಪಾಲ್ಗೊಳ್ಳುವಿಕೆ, ತಮ್ಮ ಜೀವನದ ಮೊದಲ ಚಳವಳಿಗಳಲ್ಲಿ ಒಂದಾಗಿತ್ತು. ಆಗ ತಮಗೆ 20 ಅಥವಾ 22 ವಯಸ್ಸಾಗಿತ್ತು ಮತ್ತು ತಾವು ಇತರರೊಂದಿಗೆ ಬಾಂಗ್ಲಾದೇಶದ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದಾಗಿ." ತಿಳಿಸಿದರು.

> **ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಬಾಂಗ್ಲಾದೇಶದ 50ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಢಾಕಾಗೆ ಭೇಟಿ ನೀಡಿದ್ದರು.**

ವ್ಯಾಪಾರ ಮತ್ತು ವಾಣಿಜ್ಯ ಎರಡೂ ದೇಶಗಳಿಗೆ ಸಮಾನ ಅವಕಾಶಗಳಾಗಿದ್ದರೆ, ಭಯೋತ್ಪಾದನೆ ತಮ್ಮ ಮುಂದಿರುವ ಸಮಾನ ಸವಾಲು ಎಂದು ಪ್ರಧಾನಮಂತ್ರಿ ಹೇಳಿದರು.

ನವೋದ್ಯಮ ಮತ್ತು ನಾವೀನ್ಯತೆ ವ್ಯವಸ್ಥೆಯೊಂದಿಗೆ ಸಂಪರ್ಕ ಸಾಧಿಸಲು ಮತ್ತು ಭಾರತೀಯ ಉದ್ಯಮಿಗಳನ್ನು ಭೇಟಿ ಮಾಡಲು ಬಾಂಗ್ಲಾದೇಶದ 50 ಉದ್ಯಮಿಗಳನ್ನು ಭಾರತಕ್ಕೆ ಬರಲು ಅವರು ಆಹ್ವಾನಿಸಿದರು. ಉಭಯ ದೇಶಗಳು 50 ವರ್ಷಗಳ ರಾಜತಾಂತ್ರಿಕ ಸಂಬಂಧಗಳನ್ನು ಪೂರ್ಣಗೊಳಿಸಿದ ಸಂದರ್ಭದಲ್ಲಿ ಬಾಂಗ್ಲಾದೇಶದ ವಿದ್ಯಾರ್ಥಿಗಳಿಗೆ ಸುವರ್ಣ ಮಹೋತ್ಸವ ವಿದ್ಯಾರ್ಥಿವೇತನವನ್ನೂ ಅವರು ಘೋಷಿಸಿದರು. ಬಂಗಬಂಧು ಅವರಿಗೆ ಗೌರವ ಸಲ್ಲಿಸಲು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪ್ರಧಾನಮಂತ್ರಿ ಕಪ್ಪು ಖಾದಿ ಮುಜೀಬ್ ಜಾಕೆಟ್ ಧರಿಸಿದ್ದರು. ಮುಜೀಬ್ ಜಾಕೆಟ್ ಪುರುಷರಿಗೆ ಅನುಗುಣವಾದ ಜಾಕೆಟ್ ಆಗಿದೆ, ಇದನ್ನು ತೋಳಿಲ್ಲದೆ, ಕುತ್ತಿಗೆವರೆಗಿನ, ಕೆಳಭಾಗದಲ್ಲಿ ಎರಡು ಜೇಬುಗಳನ್ನೊಳಗೊಂಡ ವಿನ್ಯಾಸವನ್ನು ಇದು ಹೊಂದಿದೆ. ಖಾದಿ ಗ್ರಾಮೋದ್ಯೋಗವು ಈ ಕಾರ್ಯಕ್ರಮಕ್ಕಾಗಿ 100ಕ್ಕೂ ಹೆಚ್ಚು ಮುಜಿಬ್ ಜಾಕೆಟ್ ಗಳನ್ನು ಢಾಕಾಗೆ ಕಳುಹಿಸಿದೆ.

**ಬಾಂಗ್ಲಾದೇಶದ ನಾಗರಿಕರ ಆರೋಗ್ಯದ ಕಾಳಜಿ**

ಈ ಭೇಟಿಯ ವೇಳೆ, ಪ್ರಧಾನಮಂತ್ರಿಯವರು ಅಲ್ಪಸಂಖ್ಯಾತ ಸಮುದಾಯದ ಪ್ರತಿನಿಧಿಗಳೂ ಸೇರಿದಂತೆ ಸಮುದಾಯದ

# ವಿಶ್ವಾಸದ ಪಥ, ಬಾಂಧವ್ಯದ ಬಲವರ್ಧನೆ



**ರಕ್ಷಣಾ ವಲಯದಲ್ಲಿ ಸಹಕಾರ**

2020ರಿಂದ ಉಭಯ ದೇಶಗಳ ನಡುವೆ ಉನ್ನತ ಮಟ್ಟದ ಸಹಕಾರವಿದೆ. ತರಬೇತಿ ಪಡೆದ ಕುದುರೆಗಳು ಮತ್ತು ನಾಯಿಗಳನ್ನು ಭಾರತೀಯ ಸೇನೆ ಬಾಂಗ್ಲಾದೇಶದ ಸೈನ್ಯಕ್ಕೆ ಉಡುಗೊರೆಯಾಗಿ ನೀಡಿದೆ. ಬಾಂಗ್ಲಾದೇಶದ ವಿಜಯ್ ದಿವಸ್ ಸಂದರ್ಭದಲ್ಲಿ ಮುಕ್ತಿಜೋಧದ ಕುಟುಂಬದ ಸದಸ್ಯರಿಗೆ ವಿದ್ಯಾರ್ಥಿವೇತನ ಮತ್ತು ಆರೋಗ್ಯ ಯೋಜನೆ ಪ್ರಾರಂಭಿಸಲಾಗಿದೆ.

## ಭದ್ರತೆ ಮತ್ತು ಗಡಿ ನಿರ್ವಹಣೆ

- ಭಾರತ ಮತ್ತು ಬಾಂಗ್ಲಾದೇಶ ಅತಿ ಉದ್ದದ 4,096.7 ಕಿ.ಮೀ. ಭೂ ಗಡಿಯನ್ನು ಹೊಂದಿದೆ. ಈ ಪೈಕಿ 1116.2 ಕಿ.ಮೀ. ಜಲ ಗಡಿಯಾಗಿದೆ.
- ಬಾಂಗ್ಲಾದೇಶದ ಉನ್ನತ ನಾಯಕತ್ವ, ಭಾರತದ ವಿರುದ್ಧ ತನ್ನ ನೆಲವನ್ನು ಬಳಸಲು ಅವಕಾಶ ನೀಡುವುದಿಲ್ಲ ಎಂದು ಭಾರತಕ್ಕೆ ಭರವಸೆ ನೀಡಿದೆ.
- 2015ರ ಜೂನ್ ನಲ್ಲಿ, ಬಾಂಗ್ಲಾದೇಶಕ್ಕೆ ಪ್ರಧಾನಮಂತ್ರಿಯವರ ಭೇಟಿ ವೇಳೆ, ಎರಡೂ ದೇಶಗಳ ನಡುವೆ ಗಡಿ ಒಪ್ಪಂದಕ್ಕೆ ಸಹಿ ಹಾಕಲಾಗಿದೆ.
- ವಿಶ್ವಸಂಸ್ಥೆಯ ನ್ಯಾಯಾಧಿಕರಣ 2014ರ ಜುಲೈ 7ರಲ್ಲಿ ಉಭಯ ದೇಶಗಳ ನಡುವಿನ ಕಡಲ ಗಡಿ ಇತ್ಯರ್ಥವು, ಬಂಗಾಳಕೊಲ್ಲಿಯ ಈ ಭಾಗದಲ್ಲಿ ಆರ್ಥಿಕ ಅಭಿವೃದ್ಧಿಗೆ ದಾರಿ ಮಾಡಿಕೊಟ್ಟಿದೆ, ಇದು ಎರಡೂ ದೇಶಗಳಿಗೆ ಪ್ರಯೋಜನಕಾರಿಯಾಗಿದೆ.
- ವಲಯದಲ್ಲಿ ಹರಿಯುವ ಸುಮಾರು 54 ನದಿಗಳ ನೀರನ್ನು ಎರಡೂ ದೇಶಗಳು ಹಂಚಿಕೊಂಡಿವೆ. ಅದರ ಗರಿಷ್ಠ ಪ್ರಯೋಜನ ಪಡೆಯಲು ಮತ್ತು ಸಂಪರ್ಕಕ್ಕಾಗಿ 1972ರ ಜೂನ್ ನಿಂದ ದ್ವಿಪಕ್ಷೀಯ ಜಂಟಿ ನದಿ ಆಯೋಗ ಕಾರ್ಯನಿರ್ವಹಿಸುತ್ತಿದೆ. ಗಂಗಾ ನದಿ ನೀರು ಒಪ್ಪಂದ ತೃಪ್ತಿದಾಯಕವಾಗಿ ಕಾರ್ಯನಿರ್ವಹಿಸುತ್ತಿದೆ.

## ಸಂಪರ್ಕ

- ಎರಡೂ ದೇಶದ ಪ್ರಧಾನಮಂತ್ರಿಯವರು ಬಾಂಗ್ಲಾದೇಶದ ಚಿಲ್ಹಾತಿ ಮತ್ತು ಭಾರತದ ಹಲ್ದಿಬರಿ ನಡುವೆ ರೈಲು ಸಂಪರ್ಕವನ್ನು 2020ರ ಸೆಪ್ಟೆಂಬರ್ 17ರಂದು ಉದ್ಘಾಟಿಸಿದರು.
- ಮೈತ್ರಿ ಎಕ್ಸ್ ಪ್ರೆಸ್ ಮತ್ತು ಬಂಧನ್ ಎಕ್ಸ್ ಪ್ರೆಸ್ - ಎರಡು ಪ್ರಯಾಣಿಕರ ರೈಲುಗಳ ಆವರ್ತನೆ ವಿಸ್ತರಿಸಲಾಗಿದೆ.
- ಢಾಕಾ - ಸಿಲ್ಗುರಿ - ಗ್ಯಾಂಗ್ಟೋಕ್ - ಢಾಕಾ ಮತ್ತು ಢಾಕಾ - ಸಿಲ್ಗುರಿ - ಡಾರ್ಜಲಿಂಗ್ - ಢಾಕಾ ಬಸ್ ಸೇವೆಯನ್ನು 2019ರ ಅಕ್ಟೋಬರ್ ನಿಂದ ಆರಂಭಿಸಲಾಗಿದೆ.
- ತ್ರಿಪುರ ಮತ್ತು ಬಾಂಗ್ಲಾದೇಶದಲ್ಲಿನ ರಾಮ್ ಗಢ ಸಂಪರ್ಕಿಸುವ ಮೈತ್ರಿ ಸೇತುವನ್ನು 2021ರ ಮಾರ್ಚ್ 9ರಂದು ಉದ್ಘಾಟಿಸಲಾಗಿದೆ.

## ಆರ್ಥಿಕ –ವಾಣಿಜ್ಯ

- ದಕ್ಷಿಣ ಏಷ್ಯಾದಲ್ಲಿ ಬಾಂಗ್ಲಾದೇಶ ಭಾರತದ ದೊಡ್ಡ ವಾಣಿಜ್ಯ ಪಾಲುದಾರ ರಾಷ್ಟ್ರವಾಗಿದೆ ಮತ್ತು ಭಾರತವು ಬಾಂಗ್ಲಾದೇಶಕ್ಕೆ ಎರಡನೇ ಅತಿ ದೊಡ್ಡ ವಾಣಿಜ್ಯ ಪಾಲುದಾರನಾಗಿದೆ.
- ಬಾಂಗ್ಲಾದೇಶಕ್ಕೆ ಭಾರತದ ರಫ್ತು ಕಳೆದ ಕೆಲವು ವರ್ಷಗಳಲ್ಲಿ ಮೂರು ಪಟ್ಟು ಹೆಚ್ಚಾಗಿದೆ. 20-2019ನೇ ವರ್ಷದಲ್ಲಿ ರಫ್ತು 8.2 ಶತಕೋಟಿ ಅಮೆರಿಕನ್ ಡಾಲರ್ ತಲುಪಿದ್ದರೆ, ಆಮದು 1.26 ಶತಕೋಟಿ ಅಮೆರಿಕನ್ ಡಾಲರ್ ಆಗಿದೆ.
- ಇಂಧನ ವಲಯದಲ್ಲಿ ಎರಡೂ ದೇಶಗಳ ನಡುವೆ ಹೊಸ ಗುರುತು ಸ್ಥಾಪಿತವಾಗಿದೆ. ಬಾಂಗ್ಲಾದೇಶ 1,160 ಮೆ.ವ್ಯಾ. ವಿದ್ಯುತ್ ಅನ್ನು ಭಾರತಕ್ಕೆ ರಫ್ತು ಮಾಡುತ್ತಿದೆ.

## ಕೌಶಲ ಮತ್ತು ತರಬೇತಿ

- 2019ರಿಂದ ಬಾಂಗ್ಲಾದೇಶದ 1,800ಕ್ಕೂ ಹೆಚ್ಚು ಆಡಳಿತಾಧಿಕಾರಿಗಳಿಗೆ ಮುಸ್ಸೂರಿಯ ರಾಷ್ಟ್ರೀಯ ಉತ್ತಮ ಆಡಳಿತ ಕೇಂದ್ರದಲ್ಲಿ ತರಬೇತಿ ನೀಡಲಾಗಿದೆ.
- ಪೊಲೀಸ್ ಅಧಿಕಾರಿಗಳ ಜೊತೆಗೆ, ಬಾಂಗ್ಲಾದೇಶದ ಸುಮಾರು 1,500 ನ್ಯಾಯಾಂಗ ಸೇವಾ ಅಧಿಕಾರಿಗಳಿಗೆ 2017ರಿಂದ ಭಾರತದಲ್ಲಿ ತರಬೇತಿ ನೀಡಲಾಗಿದೆ. ಭಾರತದಲ್ಲಿ ಕಲಿಯುತ್ತಿರುವ ಬಾಂಗ್ಲಾದೇಶದ ವಿದ್ಯಾರ್ಥಿಗಳಿಗೆ ಸುಮಾರು 200 ವಿದ್ಯಾರ್ಥಿವೇತನವನ್ನು ಉನ್ನತ ಶಿಕ್ಷಣಕ್ಕಾಗಿ ನೀಡಲಾಗುತ್ತದೆ.

ಮತ್ತು ರಾಜಕೀಯ ನಾಯಕರು ಹಾಗೂ ಬಾಂಗ್ಲಾದೇಶ ಸ್ವಾತಂತ್ರ್ಯ ಸಮರದ ಮುಕ್ತಿಜೋಧಾ ಅವರನ್ನು ಭೇಟಿ ಮಾಡಿದರು.

ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಪ್ರಕಾರ, ಪ್ರಧಾನಮಂತ್ರಿಯವರು ಆಡಳಿತಾರೂಢ ಮಹಾ ಮೈತ್ರಿಕೂಟದ ಮುಖಂಡರನ್ನು ಭೇಟಿಯಾದರು, ಇದರಲ್ಲಿ ದ್ವಿಪಕ್ಷೀಯ ಪ್ರಾಮುಖ್ಯತೆಯ ವಿವಿಧ ವಿಷಯಗಳ ಬಗ್ಗೆ ಚರ್ಚಿಸಲಾಯಿತು. ಈ ಭೇಟಿಯ ಸಮಯದಲ್ಲಿ ಬೊಹ್ರಾ ಸಮುದಾಯದ ನಾಯಕರು ಢಾಕಾದಲ್ಲಿ ಪ್ರಧಾನಮಂತ್ರಿಯವರನ್ನು ಭೇಟಿಯಾದರು ಮತ್ತು ಕರೋನಾ ಲಸಿಕೆ ನೀಡಿದ್ದಕ್ಕಾಗಿ ಕೃತಜ್ಞತೆ ಸಲ್ಲಿಸಿದರು. ಕರೋನಾ ಲಸಿಕೆಯ 12 ಲಕ್ಷ ಡೋಸ್ ಅನ್ನು ಪ್ರಧಾನಮಂತ್ರಿಯವರು ತಮ್ಮೊಂದಿಗೆ ತೆಗೆದುಕೊಂಡು ಹೋಗಿದ್ದರು, ಇದು ಬಾಂಧವ್ಯ ಮತ್ತು ಪಾಲುದಾರಿಕೆಯ ಸಂದೇಶವನ್ನು ಮಾತ್ರವಲ್ಲದೆ ಬಾಂಗ್ಲಾದೇಶದ ಸಾಮಾನ್ಯ ನಾಗರಿಕರ ಯೋಗಕ್ಷೇಮದ ಬಗ್ಗೆ ಇರುವ ಕಾಳಜಿಯನ್ನೂ ವ್ಯಕ್ತಪಡಿಸಿತು.

**ಸಹಕಾರ ಮತ್ತು ಮಾತುಕತೆಯೊಂದಿಗೆ ಬಾಂಧವ್ಯದ ಬಲವರ್ಧನೆ**

ಭಾರತ-ಬಾಂಗ್ಲಾದೇಶದ ಬಾಂಧವ್ಯ ಕೊರೊನಾ ಸಾಂಕ್ರಾಮಿಕದ ಸಂಕಷ್ಟದ ಸಮಯದಲ್ಲಿ ಕೂಡ ಚೈತನ್ಯದಾಯಕವಾಗಿತ್ತು. ಪ್ರಧಾನಮಂತ್ರಿ ನರೇಂದ್ರ ಮೋದಿ ಮತ್ತು ಬಾಂಗ್ಲಾದೇಶದ ಅವರ ಸಹವರ್ತಿ ಶೇಖ್ ಹಸೀನಾ ಅವರು ಹೊಸ ವರ್ಷದ ಸಂದರ್ಭದಲ್ಲಿ ಪರಸ್ಪರ ಶುಭ ಕೋರಿದ್ದರು.

ಇದಕ್ಕೂ ಮೊದಲು ಪ್ರಧಾನ ಮಂತ್ರಿಯವರು ಶೇಖ್ ಮುಜಿಬುರ್ ರೆಹಮಾನ್ ಅವರ ಜನ್ಮ ಶತಾಬ್ದಿ ಆಚರಣೆಯ ಅಂಗವಾಗಿ 2020ರ ಮಾರ್ಚ್ 17ರಂದು, ರಂಜಾನ್ ಗೆ ಏಪ್ರಿಲ್ 29ರಂದು ಮತ್ತು ಮೇ 25ರಂದು ಈದ್ ಅಂಗವಾಗಿ ವಿಡಿಯೋ ಕಾನ್ಫರೆನ್ಸ್ ಮೂಲಕ ಶುಭ ಕೋರಿದ್ದರು. 2020ರ ಡಿಸೆಂಬರ್ 17ರಂದು ಅವರು ದ್ವಿಪಕ್ಷೀಯ ಬಾಂಧವ್ಯದ ಬಗ್ಗೆ ಚರ್ಚಿಸಿದರು ಮತ್ತು ಹೈಡ್ರೋಕಾರ್ಬನ್ಸ್, ಕೃಷಿ, ವಾಣಿಜ್ಯ, ಅಭಿವೃದ್ಧಿ ಯೋಜನೆಗಳು ಮತ್ತು ಪರಂಪರೆಯ ಸಂರಕ್ಷಣೆ ಕುರಿತ ಒಪ್ಪಂದಗಳಿಗೆ ಅಂಕಿತ ಹಾಕಲಾಗಿತ್ತು. ಭಾರತ ಸರ್ಕಾರ ಹೊರತಂದ ಬಂಗಬಂಧು ಸ್ಮರಣಾರ್ಥ ಅಂಚೆ ಚೀಟಿಯನ್ನು ಇಬ್ಬರೂ ಪ್ರಧಾನಮಂತ್ರಿಯವರು ಬಿಡುಗಡೆ ಮಾಡಿದರು. ಎರಡೂ ದೇಶಗಳ ವಿದೇಶಾಂಗ ವ್ಯವಹಾರಗಳ ಖಾತೆ ಸಚಿವರುಗಳು ಬಾಂಗ್ಲಾದೇಶದ ಸರ್ಕಾರ ಗಾಂಧೀಜಿ ಅವರ 150ನೇ ಜಯಂತಿಯ ಅಂಗವಾಗಿ ಹೊರತಂದ ಅಂಚೆ ಚೀಟಿಯನ್ನು ಬಿಡುಗಡೆ ಮಾಡಿದರು. ಬಾಂಗ್ಲಾದೇಶದ ಅಧ್ಯಕ್ಷ ಮೊಹಮದ್ ಅಬ್ದುಲ್ಲಾ ಹಮೀದ್ ಅವರು 2019ರ ಮೇ 30ರಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಪ್ರಮಾಣ ವಚನ ಸಮಾರಂಭದಲ್ಲಿ ಭಾಗಿಯಾಗಿದ್ದರು. ಶೇಖ್ ಹಸೀನಾ ಅವರು 2019ರ ಅಕ್ಟೋಬರ್ 3ರಿಂದ 6ರವರೆಗೆ ಭಾರತಕ್ಕೆ ಅಧಿಕೃತ ಭೇಟಿ ನೀಡಿದ್ದರು. ಅವರು 2019ರ ನವೆಂಬರ್ 22ರಂದು ಭಾರತ ಮತ್ತು ಬಾಂಗ್ಲಾದೇಶ ತಂಡಗಳ ನಡುವಿನ ಗುಲಾಬಿ (ಪಿಂಕ್) ಬಣ್ಣದ ಚೆಂಡಿನ ಕ್ರಿಕೆಟ್ ಟೆಸ್ಟ್ ಪಂದ್ಯ ವೀಕ್ಷಿಸಲು ಕೋಲ್ಕತ್ತಾಗೂ ಭೇಟಿ ನೀಡಿದ್ದರು. ವಿಶ್ವಸಂಸ್ಥೆಯ ಮಹಾಧಿವೇಶನದ ವೇಳೆ, 2019ರ ಸೆಪ್ಟೆಂಬರ್ ನಲ್ಲಿ ಎರಡೂ ದೇಶಗಳ ಪ್ರಧಾನಮಂತ್ರಿಯವರು ಮಹಾತ್ಮಾ ಗಾಂಧೀ ಅವರ 150ನೇ ಜಯಂತಿ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ಎರಡೂ ದೇಶಗಳು ಪ್ರವಾಸೋದ್ಯಮ, ಆರೋಗ್ಯ, ಶಿಕ್ಷಣ, ಅಣು ಇಂಧನ ಮತ್ತು ಐಟಿ ಸೇರಿದಂತೆ ಬಹು ಆಯಾಮದ ವಿವಿಧ ವಿಷಯಗಳ ಕುರಿತಂತೆ ನಿರಂತರವಾಗಿ ಚರ್ಚೆಯಲ್ಲಿ ನಿರತವಾಗಿವೆ.

**ಬಾಂಗ್ಲಾ ದೇಶದಲ್ಲಿ ಭಾರತೀಯ ಸಮುದಾಯ**

ಬಾಂಗ್ಲಾದೇಶದಲ್ಲಿ ಸುಮಾರು 10,000 ಭಾರತೀಯ ಸಮುದಾಯದವರಿದ್ದಾರೆ. ಇವರಲ್ಲಿ ಬಹುತೇಕ ಭಾರತೀಯ ಸಮುದಾಯದ ಜನರು ಸಿದ್ಧ ಉಡುಪು ವ್ಯಾಪಾರದಲ್ಲಿ ತೊಡಗಿದ್ದಾರೆ ಅಥವಾ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಉನ್ನತ ಹುದ್ದೆಯಲ್ಲಿದ್ದಾರೆ. ■

ಪ್ರಧಾನಮಂತ್ರಿಯವರ ಪೂರ್ಣ ಭಾಷಣ ಆಲಿಸಲು ಕ್ಯು.ಆರ್. ಕೋಡ್ ಸ್ಕ್ಯಾನ್ ಮಾಡಿ

**ಬಂಗಬಂಧು ಮತ್ತು ಸುಲ್ತಾನ್ ಖಬೂಸ್ ಅವರಿಗೆ ಗಾಂಧೀ ಶಾಂತಿ ಪ್ರಶಸ್ತಿ ಪ್ರದಾನ**

ಶತಮಾನೋತ್ಸವದ ಸಂಭ್ರಮಾಚರಣೆಯ ಸಂದರ್ಭದಲ್ಲಿ, ಬಾಂಗ್ಲಾದೇಶ ರಾಷ್ಟ್ರಪಿತ ಶೇಖ್ ಮುಜಿಬುರ್ ರೆಹಮಾನ್ ಅವರಿಗೆ 2020ನೇ ಸಾಲಿನ ಗಾಂಧಿ ಶಾಂತಿ ಪ್ರಶಸ್ತಿಯನ್ನು ಪ್ರಕಟಿಸಲಾಗಿದ್ದರೆ, ಘನತೆವೆತ್ತ ಓಮನ್ ದೊರೆ ಸುಲ್ತಾನ್ ಖಬೂಸ್ ಬಿನ್ ಸೈದ್ ಅಲ್ ಸೈದ್ ಅವರಿಗೆ 2019ರ ಸಾಲಿನ ಪ್ರಶಸ್ತಿಯನ್ನು ಮರಣೋತ್ತರವಾಗಿ ನೀಡಲಾಗಿದೆ.



**ಬಂಗಬಂಧು ಅವರ ಹೋರಾಟಕ್ಕೆ ಮನ್ನಣೆ**

ಶೇಖ್ ಮುಜಿಬುರ್ ರೆಹಮಾನ್ ಇಲ್ಲದೇ ಇದ್ದಿದ್ದರೆ, ಬಾಂಗ್ಲಾದೇಶ ಅಸ್ತಿತ್ವಕ್ಕೆ ಬರುತ್ತಿರಲಿಲ್ಲ ಎಂದು ಹೇಳಲಾಗುತ್ತದೆ. ಗಾಂಧೀಜಿಯವರ ಹಾದಿಯಲ್ಲಿ ನಡೆದು ದೇಶದಲ್ಲಿ ಸಾಮಾಜಿಕ ಮತ್ತು ರಾಜಕೀಯ ಬದಲಾವಣೆಯನ್ನು ತಂದಿದ್ದಕ್ಕಾಗಿ ಬಾಂಗ್ಲಾದೇಶದ ಜನರು ಅವರಿಗೆ ಬಂಗಬಂಧು ಎಂಬ ಬಿರುದನ್ನು ನೀಡಿದರು. ಬಾಂಗ್ಲಾದೇಶವು 'ಮುಜೀಬ್ ವರ್ಷ' ಆಚರಿಸುತ್ತಿರುವಾಗ, ಭಾರತವೂ ಸಹ ಗಾಂಧಿ ಶಾಂತಿ ಪ್ರಶಸ್ತಿಯನ್ನು ನೀಡುವ ಮೂಲಕ ಶೇಖ್ ಮುಜಿಬುರ್ ರೆಹಮಾನ್ ಅವರನ್ನು ಸ್ಮರಿಸಿ ತನ್ನ ಕೊಡುಗೆಯನ್ನು ನೀಡಿತು. 1995ರಿಂದ ಪ್ರತಿ ವರ್ಷ ಗಾಂಧಿ ಶಾಂತಿ ಪ್ರಶಸ್ತಿಯನ್ನು ಭಾರತ ಸರ್ಕಾರ ನೀಡುತ್ತಿದೆ. ಇದನ್ನು ಮಹಾತ್ಮಾ ಗಾಂಧಿಯವರ 125 ನೇ ಜನ್ಮದಿನದಂದು ಸ್ಥಾಪಿಸಲಾಯಿತು.

**ಸುಲ್ತಾನ್ ಖಬೂಸ್: ಭಾರತ-ಒಮನ್ ಬಾಂಧವ್ಯದ ಶಿಲ್ಪಿ**

ಘನತೆವೆತ್ತ ದೊರೆ ಸುಲ್ತಾನ್ ಖಬೂಸ್ ಬಿನ್ ಸೈದ್ ಅಲ್ ಸೈದ್ ದೂರದರ್ಶಿತ್ವದ ನಾಯಕರಾಗಿದ್ದು, ಅವರ ಅವಳಿ ನೀತಿಗಳಾದ



ಆಧುನೀಕರಣ ಮತ್ತು ಅಂತಾರಾಷ್ಟ್ರೀಯ ವ್ಯವಹಾರಗಳನ್ನು ನಿವಾರಿಸುವಲ್ಲಿನ ಮಧ್ಯಸ್ಥಿಕೆಗಾಗಿ ಅವರನ್ನು ಜಾಗತಿಕವಾಗಿ ಗುರುತಿಸಲಾಗಿದೆ. ಅವರು ಸಂಘರ್ಷ ಮತ್ತು ಪ್ರಾದೇಶಿಕ ವಿವಾದಗಳಿಗೆ ಶಾಂತಿಯುತ ಪರಿಹಾರ ಒದಗಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಸುಲ್ತಾನ್ ಖಬೂಸ್ ಅವರು ಭಾರತ ಮತ್ತು ಒಮನ್ ನಡುವಿನ ವಿಶೇಷ ಬಾಂಧವ್ಯದ ಶಿಲ್ಪಿಯಾಗಿದ್ದಾರೆ. ಅವರು ಭಾರತದಲ್ಲಿ ವಿದ್ಯಾಭ್ಯಾಸ ಮಾಡಿದ್ದು, ಭಾರತದೊಂದಿಗೆ ಸದಾ ವಿಶೇಷ ಬಾಂಧವ್ಯ ಇಟ್ಟುಕೊಂಡಿದ್ದರು. ಭಾರತ ಮತ್ತು ಓಮನ್ ಅವರ ನಾಯಕತ್ವದಲ್ಲಿ ವ್ಯೂಹಾತ್ಮಕ ಪಾಲುದಾರರಾದವು.



# ನಾಗರಿಕ ಸೇವಕರು ಸದಾ ರಾಷ್ಟ್ರದ ಸೇವೆಯಲ್ಲಿ

*"ನೀವು ಈ ದಾರಿಯನ್ನು ಕೇವಲ ಉದ್ಯೋಗ ಅಥವಾ ವೃತ್ತಿಭವಿಷ್ಯಕ್ಕಾಗಿ ಆಯ್ಕೆ ಮಾಡಿಕೊಂಡಿಲ್ಲ. 'ಸೇವಾ ಪರಮೋ ಧರ್ಮಃ' ಎಂಬ ಮಂತ್ರದಂತೆ ನೀವು ಸೇವೆ ಮಾಡಲು ಇಲ್ಲಿಗೆ ಬಂದಿದ್ದೀರಿ. ನಿಮ್ಮ ಪ್ರತಿಯೊಂದು ನಡೆಯೂ, ನಿಮ್ಮ ಪ್ರತಿ ಸಹಿಯೂ ಲಕ್ಷಾಂತರ ಜನರ ಬದುಕಿನ ಮೇಲೆ ಪ್ರಭಾವ ಬೀರುತ್ತದೆ. ನೀವು ಸದಾ ನಿಮ್ಮ ನಿರ್ಧಾರ ಹೇಗೆ ದೇಶದ ಮೇಲೆ ಪ್ರಭಾವ ಬೀರುತ್ತದೆ ಎಂಬುದನ್ನು ಚಿಂತಿಸಬೇಕು.*

— ಪ್ರಧಾನ ಮಂತ್ರಿ ನರೇಂದ್ರ ಮೋದಿ

**ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು ಭಾರತದ ಆಡಳಿತಶಾಹಿಗೆ "ಭಾರತದ ಉಕ್ಕಿನ ಚೌಕಟ್ಟು" ಎಂಬ ಪದವನ್ನು ನೀಡಿದ್ದು, ಸರ್ಕಾರದ ನೀತಿಗಳನ್ನು ಅನುಷ್ಠಾನ ಮಾಡುವಲ್ಲಿ ಅವರ ಮಹತ್ವವನ್ನು ಒತ್ತಿ ಹೇಳಿದ್ದರು. 1947ರ ಏಪ್ರಿಲ್ 21, ರಂದು ದೆಹಲಿಯ ಮೆಟ್‌ಕಾಫ್ ಹೌಸ್ ನಲ್ಲಿ ಆಡಳಿತ ಸೇವಾ ಅಧಿಕಾರಿಗಳ ಮೊದಲ ತಂಡವನ್ನು ಉದ್ದೇಶಿಸಿ ಅವರು ಈ ಅಭಿಪ್ರಾಯ ವ್ಯಕ್ತಪಡಿಸಿದ್ದರು.**

ಪ್ರಕೃತಿ ವಿಕೋಪಗಳಿಂದ ಹಾನಿಗೊಳಗಾಗುವ ಬೆಳೆಗೆ ಸೂಕ್ತ ಪರಿಹಾರ ಒದಗಿಸಲು ಪ್ರಧಾನಮಂತ್ರಿ ಬೆಳೆ ವಿಮೆ ಯೋಜನೆಯನ್ನು ಸರ್ಕಾರ ಆರಂಭಿಸಿದೆ. ಈ ಯೋಜನೆಯನ್ನು ಅನುಷ್ಠಾನ ಮಾಡುವ ಜವಾಬ್ದಾರಿ ಸ್ಥಳೀಯ ಆಡಳಿತದ್ದಾಗಿದೆ, ಪಶ್ಚಿಮ ತ್ರಿಪುರಾ ಜಿಲ್ಲಾಡಳಿತ ತನ್ನ ಕಾರ್ಯವನ್ನು ನಿರೀಕ್ಷೆಗೂ ಮೀರಿ ಮಾಡಿದೆ. ವಿದ್ಯುನ್ಮಾನ ಮತ್ತು ಸಾಮಾಜಿಕ ಮಾಧ್ಯಮಗಳ ಮೂಲಕ ಎಲ್ಲ ಅಗತ್ಯ ಮಾಹಿತಿಯನ್ನು ರೈತರಿಗೆ ಲಭ್ಯವಾಗುವಂತೆ ಮಾಡಲಾಗಿದೆ. ಅದೇ ರೀತಿ, ಹರಿಯಾಣದ ಸೋನಿಪಟ್ ನ ಉದಾಹರಣೆ ಶ್ಲಾಘನಾರ್ಹವಾಗಿದೆ. ಜಿಲ್ಲಾಡಳಿತ ನಡೆಸುತ್ತಿರುವ ಸಕ್ಷಂ ಯುವ ಯೋಜನೆಯ ಫಲಶ್ರುತಿಯಾಗಿ ಆನ್ ಲೈನ್‌ನಲ್ಲಿ ತಮ್ಮ ವಿದ್ಯುತ್ ಬಿಲ್ ಪಾವತಿಸುವವರ ಸಂಖ್ಯೆ ಏಕಾಏಕಿ ಶೇ.88ಕ್ಕೆ ಏರಿದೆ. ಯೋಜನೆಯನ್ನು ಪ್ರಾರಂಭಿಸುವ ಮೊದಲು ಅದು ಕೇವಲ ಶೇ. 4ರಷ್ಟಿತ್ತು. ಡಿಜಿಟಲ್ ಪಾವತಿಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಜಿಲ್ಲಾಡಳಿತ 10 ಲಕ್ಷಕ್ಕೂ ಹೆಚ್ಚು ಎಸ್.ಎಂ.ಎಸ್ ಸಂದೇಶಗಳನ್ನು ಕಳುಹಿಸಿದೆ. ವಿಡಿಯೋ ಮತ್ತು ಸಾಮಾಜಿಕ ಮಾಧ್ಯಮದ ಮೂಲಕ ಅದು ಹಲವಾರು ಅಭಿಯಾನಗಳನ್ನೂ ನಡೆಸಿದೆ. ಅವರ ಅನುಕರಣೀಯ ಸೇವೆಗಳನ್ನು ಗುರುತಿಸಿ, ಈ ಎರಡೂ ಜಿಲ್ಲಾಡಳಿತಗಳಿಗೆ 2018ರಲ್ಲಿ ಸಾರ್ವಜನಿಕ ಆಡಳಿತದಲ್ಲಿನ ಶ್ರೇಷ್ಠತೆಗಾಗಿ ಪ್ರಧಾನಮಂತ್ರಿಯವರ ಪ್ರಶಸ್ತಿ ನೀಡಲಾಗಿದೆ.

ವಾಸ್ತವವಾಗಿ, ಶ್ರೀಸಾಮಾನ್ಯರ ಅನುಕೂಲಕ್ಕಾಗಿ ಸರ್ಕಾರ ಪ್ರಾರಂಭಿಸಿದ ಯೋಜನೆಗಳನ್ನು ಅನುಷ್ಠಾನಗೊಳಿಸುವುದು ಆಡಳಿತ ಪ್ರಾಧಿಕಾರಗಳ ಜವಾಬ್ದಾರಿಯಾಗಿರುತ್ತದೆ. ನಾಗರಿಕ ಸೇವಾ ಅಧಿಕಾರಿಗಳನ್ನುದ್ದೇಶಿಸಿ ಮಾತನಾಡಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, "ಅಧಿಕಾರಶಾಹಿ ಮತ್ತು ವ್ಯವಸ್ಥೆಯಲ್ಲಿನ ನಕಾರಾತ್ಮಕ ಮನೋಭಾವಗಳನ್ನು ಬದಲಾಯಿಸುವ ಸವಾಲನ್ನು ನೀವು ಎದುರಿಸುತ್ತಿರುವಿರಿ. ಏಕೆ ಮಾಡಬೇಕು ಎಂಬ ಈ ಪದಗಳು ನಕಾರಾತ್ಮಕ ಅರ್ಥವನ್ನು ಹೊಂದಿವೆ. ನಮ್ಮ ಹೆಚ್ಚಿನ ಅಧಿಕಾರಿಗಳು ಕಠಿಣ ಪರಿಶ್ರಮ ಮತ್ತು ಸ್ವೀಕಾರಾರ್ಹರು; ಆದರೂ ಇನ್ನೂ, ಅಧಿಕಾರಶಾಹಿ ಮತ್ತು ವ್ಯವಸ್ಥೆಯ ಸುತ್ತ ನಕಾರಾತ್ಮಕ ಮನೋಭಾವ ಇದೆ."

ಈ ಚಿತ್ರಣವನ್ನು ಬದಲಾಯಿಸಲು 2014 ರಿಂದ ಪ್ರಮುಖ ಪ್ರಯತ್ನ ನಡೆಸಲಾಗಿದೆ. ಇದರ ಪರಿಣಾಮವಾಗಿ, ಹೆಚ್ಚಿನ ಸಂಖ್ಯೆಯ ಸರ್ಕಾರಿ ಯೋಜನೆಗಳು ಶ್ರೀಸಾಮಾನ್ಯರಿಗೆ ಸುಲಭವಾಗಿ ಲಭ್ಯವಾಗುತ್ತಿವೆ. ಅಧಿಕಾರಿಶಾಹಿಗಳ ಮನೋಸ್ಥೈರ್ಯವನ್ನು ಹೆಚ್ಚಿಸುವ ಸಲುವಾಗಿ, ಸಾರ್ವಜನಿಕ ಆಡಳಿತದಲ್ಲಿನ ಶ್ರೇಷ್ಠತೆಗಾಗಿ ಪ್ರಧಾನಮಂತ್ರಿಯವರ ಪ್ರಶಸ್ತಿಯನ್ನು ಪ್ರಾರಂಭಿಸಲಾಗಿದೆ, ಇದನ್ನು ಸಾರ್ವಜನಿಕ ಸೇವೆಯಲ್ಲಿ ಉತ್ಸಾಹದಿಂದ ಕೆಲಸ ಮಾಡುವವರಿಗೆ ನಾಗರಿಕ ಸೇವಾ ದಿನದಂದು ನೀಡಲಾಗುತ್ತಿದೆ.



“

*ಆಡಳಿತಶಾಹಿಯು ಸರ್ಕಾರದ ಅತ್ಯಂತ ನೇರ 'ಮುಖ'ವಾಗಿರುತ್ತದೆ, ಕಾರಣ ನಾಗರಿಕರು ವಿವಿಧ ಸೇವೆಗಳನ್ನು ಪಡೆಯಲು ಇದರೊಂದಿಗೆ ಮುಖಾಮುಖಿಯಾಗಬೇಕಾಗುತ್ತದೆ. ಸರ್ಕಾರದ ಚಿತ್ರಣವು ಸಾರ್ವಜನಿಕರ ಅಗತ್ಯಗಳು ಮತ್ತು ಆಕಾಂಕ್ಷೆಗಳನ್ನು ಹೇಗೆ ಪೂರೈಸುತ್ತದೆ ಎಂಬ ಮನೋಭಾವದ ಮೇಲೆ ಅವಲಂಬಿಸಿರುತ್ತದೆ.* - ***ಸರ್ದಾರ್ ವಲ್ಲಭಭಾಯಿ ಪಟೇಲ್***





## ನಾಗರಿಕ ಸೇವೆಯ ಇತಿಹಾಸ

'ನಾಗರಿಕ ಸೇವೆ' ಎಂಬ ಪದವನ್ನು ಬ್ರಿಟಿಷರ ಕಾಲದಲ್ಲಿ ಬಳಸಲಾಯಿತು. ವಾರೆನ್ ಹೇಸ್ಟಿಂಗ್ಸ್ ಇದಕ್ಕೆ ಅಡಿಪಾಯ ಹಾಕಿದರೆ, ಚಾರ್ಲ್ಸ್ ಕಾರ್ನ್‌ವಾಲಿಸ್ ಸುಧಾರಣೆಗಳನ್ನು ಮಾಡಿದರು. ಆಡಳಿತ ವ್ಯವಸ್ಥೆಯನ್ನು ನಿರ್ವಹಿಸುವ ಅಧಿಕಾರಶಾಹಿಯನ್ನು ಬ್ರಿಟಿಷ್ ರಾಜ್ ನಿಂದ ಮುಕ್ತಗೊಳಿಸಲಾಯಿತು ಮತ್ತು ಸರ್ದಾರ್ ವಲ್ಲಭಭಾಯ್ ಪಟೇಲ್ ಅವರು ಭಾರತೀಯ ನಾಗರಿಕ ಸೇವೆಗಳ ಬದಲಿಗೆ ಭಾರತೀಯ ಆಡಳಿತ ಸೇವೆಗಳನ್ನು ರೂಪಿಸಿದರು.

### ರಾಷ್ಟ್ರೀಯ ಸೇವಾ ದಿನ ಆಚರಣೆಯ ಉದ್ದೇಶ

- ನಾಗರಿಕ ಸೇವಾ ಅಧಿಕಾರಿಗಳ ಕಾರ್ಯ ಮತ್ತು ಪ್ರಯತ್ನಗಳನ್ನು ಪ್ರೇರೇಪಿಸುವುದು ಮತ್ತು ಪ್ರಶಂಸಿಸುವುದು ಇದರ ಮುಖ್ಯ ಉದ್ದೇಶ. ನಾಗರಿಕ ಸೇವೆಗಳ ಅಡಿಯಲ್ಲಿ ವಿವಿಧ ಇಲಾಖೆಗಳ ಕಾರ್ಯಗಳನ್ನು ಮೌಲ್ಯಮಾಪನ ಮಾಡಲು ಕೇಂದ್ರ ಸರ್ಕಾರ ಈ ಸಂದರ್ಭವನ್ನು ಬಳಸುತ್ತದೆ.
- ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರವು ಅತ್ಯುತ್ತಮವಾಗಿ ಕೆಲಸ ಮಾಡುವ ವ್ಯಕ್ತಿಗಳು ಮತ್ತು ಗುಂಪುಗಳಿಗೆ ಪ್ರಶಸ್ತಿ ನೀಡುತ್ತದೆ. ಈ ದಿನ, ಕೇಂದ್ರ ಮತ್ತು ರಾಜ್ಯ ಸರ್ಕಾರಿ ಅಧಿಕಾರಿಗಳನ್ನು ಸಾರ್ವಜನಿಕ ಆಡಳಿತ ಕ್ಷೇತ್ರದಲ್ಲಿ ಮಾಡಿದ ಅಸಾಧಾರಣ ಸೇವೆಗಳಿಗಾಗಿ ಭಾರತದ ಪ್ರಧಾನಮಂತ್ರಿಯವರು ಗೌರವಿಸುತ್ತಾರೆ.
- ಪಾತ್ರ ಆಧಾರಿತ ವಿಧಾನಕ್ಕೆ ಸರ್ಕಾರ ಹೆಚ್ಚಿನ ಒತ್ತು ನೀಡಿದೆ. ಇದರ ಫಲಿತಾಂಶಗಳು ಸಹ ಗೋಚರಿಸುತ್ತಿವೆ. ನಾಗರಿಕ ಸೇವೆಗಳಲ್ಲಿ ಲಭ್ಯತೆ ಮತ್ತು ಸಾಮರ್ಥ್ಯವರ್ಧನೆಗಾಗಿ ಹೊಸ ಪರಿಸರ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲಾಗಿದೆ.

### ಪ್ರಶಸ್ತಿಗಳಲ್ಲಿ ಆಮೂಲಾಗ್ರ ಬದಲಾವಣೆ

ಈಗ, ಪ್ರಮುಖ ಘಟನೆಗಳು ಮತ್ತು ನಾವೀನ್ಯತೆಗಳ ವಿಭಾಗಗಳಲ್ಲಿ ಪ್ರಶಸ್ತಿಗಳ ಅವಕಾಶವೂ ಇದೆ. ಪ್ರಧಾನಮಂತ್ರಿ ಬೆಳೆ ವಿಮೆ ಯೋಜನೆ, ದೀನದಯಾಳ್ ಉಪಾಧ್ಯಾಯ ಕೌಶಲ ಯೋಜನೆ, ನಮಾಮಿ ಗಂಗೆ ಯೋಜನೆ, ಪ್ರಧಾನಮಂತ್ರಿ ವಸತಿ ಯೋಜನೆ ಮತ್ತು ಡಿಜಿಟಲ್ ಪಾವತಿಗಳಂತಹ ಆದ್ಯತೆಯ ಕಾರ್ಯಕ್ರಮಗಳಿಗೂ ಪ್ರಶಸ್ತಿಗಳನ್ನು ನೀಡಲಾಗಿದೆ. ಈ ಪ್ರಮುಖ ಕಾರ್ಯಕ್ರಮಗಳು ನವ ಭಾರತಕ್ಕೆ ಬಹಳ ಮುಖ್ಯವಾದುದಾಗಿವೆ. ನವ ಭಾರತದ ಕನಸುಗಳನ್ನು ಈಡೇರಿಸಲು ಯಾವ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ ಎಂಬುದು ಬಹಳ ಮುಖ್ಯ.

ನಾಗರಿಕ ಸೇವೆಗಳ ದಿನವನ್ನು ಹಲವು ವರ್ಷಗಳಿಂದ ಆಚರಿಸಲಾಗಿದ್ದರೂ, 2014ರಿಂದ ಅದರ ಸ್ವರೂಪದಲ್ಲಿ ದೊಡ್ಡ ಬದಲಾವಣೆಯಾಗಿದೆ. ಈಗ, ಇದು ಭಾರತದ ಶೈಕ್ಷಣಿಕ ದಿನಚರಿಯ ಒಂದು ಪ್ರಮುಖ ದಿನವಾಗಿದೆ. ಈ ಸಂದರ್ಭದಲ್ಲಿ, ಹಲವಾರು ಅಧಿವೇಶನಗಳಲ್ಲಿ ವಿವಿಧ ವಿಷಯಗಳ ಕುರಿತು ಸುದೀರ್ಘ ಚರ್ಚೆಗಳು ನಡೆಯುತ್ತವೆ. ಅಂತೆಯೇ, ಪ್ರಶಸ್ತಿಗಳ ಪ್ರವರ್ಗವನ್ನೂ ಬದಲಾಯಿಸಲಾಗಿದೆ.

ಈ ಹಿಂದೆ ಒಬ್ಬ ಅಧಿಕಾರಿಯನ್ನು ಅವರ ಸಮರ್ಥ್ಯದ ಆಧಾರದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿತ್ತು, ಆದರೆ ಈಗ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯ ಆಧಾರದಲ್ಲಿ ಕೂಡ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ. ತಮ್ಮ ಸಲಹೆಗಳನ್ನು ಕಳುಹಿಸುವ ಜಿಲ್ಲೆಗಳ ಸಂಖ್ಯೆ 2016ರಲ್ಲಿ ಕೇವಲ 74 ಮಾತ್ರ ಆಗಿತ್ತು. ಈ ಸಂಖ್ಯೆ 2017ರಲ್ಲಿ 599 ಜಿಲ್ಲೆಗಳಿಗೆ ಏರಿತು ಮತ್ತು 2018ರಲ್ಲಿ 643 ಜಿಲ್ಲೆಗಳಿಗೆ ಹೆಚ್ಚಿತು. ಈ ಅಂಶದಿಂದ ಸಕಾರಾತ್ಮಕ ಬದಲಾವಣೆಗಳನ್ನು ಅಳೆಯಬಹುದು. ನಾವು ಸಲಹೆಗಳ ಸಂಖ್ಯೆಯ ಬಗ್ಗೆ ಮಾತನಾಡಿದ್ದೇವೆ, ನಂತರ ಅಂಕಿ ಅಂಶವೂ ಅಸಾಧಾರಣವಾಗಿದೆ. 2017ರಲ್ಲಿ, 599 ಜಿಲ್ಲೆಗಳಿಂದ 2345 ಸಲಹೆಗಳು ಬಂದಿದ್ದವು, 2018 ರಲ್ಲಿ 643 ಜಿಲ್ಲೆಗಳಿಂದ 3009 ಪ್ರಸ್ತಾಪಗಳಿಗೆ ಏರಿತು. ಮೂರನೇ ಒಂದು ಭಾಗದಷ್ಟು ಪ್ರಸ್ತಾಪಗಳು ನಾವೀನ್ಯತೆ ವಿಭಾಗದಲ್ಲೇ ಬಂದಿದ್ದವು. 2020ರಲ್ಲಿ ದೇಶದ ಒಟ್ಟು 736 ಜಿಲ್ಲೆಗಳ ಪೈಕಿ 702 ಜಿಲ್ಲೆಗಳು ಈ ಕಸರತ್ತಿನಲ್ಲಿ ಭಾಗವಹಿಸಿದ್ದು ಕಾರ್ಯಕ್ರಮದ ಯಶಸ್ಸು ಸ್ಪಷ್ಟವಾಗುತ್ತದೆ. ■

# ಪರಿಸರ ಮತ್ತು ಜೀವ ಉಳಿಸಲು ಉದಾತ್ತ ಉಪಕ್ರಮ

ಸ್ವಚ್ಛ ಪರಿಸರವು ಮಾನವ ಜೀವನದಲ್ಲಿ ತನ್ನದೇ ಆದ ಮಹತ್ವವನ್ನು ಹೊಂದಿದೆ. ಹೀಗಾಗಿ ಚೌಕಾಶಿಯ ನಡುವೆಯೂ ಪರಿಸರ ಮತ್ತು ಜೀವವನ್ನು ಉಳಿಸುವುದು ಮುಖ್ಯವಾಗುತ್ತದೆ. ರಾಘವೇಂದ್ರ ವಾರಾಣಸಿಯಲ್ಲಿ ಹೆಲ್ಮೆಟ್ ವಿತರಿಸುವ ಮೂಲಕ ಜೀವ ಉಳಿಸುತ್ತಿದ್ದಾರೆ. ಅದೇ ರೀತಿ, ಎನ್ ಎಸ್ ರಾಜಪ್ಪನ್ ಅವರು ಕೊಟ್ಟಾಯಂನಲ್ಲಿ ಪರಿಸರವನ್ನು ಉಳಿಸಲು ತ್ಯಾಜ್ಯ ತೆಗೆದು ಕೆರೆ ಸಂರಕ್ಷಿಸುತ್ತಿದ್ದಾರೆ.

## ಪುಸ್ತಕಕ್ಕೆ ಶಿರಸ್ತ್ರಾಣ



ರಸ್ತೆ ಅಪಘಾತದಲ್ಲಿ ತಮ್ಮ ಗೆಳೆಯನನ್ನು ಕಳೆದುಕೊಂಡ ಬಳಿಕ ರಾಘವೇಂದ್ರ ಇತರರ ಜೀವ ಉಳಿಸಲು ಹೆಲ್ಮೆಟ್ (ಶಿರಸ್ತ್ರಾಣ) ವಿತರಣೆಯನ್ನು ತಮ್ಮ ಬದುಕಿನ ಧ್ಯೇಯವಾಗಿಸಿಕೊಂಡಿದ್ದಾರೆ. ಈ ಉಪಕ್ರಮದಿಂದ ಅವರು ಹೆಲ್ಮೆಟ್ ಮನುಷ್ಯ ಎಂದೇ ಖ್ಯಾತರಾಗಿದ್ದಾರೆ ಮತ್ತು ಮನೆ ಮಾತಾಗಿದ್ದಾರೆ. ರಾಘವೇಂದ್ರ ಹೆಲ್ಮೆಟ್ ಗೆ ಬದಲಾಗಿ ಪುಸ್ತಕ ಪಡೆಯುತ್ತಾರೆ. ಅಷ್ಟೇ ಅಲ್ಲ ಅವರು ಹೆಲ್ಮೆಟ್ ನೀಡಿದ ವ್ಯಕ್ತಿಯಿಂದ ತಾವು ಇನ್ನೆಂದೂ ಹೆಲ್ಮೆಟ್ ಇಲ್ಲದೆ ವಾಹನ ಚಲಾಯಿಸುವುದಿಲ್ಲ ಮತ್ತು ಇತರರಿಗೂ ವಾಹನ ಚಾಲನೆ ಮಾಡುವಾಗ ಹೆಲ್ಮೆಟ್ ಧರಿಸುವಂತೆ ಪ್ರೇರೇಪಿಸುತ್ತೇನೆ ಎಂದು ಪ್ರಮಾಣವನ್ನೂ ಮಾಡಿಸುತ್ತಾರೆ. ರಾಘವೇಂದ್ರ ಅವರ ಗೆಳೆಯ ರಸ್ತೆ ಅಪಘಾತದಲ್ಲಿ ಮೃತಪಟ್ಟರು, ಇದು ಅವರಿಗೆ ಆಘಾತ ತಂದಿದೆ. ದುರ್ಘಟನೆಯ ಬಳಿಕ, ಅವರು ಜನರಲ್ಲಿ ಜಾಗೃತಿ ಮೂಡಿಸಲು ನಿರ್ಧರಿಸಿದರು. ಅವರು ತಮ್ಮ ಕೆಲಸ ಬಿಟ್ಟು, ಉಚಿತವಾಗಿ ಹೆಲ್ಮೆಟ್ ವಿತರಿಸುವ ಅಭಿಯಾನ ಆರಂಭಿಸಿದರು. ಅಂದಾಜಿನ ರೀತ್ಯ, ಪ್ರತಿ ವರ್ಷ 1.5 ಲಕ್ಷ ಜನರು ರಸ್ತೆ ಅಪಘಾತಗಳಲ್ಲಿ ಅಸುನೀಗುತ್ತಿದ್ದಾರೆ. ಈ ಪೈಕಿ 50 ಸಾವಿರ ಜನರು ಹೆಲ್ಮೆಟ್ ಧರಿಸದ ಕಾರಣಕ್ಕೆ ಸಾಯುತ್ತಿದ್ದಾರೆ.

## ಕೆರೆಯಿಂದ ತ್ಯಾಜ್ಯ ತೆಗೆಯುವ ಮೂಲಕ ಪರಿಸರ ಸಂರಕ್ಷಣೆ



ಎನ್.ಎಸ್. ರಾಜಪ್ಪನ್ ಕೇರಳದ ಕೊಟ್ಟಾಯಂನ ದಿವ್ಯಾಂಗ ವ್ಯಕ್ತಿ, ಇವರಿಗೆ ನಡೆಯಲು ಆಗುವುದಿಲ್ಲ. ಆದಾಗ್ಯೂ, ಅವರು ವೆಂಬನಾಡು ಕೆರೆಗೆ ಹೋಗಿ ದೋಣಿಯಲ್ಲಿ ಕುಳಿತು ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹಿಸುತ್ತಾರೆ. ರಾಜಪ್ಪನ್ ಪಾರ್ಶ್ವವಾಯು ಪೀಡಿತರಾಗಿದ್ದು ಅವರಿಗೆ ನಡೆಯಲು ಆಗುವುದಿಲ್ಲ. ಅವರು ಕೆರೆಯಿಂದ ತ್ಯಾಜ್ಯ ತೆಗೆಯಲು ತಮ್ಮ ಕೈ ಬಳಸುತ್ತಾರೆ. ಇತ್ತೀಚೆಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ತಮ್ಮ ಮಾಸಿಕ ರೇಡಿಯೋ ಕಾರ್ಯಕ್ರಮ ಮನ್ ಕಿ ಬಾತ್ ನಲ್ಲಿ ರಾಜಪ್ಪನ್ ಅವರ ಬಗ್ಗೆ ಹೇಳಿ ಅವರ ಕಾರ್ಯ ಶ್ಲಾಘಿಸಿದ್ದರು. ವೆಂಬನಾಡು ಕೆರೆಯ ಸೌಂದರ್ಯ ವಿಶ್ವಾದ್ಯಂತದ ಪ್ರವಾಸಿಗರನ್ನು ಸೆಳೆಯುತ್ತಿದೆ. ಅವರ ಕಠಿಣ ಪರಿಶ್ರಮ ಮತ್ತು ಬದ್ಧತೆಯ ಫಲವಾಗಿ ಕೆರೆ ಸ್ವಚ್ಛವಾಗಿದೆ. ರಾಜಪ್ಪನ್ ತಮ್ಮ ಕಾರ್ಯ ಮತ್ತು ಉಪಕ್ರಮದಿಂದ ಇತರರಿಗೆ ಪ್ರೇರಣೆಯಾಗಿದ್ದಾರೆ. ■




# 67 ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ –2019

**67ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳನ್ನು ಪ್ರಕಟಿಸಲಾಗಿದೆ. 2020ರ ಮೇ 3ರಂದು ಕೊರೊನಾ ಸಾಂಕ್ರಾಮಿಕದ ಹಿನ್ನೆಲೆಯಲ್ಲಿ ಬಹುತೇಕ ಒಂದು ವರ್ಷಗಳ ಕಾಲ ಇದನ್ನು ಮುಂದೂಡಲಾಗಿತ್ತು. ಅಂತಿಮವಾಗಿ 2021ರ ಮಾರ್ಚ್ 22ರಂದು ರಾಷ್ಟ್ರೀಯ ಚಲನ ಚಿತ್ರ ಪ್ರಶಸ್ತಿಗಳ ತೀರ್ಪುಗಾರರ ಮಂಡಳಿಯ ನಿರ್ಧಾರ ಪ್ರಕಟಿಸಲಾಗಿದೆ.**



## ಕಂಗನಾ ರಾಣಾವತ್

ಅತ್ಯುತ್ತಮ ನಟಿ, ಮಣಿಕರ್ಣಿಕ - ಜಾನ್ಸಿಯ ರಾಣಿ ಮತ್ತು ಪಂಗಾ

ಕಂಗನಾ ಅವರು ಮಣಿಕರ್ಣಿಕ.. ಚಿತ್ರದ ನಟಿ ಮತ್ತು ನಿರ್ದೇಶಕಿ. ಅವರು ಪಂಗಾದಲ್ಲಿ ನಟಿ ಮಾತ್ರ. ಕಂಗನಾ ಅವರು ಈ ಹಿಂದೆ ಮೂರು ಬಾರಿ ರಾಷ್ಟ್ರೀಯ ಚಲನ ಚಿತ್ರ ಪ್ರಶಸ್ತಿ ವಿಜೇತರಾಗಿದ್ದಾರೆ.



ಸಿಕ್ಕಿಂಗೆ ಅತ್ಯಂತ ಹೆಚ್ಚು ಚಲನಚಿತ್ರ ಸ್ನೇಹಿ ರಾಜ್ಯ ಎಂದು ಬಹುಮಾನ ಘೋಷಿಸಲಾಗಿದೆ.







**ಮನೋಜ್ ಬಾಜಪೇಯಿ:** ಅತ್ಯುತ್ತಮ ನಟ ಹಿಂದಿ ಚಿತ್ರ ಭೋಂಸ್ಲೇ

**ಧನುಶ್:** ಅತ್ಯುತ್ತಮ ನಟ, ತಮಿಳು ಚಿತ್ರ ಅಸುರನ್

**ವಿಜಯ್ ಸೇತುಪತಿ:** ಅತ್ಯುತ್ತಮ ಪೋಷಕ ನಟ ತಮಿಳು ಚಿತ್ರ ಸೂಪರ್ ಡಿಲಕ್ಸ್

**ಪಲ್ಲವಿ ಜೋಶಿ:** ಅತ್ಯುತ್ತಮ ಪೋಷಕ ನಟಿ ಚಿತ್ರ ದಿ ತಾಶ್ಕೆಂಟ್ ಫೈಲ್ಸ್

**ಬಿ ಪಾರಕ್:** ಅತ್ಯುತ್ತಮ ಹಿನ್ನೆಲೆ ಗಾಯಕ, ತೇರಿ ಮಿಟ್ಟಿ ಮೆ.... ಕೇಸರಿ ಚಿತ್ರದ ಗೀತೆಯ ಗಾಯನಕ್ಕೆ

**ಸಾವನಿ ರವೀಂದ್ರ:** ಅತ್ಯುತ್ತಮ ಹಿನ್ನೆಲೆ ಗಾಯಕಿ ರನ್ ಪೆಟಾಲಾ... ಬರ್ದೋಶ್ ಚಿತ್ರದ ಗೀತೆಯ ಗಾಯನಕ್ಕೆ

**ಅತ್ಯುತ್ತಮ ಹಿಂದಿ ಚಿತ್ರ:** ಚಿಚೋರೆ, ದಿವಂಗತ ಸುಶಾಂತ್ ಸಿಂಗ್ ರಜಪೂತ್ ಪ್ರಮುಖ ಪಾತ್ರದಲ್ಲಿದ್ದಾರೆ.

ಪ್ರಶಸ್ತಿಯ ಸಂಪೂರ್ಣ ಪಟ್ಟಿಯನ್ನು ನೋಡಲು ಲಿಂಕ್ ಕ್ಲಿಕ್ ಮಾಡಿ
*https://pib.gov.in/PressReleasePage.aspx?PRID=1706663*

## ತಲೈವಾಗೆ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ

ದಕ್ಷಿಣ ಭಾರತದ ಚಿತ್ರತಾರೆ ಮತ್ತು ಚಿತ್ರೋದ್ಯಮದಲ್ಲಿ ತಲೈವ ಎಂದೇ ಖ್ಯಾತರಾದ, ರಜನಿಕಾಂತ್ ಅವರನ್ನು 51ನೇ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ತೀರ್ಪುಗಾರರ ಮಂಡಳಿಯ ಎಲ್ಲ ಐದು ಸದಸ್ಯರೂ ಅವಿರೋಧವಾಗಿ ಈ ಆಯ್ಕೆ ಮಾಡಿದ್ದಾರೆ. ಭಾರತ ಸರ್ಕಾರ ಈ ಪ್ರಶಸ್ತಿಯನ್ನು ದೇಶದ ಪ್ರಥಮ ಚಲನಚಿತ್ರ ರಾಜಾ ಹರಿಶ್ಚಂದ್ರ ನಿರ್ಮಿಸಿದ ದಾದಾ ಸಾಹೇಬ್ ಫಾಲ್ಕೆ ಅವರ ಹೆಸರಿನಲ್ಲಿ ನೀಡುತ್ತದೆ. ■





# ಸ್ಕ್ರ್ಯಾಪ್‌ಗೆ ಸ್ವರ್ಣ ಸ್ಪರ್ಶ!

ಎರಡೂ ಆವೃತ್ತಿಗಳು ಸೇರಿ ಮನ್ ಕಿ ಬಾತ್ ನ ಒಟ್ಟು 75ನೇ ಸಂಚಿಕೆ 75 ವರ್ಷಗಳ ಸ್ವಾತಂತ್ರ್ಯದ 'ಅಮೃತ ಮಹೋತ್ಸವ'ಪ್ರಾರಂಭದೊಂದಿಗೆ ಜೊತೆಯಾಗಿದೆ. ಹೀಗಾಗಿ, ಸ್ವಾತಂತ್ರ್ಯದ ಅಮೃತ ಮಹೋತ್ಸವ, ಪರಿಸರ ಸಂರಕ್ಷಣೆ, ಪ್ರವಾಸೋದ್ಯಮವನ್ನು ಉತ್ತೇಜಿಸಲು ಲೈಟ್ ಹೌಸ್ ಗಳು ಮತ್ತು ಕಾರ್ಬಿ ಭಾಷೆಯ ಸಂರಕ್ಷಣೆಯನ್ನೂ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಹೊಸ ಉಪಕ್ರಮಗಳು ಪ್ರಧಾನಮಂತ್ರಿಯವರ ಮನ್ ಕಿ ಬಾತ್‌ನಲ್ಲಿ ಸ್ಥಾನ ಪಡೆದವು. ಆಯ್ದ ಭಾಗಗಳು:

**ಅಮೃತ ಮಹೋತ್ಸವ:** ಅಮೃತ ಮಹೋತ್ಸವದ ಅಂಗವಾಗಿ ದೇಶದಾದ್ಯಂತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ; ಜನರು ಈ ಕಾರ್ಯಕ್ರಮಗಳ ಮಾಹಿತಿ ಮತ್ತು ಚಿತ್ರಗಳನ್ನು ಅನೇಕ ಕಡೆಗಳಿಂದ ಹಂಚಿಕೊಳ್ಳುತ್ತಿದ್ದಾರೆ.

**ಲಸಿಕಾ ಅಭಿಯಾನ:** 'ದವಾಯಿ ಭಿ, ಕಡಾಯಿ ಭಿ' ಪುನರುಚ್ಚಾರ! ಕಳೆದ ವರ್ಷ, ಈ ಸಮಯದಲ್ಲಿ, ಕರೋನಾ ಲಸಿಕೆ ಯಾವಾಗ ಬರುತ್ತದೆ ಎಂಬ ಪ್ರಶ್ನೆ ಇತ್ತು! ಸ್ನೇಹಿತರೇ, ಭಾರತವು ವಿಶ್ವದ ಅತಿದೊಡ್ಡ ಲಸಿಕಾ ಅಭಿಯಾನವನ್ನು ನಡೆಸುತ್ತಿರುವುದು ಎಲ್ಲರಿಗೂ ಗೌರವದ ಸಂಗತಿಯಾಗಿದೆ.

**ನಾರಿ ಶಕ್ತಿ:** ಶಿಕ್ಷಣದಿಂದ ಉದ್ಯಮಶೀಲತೆಯವರೆಗೆ, ಸಶಸ್ತ್ರ ಪಡೆಗಳಿಂದ ವಿಜ್ಞಾನ ಮತ್ತು ತಂತ್ರಜ್ಞಾನದವರೆಗೆ, ದೇಶದ ಹೆಣ್ಣುಮಕ್ಕಳು ಎಲ್ಲೆಡೆ ತಮ್ಮ ಛಾಪು ಮೂಡಿಸುತ್ತಿದ್ದಾರೆ. ಕ್ರೀಡೆ ಅವರ ಆಯ್ಕೆಯ ವೃತ್ತಿಯಾಗಿ ಹೊರಹೊಮ್ಮುತ್ತಿದೆ.

**ಲೈಟ್ ಹೌಸ್ ಪ್ರವಾಸೋದ್ಯಮ:** ನಾನು ಮನ್ ಕಿ ಬಾತ್ ನಲ್ಲಿ ಹಲವು ಬಾರಿ ಪ್ರವಾಸೋದ್ಯಮದ ಹಲವು ಅಂಶಗಳ ಬಗ್ಗೆ ಮಾತನಾಡಿದ್ದೇನೆ. ಆದರೆ, ಲೈಟ್ ಹೌಸ್ ಪ್ರವಾಸೋದ್ಯಮದಲ್ಲಿ ಅನನ್ಯವಾದುದಾಗಿದೆ. ಪ್ರವಾಸೋದ್ಯಮವನ್ನು ಉತ್ತೇಜಿಸಲು 71 ಲೈಟ್ ಹೌಸ್ ಗಳನ್ನು ಗುರುತಿಸಲಾಗಿದೆ. ಅವುಗಳ ಸಾಮರ್ಥ್ಯ, ವಸ್ತು ಸಂಗ್ರಹಾಲಯ, ಆಪ್ತ ರಂಗ ಮಂದಿರ, ಬಯಲು ರಂಗ ಮಂದಿರ, ಆಹಾರದ ತಾಣ, ಮಕ್ಕಳ ಉದ್ಯಾನ, ಪರಿಸರ ಸ್ನೇಹಿ ಗುಡಿಸಿಲುಗಳು ಮತ್ತು ಭೂರಮೆಯನ್ನು ನಿರ್ಮಿಸಲಾಗುತ್ತದೆ.

**ಜೇನು ಸಾಕಣೆ:** ಸಾಂಪ್ರದಾಯಿಕ ಕೃಷಿಯೊಂದಿಗೆ ಹೊಸ ಆವಿಷ್ಕಾರಗಳು, ಹೊಸ ಪರ್ಯಾಯಗಳನ್ನು ಅಳವಡಿಸಿಕೊಳ್ಳಬೇಕು, ಈಗ ಜೇನು ಸಾಕಣೆ ಇದೇ ರೀತಿಯ ಪರ್ಯಾಯವಾಗಿ ಹೊರಹೊಮ್ಮುತ್ತಿದೆ. ಜೇನು ಕೃಷಿ ದೇಶದಲ್ಲಿ ಜೇನು ಕ್ರಾಂತಿ ಅಥವಾ ಸಿಹಿ ಕ್ರಾಂತಿಯ ಅಡಿಪಾಯವಾಗುತ್ತಿದೆ. ಗುಜರಾತ್ ನ ಬನಸ್ಕಾಂತ ಜೇನು ಉತ್ಪಾದನೆಗೆ ಪ್ರಮುಖ ಕೇಂದ್ರವಾಗಿದೆ.

**ಪರಿಸರ:** ವಿಶ್ವ ಗುಬ್ಬಚ್ಚಿ ದಿನವನ್ನು ಇತ್ತೀಚೆಗೆ ಆಚರಿಸಲಾಯಿತು. ನಾವು ಅವುಗಳನ್ನು ಉಳಿಸುವ ಅಗತ್ಯವಿದೆ. ವಾರಾಣಸಿಯಲ್ಲಿರುವ ಇಂದ್ರಪಾಲ್ ಸಿಂಗ್ ಬಾತ್ರ ಎಂಬುವವರು ಈ ನಿಟ್ಟಿನಲ್ಲಿ ಉದಾತ್ತ ಪ್ರಯತ್ನ ಮಾಡುತ್ತಿದ್ದು, ತಮ್ಮ ಸ್ವಂತ ಮನೆಯನ್ನು ಗುಬ್ಬಚ್ಚಿಗಳಿಗೆ ಗೂಡಾಗಿ ಮಾಡಿದ್ದಾರೆ. ಇದೇ ರೀತಿ ಬರಾಕೋಟ್ ಗ್ರಾಮದ ಬಿಜೋಯ್ ಜೀ ಅವರು ಗ್ರಾಮದ ಹೊರವಲಯದಲ್ಲಿ ಸಮುದ್ರದ ಕಡೆ ಇರುವ 25 ಎಕರೆ ಉಷ್ಣವಲಯ ಪ್ರದೇಶವನ್ನು ಅರಣ್ಯವಾಗಿ ಬೆಳೆಸಿದ್ದಾರೆ. ಎಂಜಿನಿಯರ್ ಅಮ್ರೇಶ್ ಸಮಂತ್ ಜೀ ಒಡಿಶಾದ ಪಾರಾದೀಪ್ ಜಿಲ್ಲೆಯಲ್ಲಿ ಇದೇ ರೀತಿಯ ಕೆಲಸವನ್ನು ಮಾಡಿದ್ದಾರೆ. ಅಮ್ರೇಶ್ ಜೀ ಸೂಕ್ಷ್ಮ ಕಾಡುಗಳನ್ನು ಬೆಳೆಸಿದ್ದು, ಅವು ಅನೇಕ ಗ್ರಾಮಗಳನ್ನು ರಕ್ಷಿಸುತ್ತಿವೆ. ತಮಿಳುನಾಡಿನ ಕೊಯಮತ್ತೂರಿನಲ್ಲಿ ಬಸ್ ಕಂಡಕ್ಟರ್ ಆಗಿ ಕೆಲಸ ಮಾಡುತ್ತಿರುವ ಮಾರಿಮುತ್ತು ಯೋಗನಾಥನ್ ತಮ್ಮ ಬಸ್ ಪ್ರಯಾಣಿಕರಿಗೆ ಟಿಕೆಟ್ ನೀಡುವಾಗ ಉಚಿತವಾಗಿ ಒಂದು ಸಸಿಯನ್ನು ಸಹ ನೀಡುತ್ತಾರೆ. ಇದೇ ರೀತಿಯಲ್ಲಿ, ಯೋಗನಾಥಂ ಜೀ ಅವರು ಅಸಂಖ್ಯಾತ ಗಿಡಗಳನ್ನು ನೆಟ್ಟಿದ್ದಾರೆ!

**ತ್ಯಾಜ್ಯದಿಂದ ಮೌಲ್ಯ:** ಕೇರಳದ ಕೊಚ್ಚಿಯಲ್ಲಿರುವ ಸೇಂಟ್ ತೆರೇಸಾ ಕಾಲೇಜಿನ ವಿದ್ಯಾರ್ಥಿಗಳು ಮರುಬಳಕೆ ಮಾಡಬಹುದಾದ ಆಟಿಕೆಗಳನ್ನು ತಯಾರಿಸುತ್ತಿದ್ದಾರೆ. ಈ ವಿದ್ಯಾರ್ಥಿಗಳು ಹಳೆಯ ಬಟ್ಟೆಗಳು, ಕತ್ತರಿಸಿದ ಮರದ ತುಂಡುಗಳು, ಚೀಲಗಳು ಮತ್ತು ಪೆಟ್ಟಿಗೆಗಳನ್ನು ಆಟಿಕೆಗಳಾಗಿ ಪರಿವರ್ತಿಸುತ್ತಿದ್ದಾರೆ. ವಿಜಯವಾಡದ ಪ್ರೊಫೆಸರ್ ಶ್ರೀನಿವಾಸ ಪದಕಂಡ್ಲ ಅವರು ವಾಹನಗಳ ಸ್ಕ್ರ್ಯಾಪ್ ನಿಂದ ಶಿಲ್ಪಗಳನ್ನು ರಚಿಸುತ್ತಿದ್ದಾರೆ. ಈ ಶಿಲ್ಪಗಳನ್ನು ಸಾರ್ವಜನಿಕ ಉದ್ಯಾನವನಗಳಲ್ಲಿ ಸ್ಥಾಪಿಸಲಾಗಿದೆ. ಇದೊಂದು ನಾವಿನ್ಯಪೂರ್ಣ ಪ್ರಯೋಗವಾಗಿದೆ.

**ಸ್ಥಳೀಯ ಭಾಷೆ:** ಕಾರ್ಬಿಯ ಅಂಗ್ಲಾಂಗ್ ಜಿಲ್ಲೆಯ ಸಿಕ್ರಿ ತಿಸೌ ಜೀ ಅವರು ಕಳೆದ 20 ವರ್ಷಗಳಿಂದ ಕಾರ್ಬಿ ಭಾಷೆಯನ್ನು ದಾಖಲಿಸುತ್ತಿದ್ದಾರೆ. ಶ್ರೀಮನ್ ಸಿಕ್ರಿ ತಿಸೌ ಜೀ ಅವರು ತಮ್ಮತನ ರಕ್ಷಿಸಲು ನಿರ್ಧರಿಸಿದರು... ಮತ್ತು ಇಂದು ಅವರ ಪ್ರಯತ್ನ ಕಾರ್ಬಿ ಭಾಷೆಯ ಬಗ್ಗೆ ಹೆಚ್ಚಿನ ಮಾಹಿತಿಯ ದಾಖಲಾತಿಗೆ ಕಾರಣವಾಗಿದೆ.

ಕ್ಯು.ಆರ್. ಕೋಡ್ ಸ್ಕ್ಯಾನ್ ಮಾಡಿ ಮನ್ ಕಿ ಬಾತ್ ಆಲಿಸಿ



**Narendra Modi** @narendramodi · 3d
How to make exam preparation fun?
Is there anything interesting we can do sitting at home while preparing?
There is a solution to this...an all new #ExamWarriors module on the NaMo App.
It has many interactive activities for students and parents.
narendramodi.in/examwarriors



**Rajnath Singh** @rajnathsingh
Congratulations to @DRDO_India and DMSRDE Kanpur for developing this BP jacket. India needs more such innovative product design and development to realise the dream of #AtmaNirbharBharat



**Amit Shah** @AmitShah
Rajnikanth ji is a true legend, a versatile actor, whose acting and cinematic talent has millions of fans across the world. I join our countrymen in congratulating Shri @rajinikanth Ji for being conferred the prestigious Dadasaheb Phalke Award.



**Nitin Gadkari** @nitin_gadkari ·
Under PMEGP, about 6 Lakh new employment was created in 2020-21 and loans to about 1 Lakh new micro units in manufacturing and service sectors was disbursed.






**Thawarchand Gehlot** @TCGE...
देश में सामाजिक समरसता स्थापित करने में अपनी अग्रणी भूमिका निभाते हुए सर्वस्व न्योछावर कर देने वाले और समाज की अंतिम पंक्ति में बैठे लोगों के कल्याण और न्याय की आवाज उठाने वाले महानायक भारत रत्न बाबा साहब डॉ. भीमराव अंबेडकर जी की जयंती 14 अप्रैल को राष्ट्रीय अवकाश घोषित किया है।



**Gajendra Singh Shekhawat** @...
It is stories like these that make #JalJeevanMission special.
15256 feet above sea level where -10 degrees is sunny and winters leave everything frozen, JJM installed first household tap water connection in Sept 2020 and brought joy to people braving these extreme conditions.

75TH M...

# Modernising agri sector is need of the hour: PM

HARIKISHAN SHARMA
NEW DELHI, MARCH 28

MODERNISING THE agriculture sector is the "need of the hour" and the country has already lost a lot of time in doing this, Prime Minister Narendra Modi said on Sunday.

On the 75th episode of his monthly 'Mann Ki Baat' radio programme, he said: "Modernization is essential in all fields of life, otherwise it becomes a burden at times. In India's agriculture sector, modernization is the need of the hour. It's very late, we have already lost a lot of ...



Important to adopt innovations: PM Modi

... or sweet revolution in the country. Farmers, in large numbers, are associating with it; innovating," Modi said.

During the 32-minute programme, the Prime Minister narrated several examples of farmers adopting new methods to increase their income.

"For instance, in ...

... exported to foreign countries."

Modi stated that bee farming does not lead to income solely from honey, but bee wax is also a very big source of income.

"Our country currently imports bee wax, but our farmers are now rapidly transforming this situation…that is, in a way contributing in the 'Atmanirbhar Bharat' campaign," he said.

The Prime Minister spoke about the 'Amrit Mahotsav' being celebrated to mark the 75th anniversary of In... pendence.

# ... key bilateral pacts

HT Correspondent
letters@hindustantimes.com

NEW DELHI: Prime Minister Narendra Modi and his Bangladesh counterpart Sheikh Hasina on Saturday reviewed progress in development and connectivity initiatives even as the two countries signed five agreements in areas ranging from trade to disaster management.

On the second and final day of his first foreign visit since the coronavirus disease outbreak last year, Modi held one-on-one talks with Hasina in Dhaka, followed by delegation-level talks that lasted more than an hour. The two leaders discussed ...



Prime Minister Narendra Modi hands over a box of Covid-19 vaccines to Bangladesh PM Sheikh Hasina. PTI

... to come," Modi ... e new MoUs will ... to the develop... rship and benefit ... of the two sides, ... youth, he said. ... ed over a symbolic

# With 7.3 lakh tests/million, Delhi tops screening list

## Amid Surge In Cases, Covid Tests Up 38% Nationally In 2 Weeks

Pradeep.Thakur
@timesgroup.com

New Delhi: States seem to have taken the surge in coronavirus infections seriously with tests for Covid-19 going up by more than 38% over the last two weeks compared to the first half of March. Countrywide, the total samples tested have gone up from 97.89 lakh between March 1-14 to 1.35 crore during March 14-27. ... Maharashtra, ... where the (confirmed ...




... lakh), Telangana (2.70 lakh) and Tamil Nadu (2.56 lakh). Chhattisgarh, Uttar Pradesh, Maharashtra, Gujarat and Punjab rank lower in the order with 1.5-2 lakh tests per million, registered till Tuesday. At 94,000 tests/million, West Bengal scores one of lowest among states Union Territories.

The Centre has ... sised that the 'T3 mant... Testing, Tracing and ... ing—emphasised by the ... tre can not only bring ... infections but also the ... ty rate. Besides Mahar... which has reported ... than half of all the ... cases in the country ... last few days, Pun... ... Pradesh ...

# Cabinet nod to ₹10,900-crore PLI for food processing sector

Six-year plan to incentivise manufacturing in four segments; MSMEs to benefit, too

OUR BUREAU
New Delhi, March 31

To expand food processing capacity and support Indian brands to increase visibility in international markets, the Cabinet on Wednesday gave its nod to a Production-Linked Incentive scheme for the food processing sector with an outlay of ₹10,900 crore.

This scheme will be implemen...

# Delhi to Dhaka: Bridging distance with friendship

FROM MUSEUM the fallen Indian soldiers in 1971 war to mutual friendship and exhibit, a look at some of the key outcomes of Prime Minister Narendra Modi's Bangladesh visit:

■ Tribute to Indian martyrs of Bangladesh Liberation War: Foundation stone unveiled for the first memorial honoring martyrs from the Indian armed forces. This is to be built at Ashuganj. This is the first memorial in Bangladesh ...

■ Launch of an India-Bangladesh friendship stamp to commemorate the 50th anniversary of establishment of India-Bangladesh diplomatic relations.

■ Cooperation against Covid-19: Gift of 1.2 million Covid19 vaccine doses. Bangladesh is the largest foreign recipient of India-made Covid19 vaccines – 10.2 million doses have been delivered by India, including 3.2 million as gift.

■ 109 life support ambulances gifted to Bangladesh to support ...

Delhi University to facilitate Bangladesh studies announced.

Prime Minister Modi visited the historic Jashoreshwari Temple in Shyamnagar, Satkhira. He announced that India will build a community hall-cum-cyclone shelter under grant funding of GOI at Shyamnagar.

■ At Orakandi, Modi announced that India will build a primary school for children and upgrade a middle school for girls under Indian government's funding.

RNI No. :
DELKAN/2020/78828
April: 16-30, 2021

ನ್ಯೂ ಇಂಡಿಯಾ
ಸಮಾಚಾರ
ಪಾಕ್ಷಿಕ

RNI Registered No DELKAN/2020/78828, Delhi Postal License No DL(S)-1/3543/2020-22, WPP NO U (S)-91/2020-22, posting at BPC, Meghdoot Bhawan, New Delhi - 110 001 on 13-17 advance Fortnightly (Publishing Date April 5, 2021, Pages - 44)

# Nainital Farmer Kheemanand Writes to PM on Crop Insurance Scheme, PM Writes Back!

Dear Kheemanandji,

Thank you for sharing your valuable views on the continuing efforts being made by the Govt to improve various sectors, including agriculture, and take the country to new heights of development. Crores of farmers are availing the benefits of PM Fasal Bima Yojana, a farmer-friendly insurance scheme, today. The scheme has emerged as an example of our determined efforts for farmers' welfare. **Sustained efforts are being made to remove every difficulty in the way of the farmers' journey from the 'seed to market' & to ensure their prosperity & progress of agriculture.** Today, the country is rapidly moving towards building a strong, prosperous & self-reliant India with a vision of all-round development.

नरेन्द्र मोदी





**ಸಂಪಾದಕ**
**ಜೈದೀಪ್ ಭಟ್ನಾಗರ್**
ಪ್ರಧಾನ ಮಹಾನಿರ್ದೇಶಕರು,
ಪಿಐಬಿ, ನವದೆಹಲಿ

**ಮುದ್ರಕರು ಮತ್ತು ಪ್ರಕಾಶಕರು**
**ಸತ್ಯೇಂದ್ರ ಪ್ರಕಾಶ್,**
ಪ್ರಧಾನ ಮಹಾನಿರ್ದೇಶಕರು,
ಬ್ಯೂರೋ ಆಫ್ ಔಟ್ ರೀಚ್ ಅಂಡ್ ಕಮ್ಯೂನಿಕೇಷನ್ ಪರವಾಗಿ

**ಪ್ರಕಾಶಕರು**
**ಬ್ಯೂರೋ ಆಫ್ ಔಟ್ ರೀಚ್ ಅಂಡ್ ಕಮ್ಯೂನಿಕೇಷನ್**
**2ನೇ ಮಹಡಿ, ಸೂಚನಾ ಭವನ,**
**ನವದೆಹಲಿ – 110003**

**ಮುದ್ರಣ:**
ಇನ್‌ಫಿನಿಟಿ ಅಡ್ವರ್ಟೈಸಿಂಗ್ ಸರ್ವಿಸಸ್ ಪ್ರೈ. ಲಿಮಿಟೆಡ್
ಎಫ್‌ಬಿಡಿ–ಒನ್ ಕಾರ್ಪೋರೇಟ್ ಪಾರ್ಕ್, 10ನೇ ಮಹಡಿ,
ನವದೆಹಲಿ–ಫರೀದಾಬಾದ್ ಬಾರ್ಡರ್
ಎನ್‌ಹೆಚ್–1 ಫರೀದಾಬಾದ್–121003

Kannada Issue 20